ಗೌರಿ ಲಂಕೇಶರ

ಲಂಕೇಶ್


ಜೂನ್ 27, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ




'ಆನು ದೇವಾ'

ಖಾದಿ-ಕಾವಿಗಳ ಹುಚ್ಚಾಟ








ಕುಮಾರನ ಮಂಗಾಟ ರೈತರ ಸಂಕಟ

ಆತ್ಮಹತ್ಯೆಗಳ ಸುತ್ತ ಪ್ರತ್ಯಕ್ಷ ವರದಿ



ಂಗಳೂರು ವಿ.ವಿ.

ಮೈಲಾರಿ ಮಹಾತ್ಮೆ!

ರಜನಿಗೆ ಇಂಗ್ಲಿಷ್ ಹುಡುಗಿಯ ಬಿಳಿ ಚರ್ಮ!



ಎಂಜಲು ಕೈಯಲ್ಲೂ ಕಾಗೆ ಹೊಡೆಯಲು ಒಲ್ಲದ ಭಾರತದ ಶ್ರೀಮಂತರು!!

ಚಾರ್ವಾಕ - ಶಿವಸುಂದರ್-

ಮೊನ್ನೆ ಪ್ರಧಾನಿ ಮನಮೋಹನ ಸಿಂಗರು ಭಾರತದ ಅತಿ ಶ್ರೀಮಂತ ಉದ್ಯಮಪತಿಗಳ ಸಂಸ್ಥೆಯಾದ ಕನ್ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರೀಸ್ (ಸಿಐಐ)ರವರ ಸಭೆಯೊಂದರಲ್ಲಿ ಎಲ್ಲರನ್ನೂ ಒಳಗೊಳ್ಳಬೇಕಾದ ಅಭಿವೃದ್ಧಿ ಎಂಬ ವಿಷಯದ ಬಗ್ಗೆ ಸುದೀರ್ಘ ಉಪನ್ಯಾಸವನ್ನು ಕೊಟ್ಟರು. ಅದರಲ್ಲಿ ಅವರು ಬಡವರಿಗೂ ಅಭಿವೃದ್ಧಿಯ ಫಲ ದೊರಕುವಂತೆ ಮಾಡಲು ಈ ಅತಿ ಶ್ರೀಮಂತರು ಏನು ಮಾಡಬೇಕೆಂಬ ಬಗ್ಗೆಯಾಗಲೀ, ಈಗ ಭಾರತವು ಅನುಸರಿಸುತ್ತಿರುವ ಅಭಿವೃದ್ಧಿ ಪಥದಲ್ಲಿ ಬಡವರನ್ನು ಒಳಗೊಳ್ಳುವುದು ಹೇಗೆ ಎಂಬ ಬಗ್ಗೆಯಾಗಲೀ ಯಾವುದೇ ಸಲಹೆಯನ್ನು ನೀಡಲಿಲ್ಲ. ಬದಲಿಗೆ ಶ್ರೀಮಂತರ ಈ ಅತಿ ಸಂಪನ್ನತೆ ಬಡವರ ಕಣ್ಣುಕುಕ್ಕಿ ಅವರು ಅದನ್ನು ಕಿತ್ತುಕೊಳ್ಳದಂತೆ ಮಾಡಲು ಈ ಉದ್ಯಮಪತಿಗಳು ತಮ್ಮ ಸಂಬಳಕ್ಕೊಂದು ಮಿತಿಯನ್ನು ಹಾಕಿಕೊಳ್ಳಬೇಕು, ಮತ್ತು ಸಂಪತ್ತಿನ ಅತಿ ನಗ್ನ ಪ್ರದರ್ಶನ ಮಾಡಬಾರದು, ಏಕೆಂದರೆ ಹಾಗೆ ಮಾಡಿದರೆ ಅದು ಬಡವರ ನಿರ್ಗತಿಕತನವನ್ನು ಲೇವಡಿ ಮಾಡಿದ ಹಾಗಾಗುತ್ತದೆ ಎಂದು ಸಂಪೂರ್ಣವಾಗಿ ಉದ್ಯಮಪತಿಗಳ ಹಿತಾಸಕ್ತಿಯನ್ನೇ ಗಮನದಲ್ಲಿಟ್ಟುಕೊಂಡು ಕೆಲವು ಹಿತವಚನವನ್ನು ಆಡಿದರು.

ಅವರ ಸಲಹೆಯ ಸಾರಾಂಶವಿಷ್ಟೆ: *"ಹಂಚಿ ತಿನ್ನದಿದ್ದರೂ ಪರವಾಗಿಲ್ಲ, ಬಚ್ಚಿಟ್ಟುಕೊಂಡು ತಿನ್ನಿ."* ಜಾಗತೀಕರಣದ ರಥಚಕ್ರಕ್ಕೆ ಸಿಕ್ಕಿ ಹುಡಿಯಾಗುತ್ತಿರುವ ಈ ದೇಶದ ಕೋಟ್ಯಂತರ ಬಡವರ ದೃಷ್ಟಿಯಿಂದ ನೋಡಿದಲ್ಲಿ ಇದು ಪ್ರಧಾನಿಯೊಬ್ಬ ಈ ದೇಶದ ಮಹಾಜನತೆಯ ವಿರುದ್ಧ ಉದ್ಯಮಪತಿಗಳ ಜೊತೆ ಸೇರಿ ಮಾಡಿದ ದ್ರೋಹವೇ.

ಆದರೆ ವಿಪರ್ಯಾಸವೆಂದರೆ ತಮ್ಮ ಪರವಾಗಿಯೇ ಹಿತಚಿಂತನೆ ಮಾಡಿದ ಈ ಭಾಷಣದ ಬಗ್ಗೆ ಉದ್ಯಮಪತಿಗಳು ಸಂತೋಷಗೊಳ್ಳುವ ಬದಲು ಕುಪಿತಗೊಂಡಿದ್ದಾರೆ. ಏಕೆಂದರೆ ಅವರು ಬಚ್ಚಿಟ್ಟುಕೊಂಡು ತಿನ್ನಲೂ ಸಿದ್ಧರಿಲ್ಲ. ಏಕೆಂದರೆ ಸುತ್ತಲೂ ಬಡತನವಿದ್ದಾಗ ತಾವು ಮಾತ್ರ ಶ್ರೀಮಂತರಾಗುವುದು ಈ ಹಿಂದೆ ಒಂದು ನೈತಿಕ ಪ್ರಶ್ನೆಯಾದರೂ ಆಗುತ್ತಿತ್ತು. ಆದರೆ ಇಂದು ಜಾಗತೀಕರಣದ ಸಂದರ್ಭದಲಿ ಸೃಷ್ಟಿಯಾಗುತ್ತಿರುವ ಸಂಪತ್ತಿಗೆ ಯಾವುದೇ ನೈತಿಕತೆಯಿಲ್ಲ, ಏಕೆಂದರೆ ಅದು ಸೃಷ್ಟಿಯಾಗುತ್ತಿರುವುದು ಅಭಿವೃದ್ಧಿಗೆ ಮತ್ತು ಸಾಮಾಜಿಕ ಜೀವನಕ್ಕೆ ಯಾವುದೇ ಸಿದ್ಧಾಂತದ ಅಗತ್ಯವಿಲ್ಲ ಎಂಬ ವಾತಾವರಣದಲ್ಲಿ. ಹೀಗಾಗಿ ಯಾವುದೇ ನೀತಿ ಮತ್ತು ಜವಾಬ್ದಾರಿಗಳಿಗೆ ಉದ್ಯಮವೂ ಬದ್ಧವಾಗಲು



ಸಿದ್ಧವಿಲ್ಲ. ಬದಲಿಗೆ ಈ ರೀತಿಯ ಚಿಂತನೆಯೇ ಅಭಿವೃದ್ಧಿಗೆ ಮಾರಕ ಮತ್ತು ದೇಶದ ಹಿತಾಸಕ್ತಿಗೆ ಮಾರಕ ಎಂಬುದು ಅವರ ನಿಲುವು. ಆದ್ದರಿಂದಲೇ ಎಂಜಲು ಕೈಯಲ್ಲಾದರೂ ಕಾಗೆ ಓಡಿಸಿ ಎಂಬ ತತ್ವವೂ ಆರ್ಥಿಕ ಸುಧಾರಣೆಯ ಮಾರ್ಗಕ್ಕೆ ಮಾರಕ ಎಂಬುದೇ ಅವರ ತತ್ವ. ಬಡವರು ಬಡವರಾಗಿರಲು ಕಾರಣ ತಮಗಿರುವಂತಹ ಜ್ಞಾನ ಆಡಳಿತ ಪ್ರಜ್ಞೆ ಅವರಿಗೆ ಇಲ್ಲದಿರುವುದು ಎಂಬುದೇ ಅವರ ಸಿದ್ಧಾಂತ. ಹೀಗಾಗಿ ಬಡತನಕ್ಕೆ ಕರುಣೆ ತೋರಬಾರದು. ಬದಲಿಗೆ ಶ್ರೀಮಂತಿಕೆ ಇನ್ನಷ್ಟು ಬೆಳೆಯಲು ಬಿಡಬೇಕು ಅನ್ನುವುದು ಅವರ ಕಾರ್ಯಸೂಚಿ. ಪ್ರಭುತ್ವದ ಜೊತೆಗೆ ತಾವೂ ಕೈಜೋಡಿಸಿ ಬಡತನ ನಿವಾರಣೆ ಮಾಡಲು ರೆಡಿ. ಪ್ರಭುತ್ವಗಳು ಏಕೆ ಬಡತನ ನಿವಾರಣೆ ಮಾಡಲಾಗುತ್ತಿಲ್ಲ ಎಂದರೆ ಸಂಪನ್ಮೂಲಗಳಿಲ್ಲ ಎಂಬ ಕಾರಣಕ್ಕಲ್ಲ, ಬದಲಿಗೆ ಸಂಪನ್ಮೂಲಗಳ ನಿರ್ವಹಣೆ ಮಾಡುವ ಆಡಳಿತ ಪ್ರಜ್ಞೆ ಇಲ್ಲ ಎಂಬ ಕಾರಣಕ್ಕೆ! ಪ್ರಾಯಶಃ ಪ್ರಭುತ್ವಕ್ಕೆ ಆ ಕೌಶಲ್ಯ ದಕ್ಕದೇ ಹೋಗುವುದಕ್ಕೆ ಕಾರಣ ಮೀಸಲಾತಿಯಿಂದಾಗಿ ಎಂಬುದೂ ಅವರ ವಾದ ವಿವೇಚನೆ.

ಇಂಥ ಶ್ರೀಮಂತರನ್ನು ನೋಡಿಯೇ ಅಲ್ಲವೇ ಹಿಂದಿನವರು ಗಾದೆ ಮಾಡಿದ್ದು: *"ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ!!"*

ಭಾರತದ ಜನಿವಾರಕ್ಕೆ ಅಮೆರಿಕದ ಶಿಲುಬೆ!!

ಬ್ರಾಹ್ಮಣರು ಭಾರತದಲ್ಲಿ ತಮ್ಮನ್ನು ತಾವು ದ್ವಿಜೋತ್ತಮರೆಂದೂ, ತಾವು ಮಾತ್ರ ಸತ್ಕುಲ ಪ್ರಸೂತರು ಮತ್ತು ಸಂಸ್ಕಾರವಂತರೆಂದೂ, ಸಕಲ ವಿದ್ಯಾ ಪಾರಂಗತರೆಂದೂ, ಭೂಸುರರೆಂದೂ ಹೇಳಿಕೊಳ್ಳುತ್ತಾರೆ. ಅದನ್ನು ಒಪ್ಪಿಕೊಳ್ಳದವರು ಹಿಂದೂಗಳೂ ಅಲ್ಲ, ಭಾರತೀಯರೂ ಅಲ್ಲವೆಂದು ಹೇಳುತ್ತಾರೆ. ಅದನ್ನು ವಿರೋಧಿಸುವವರನ್ನು ಧರ್ಮದ್ರೋಹಿ ಮತ್ತು ದೇಶದ್ರೋಹಿಗಳೆಂದೂ ಕರೆದುಬಿಡುತ್ತಾರೆ. ಏಕೆಂದರೆ ಅವರ ಪ್ರಕಾರ ಇಂಡಿಯಾ ಅಂದರೆ ಹಿಂದೂಗಳು ಮತ್ತು ಹಿಂದೂಗಳು ಅಂದರೆ ಬ್ರಾಹ್ಮಣರು, ಅಷ್ಟೆ. ಈಗ ಈ ಭೂಸುರರಿಗೆ ಈ ಭೂಲೋಕದ ಅಮರಾವತಿಗೆ ಪ್ರವೇಶ ಸಿಗುವುದು ಕಷ್ಟವಾಗಿದೆ. ಪರಲೋಕದ ಅಮರಾವತಿಯ ಸಂಪೂರ್ಣ ಏಕಸ್ವಾಮ್ಯ ಈ ಭೂಸುರರೇ ಇಟ್ಟುಕೊಂಡಿರಬಹುದು. ಆದರೆ ಈ ಭೂಲೋಕದ ಅಮರಾವತಿಯಾದ ಅಮೆರಿಕದಲ್ಲಿ ಈ ಭೂಸುರರ ಸ್ಮೃತಿಗಳು ನಡೆಯುವುದಿಲ್ಲವಲ್ಲ. ಅಮೆರಿಕದ ಕಾನೂನೊಂದರ ದಿಸೆಯಿಂದ ಈಗ ಭಾರತೀಯ ಬ್ರಾಹ್ಮಣ ಪುರೋಹಿತರು ಒಂದು 'ಕಷ್ಟ'ದಲ್ಲಿ ಸಿಕ್ಕಿಹಾಕಿಕೊಂಡು ಭೂಲೋಕ ಮತ್ತು ಪರಲೋಕದ ಸ್ವಾಮ್ಯವನ್ನು ಕಳೆದುಕೊಳ್ಳುವ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದಾರೆ.

ಭಾರತೀಯರು ಎಲ್ಲಿ ಹೋದರೂ ತಮ್ಮ ತಮ್ಮ ಜಾತಿಯನ್ನು ಮತ್ತು ತಮ್ಮ ತಮ್ಮ ದೈವಗಳನ್ನೂ ಕರೆದೊಯ್ಯುತ್ತಾರಷ್ಟೆ. ಈಗ ಅಮೆರಿಕದಲ್ಲಿ ಕನಿಷ್ಟ ಅರ್ಧ ಕೋಟಿ ಭಾರತೀಯರಿದ್ದಾರೆ. ಅಲ್ಲಿಯೂ ತಮ್ಮ ತಮ್ಮ ಜಾತಿ ಧರ್ಮಗಳಿಗನುಸಾರವಾಗಿ ದೇವಸ್ಥಾನ, ಗುರುದ್ವಾರಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಕೆಲವಂತೂ ಹಲವು ಮಿಲಿಯನ್ ಡಾಲರ್ ದೇವಸ್ಥಾನಗಳಾಗಿವೆ. ಒಂದು ಅಂದಾಜಿನ ಪ್ರಕಾರ ಅಮೆರಿಕದಲ್ಲಿ ಕನಿಷ್ಟ ಇಪ್ಪತ್ತು ಅತಿ ದೊಡ್ಡ ದೇವಸ್ಥಾನಗಳು ಮತ್ತು 300ಕ್ಕೂ ಹೆಚ್ಚು ಮಧ್ಯಮ ಮಟ್ಟದ ದೇವಸ್ಥಾನಗಳಿವೆ. ದೇವಸ್ಥಾನಗಳೆಂದ ಮೇಲೆ ಅದಕ್ಕೆ ಪೂಜಾರಿಗಳು ಬೇಕಲ್ಲ, ದೇವಸ್ಥಾನ ಕಟ್ಟಲು ಶಿಲ್ಪಿಗಳು, ವಾಸ್ತು ಪಂಡಿತರು ಬೇಕಲ್ಲ. ಈಗ ಅಲ್ಲಿ ಅವರಿಗೆಲ್ಲಾ ಒಳ್ಳೆ ಬಿಸಿನೆಸ್ ಆಗುತ್ತಿದೆ. ಇದುವರೆಗೆ ಸಾಗರ ಉಲ್ಲಂಘನೆ ಮಾಡುವುದೇ ಮಹಾಪಾಪ ಅಂತಿದ್ದವರೆಲ್ಲಾ ತಮ್ಮ ಅನುಕೂಲಕ್ಕೆ ತಕ್ಕಂತೆ ಧರ್ಮ ಶಾಸ್ತ್ರವನ್ನು ಬದಲಿಸಿಕೊಂಡು ಅಮೆರಿಕಕ್ಕೆ ಧಾವಿಸುತ್ತಿದ್ದಾರೆ. ಆದರೆ ಅಮೆರಿಕದ ಕಾನೂನಿನಲ್ಲಿ ಭಾರತದ ಈ ವಿಕೃತ ಪೌರೋಹಿತ್ಯಕ್ಕೆ ಒಂದು ಹೆಸರೇ ಇಲ್ಲ. ಅಲ್ಲಿನ ಚರ್ಚ್‌ಗಳಲ್ಲೂ ಪುರೋಹಿತಶಾಹಿಗಳಿದ್ದರೂ ಅದರ ರೀತಿ ರಿವಾಜಿನಲ್ಲಿ ತಾರತಮ್ಯವನ್ನೇ ಸಮರ್ಥಿಸುವ ಬೇಕಾದ ಧರ್ಮ ಶಾಸ್ತ್ರವಿಲ್ಲ. ಅಲ್ಲಿ ಆಧುನಿಕವಾದ ಪ್ರಜಾತಂತ್ರಬದ್ಧ ತಾರತಮ್ಯವಿದೆ! ಆ ಮಾತು ಬೇರೆ. ಆದರೆ ಅವರ ಕ್ರಿಶ್ಚಿಯನ್ ಧರ್ಮಶಾಸ್ತ್ರ ಆಧಾರಿತ ಧಾರ್ಮಿಕ ನಿರ್ವಹಣಾ ಕಾನೂನಿನಲ್ಲಿ ಭಾರತೀಯ ಬ್ರಾಹ್ಮಣ್ಯ ಪ್ರೇರಿತ ಧರ್ಮ ನಿರ್ವಹಣೆಯ ಕಾನೂನುಗಳಿಲ್ಲ. ಹೀಗಾಗಿ ಅವರ ಕಾನೂನಿನಲ್ಲಿ ಅರ್ಚಕ, ವಾಸ್ತು ಪಂಡಿತ, ಧಾರ್ಮಿಕ ಪಾರುಪತ್ತೆಗಾರ ಇನ್ನಿತ್ಯಾದಿ ಕೆಟಗರಿಗಳಿಲ್ಲ. ಅಲ್ಲಿ **liturgical worker** (ಕ್ರಿಶ್ಚಿಯನ್ ಬಗೆಯ ದೈವಾರಾಧನೆ), **cantors** (ಚರ್ಚ್‌ಗಳಲ್ಲಿ ಹಾಡು ಹೇಳುವವರು), **religious slaughter supervisor** (ಧಾರ್ಮಿಕ ಬಲಿದಾನಗಳ ಉಸ್ತುವಾರಿ) ಎಂಬಂತಹ ಕೆಟಗರಿಗಳು ಇವೆಯೇ ವಿನಃ ಬ್ರಾಹ್ಮಣ ಅರ್ಚಕನೆಂಬ ಕೆಟಗರಿಯಿಲ್ಲ. ಹೀಗಾಗಿ ಇಲ್ಲಿನ ಬ್ರಾಹ್ಮಣ ಪೂಜಾರಿ ಅರ್ಚಕನೆಂದು ವೀಸಾ ಕೇಳಿದರೆ ಅಲ್ಲಿ ಅಂಥ ಕೆಟಗರಿಯೇ ಇಲ್ಲವಾದ್ದರಿಂದ ವೀಸಾವನ್ನು ನಿರಾಕರಿಸಲಾಗುತ್ತಿದೆ. ಅಥವಾ ತಮ್ಮನ್ನು ಈ ಮೇಲೆ ಹೇಳಿದ ಕ್ರಿಶ್ಚಿಯನ್ ಕೆಟಗರಿಗಳಿಗೆ ಅನುಸಾರವಾಗಿ ತಮ್ಮ ವೃತ್ತಿಯನ್ನು ಪುನರ್ ನಿರ್ವಚನ ಮಾಡಿಕೊಳ್ಳಬೇಕೆಂದು ಕಡ್ಡಾಯ ಮಾಡಲಾಗಿದೆ. ಮತ್ತು ಈವರೆಗೆ ಅರ್ಚಕರಾಗಿ ವೀಸಾ ಪಡೆದವರು ವೀಸಾದ ಅಗತ್ಯಕ್ಕೆ ತಕ್ಕಂತೆ ವೃತ್ತಿಯ ಮತಾಂತರ ಮಾಡಿಕೊಂಡವರೇ. ಅಂದರೆ ತಮಗೆ ಅನುಕೂಲವೆಂದು ಕಂಡುಬಂದಾಗ ಶಾಸ್ತ್ರ ಪದ್ಧತಿಗಳನ್ನು ಬದಲಿಸಿದವರೇ. ಈಗ ಅವರೇ ವೀಸಾ ಕಾನೂನು ಸ್ವಲ್ಪ ಕಠಿಣವಾಗುತ್ತಿರುವಂತೆ ಅಮೆರಿಕದಲ್ಲಿ ಪ್ರಾಬಲ್ಯವಾಗಿರುವ ಭಾರತೀಯ ಮೇಲ್ಜಾತಿ ಎನ್‌ಆರ್‌ಐ ಲಾಬಿ ಹಿಡಿದುಕೊಂಡು ವೀಸಾ ಕಾನೂನು ಬದಲಿಸಲು ಒತ್ತಡ ತರುತ್ತಿದ್ದಾರೆ!



ಭಾರತದಲ್ಲಿರುವವರು ಇಲ್ಲಿನ ಹಿಂದೂ ಧರ್ಮಕ್ಕೆ ಬದ್ಧರಾಗಿರಬೇಕು, ಪರದೈವವನ್ನಾಗಲೀ, ಪರದೇಶವನ್ನಾಗಲೀ ಕನಸಿನಲ್ಲೂ ನೆನಸಬಾರದೆಂದು ಇಲ್ಲಿನ ಇತರ ಧರ್ಮೀಯರಿಗೆ ಬೋಧಿಸುವ ಈ ದ್ವಿಜೋತ್ತಮರು ತಮ್ಮದಲ್ಲದ ದೇಶವಾದ ಅಮೆರಿಕದಲ್ಲಿ ಹಿಂದೂ ಧರ್ಮದ ಪ್ರಚಾರ ಮತ್ತು ನಿರ್ವಹಣೆಗಾಗಿ ಅಮೆರಿಕದ ವೀಸಾ ಕಾನೂನಿನಲ್ಲೇ ಬದಲಾವಣೆ ತರಬೇಕೆಂದು ಒತ್ತಡ ತರುತ್ತಿದ್ದಾರೆ. ಅದಕ್ಕೆ ಒಪ್ಪದಿರುವುದು ಧಾರ್ಮಿಕ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ ಎಂದು ಅವರ ವಕೀಲರು ವಾದಿಸುತ್ತಿದ್ದಾರೆ. ಗುಜರಾತಿನಲ್ಲಿ ಮುಸ್ಲಿಮರ ಅಭಿವ್ಯಕ್ತಿ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಮೇಲೆ ಹಲ್ಲೆ ಮಾಡಿ ನರಹತ್ಯೆಗಳನ್ನು ನಡೆಸಿದವರೇ ಹಣಕಾಸು ಸರಬರಾಜು ಮಾಡಿದವರೇ ಈ ಬ್ರಾಹ್ಮಣ ಅರ್ಚಕರ ಸ್ವಾತಂತ್ರ್ಯಕ್ಕಾಗಿ "ಹೋರಾಡುತ್ತಿದ್ದಾರೆ." ಅದಕ್ಕೇ ಹನ್ನೆರಡನೇ ಶತಮಾನದಲ್ಲಿ ಬಸವಣ್ಣ ಕೇಳಿದ್ದು:

"ಅಯ್ಯಾ ಇದೆಂತಯ್ಯಾ ವಿಪ್ರರು
ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ?"

ವಾರದ ಪ್ರಶ್ನೆ

"ಸಂಘಪರಿವಾರದ ಸಾಮರಸ್ಯ ಸಿದ್ಧಾಂತಕ್ಕೂ, ಮಾಯಾವತಿಯ ಸರ್ವಜನಹಿತ ಸಿದ್ಧಾಂತಕ್ಕೂ ವ್ಯತ್ಯಾಸವೇನು?"

- ಆನಂದ್ ತೇಲ್‌ತುಂಬ್ಡೆ

ವಾರದ ಸತ್ಯ


"ನನಗೇನೂ ಗೊತ್ತಿಲ್ಲ...ಅಧಿಕಾರಿಗಳು ಹೇಳಿಕೊಟ್ಟಿದ್ದನ್ನಷ್ಟೇ ಹೇಳಿದ್ದೇನೆ."

- ಮುಖ್ಯಮಂತ್ರಿಗಳು ರೈತರೊಂದಿಗೆ ಮಾಡಿದ ಸಂವಾದದಲ್ಲಿ ರೈತನೊಬ್ಬ ಕುಮಾರಸ್ವಾಮಿಯ ಗುಣಗಾನದಲ್ಲಿ ತೊಡಗಿದ್ದಕ್ಕೆ ರೈತರಿಂದ ವಿರೋಧ ಬಂದಾಗ ಆತ ಬಾಯ್ಬಿಟ್ಟಿದ್ದು.

No Comments

"ಮಾರುಕಟ್ಟೆಯ ಒಳ್ಳೆಯ ಸೇವಕ...ಆದ[...] ಕೆಟ್ಟ ಯಜಮಾನ."

- ಸ್ವೀಡನ್ನಿನ ಮಾಜಿ ಪ್ರಧಾನಿ ಓಲ[...] ಉಲ್ಮ[...]




"ಈ ಪ್ರತಿಭಾ ಪಾಟೀಲ್ ಯಾರು? ಶಿವರಾಜ್ ಪಾಟೀಲ್ ಸೋದರಿಯೇ?"

- ಎಂ.ಕರುಣಾನಿ[...]

"ಇಬ್ಬರು ಸಹೋ[...]ರರನ್ನು ಒಂದೇ ಗೂಡಿನಲ್ಲಿ ಕೂಡಿಹಾಕಿ ಹಸಿವಿನಿಂ[...] ಒಣಗುವಂತೆ ಮಾಡಿದರೆ ಅವರಿಬ್ಬರು ಕಿತ್ತಾಡುವುದ[...] ಸಹಜ."

- ಜಿಯಾದ್ ಅಬು ಅಮ್[...]
ಪ್ಯಾಲೆಸ್ತೀನ್ ವಿದೇಶಾಂಗ ಮಂತ್[...]
ಪ್ಯಾಲೆಸ್ತೀನ್‌ನಲ್ಲಿ ಹಮಾಸ್ ಮತ್ತು ಫತ[...]
ಕಲಹದ ಬಗ[...]

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಜನರು ತೆರಿಗೆಯನ್ನು ಕಟ್ಟಲೇಬೇಕು. ತೆರಿಗೆ ವಸೂಲಿದಾರರು ದುಂಬಿಯಂತೆ ಎಲ್ಲಾ ಹೂವುಗಳಲ್ಲಿರುವ ಮಕರಂದವನ್ನು ಹೀರಬೇಕು....ಆದರೆ ಹೂವಿಗೆ ನೋವಾಗದಂತೆ...."

- ಪಿ. ಚಿದಂಬರಂ, ವಾಣಿಜ್ಯ ಸಚಿ[...]

"ಮುಖ್ಯಮಂತ್ರಿಯಾಗಿರಲು ನನಗೆ ಯೋಗ್[...] ಇಲ್ಲಾಂದರೆ ಹೇಳಿ...... ಈಗಿಂದೀಗ್ಲೆ ರಾಜೀನಾ[...] ಕೊಡ್ತೀನಿ."

- ಎಚ್.ಡಿ.ಕುಮಾರಸ್ವಾ[...]

"ಒಳಮೀಸಲು ಜಾರಿ ಸಾಧ್ಯವಾಗುವುದಿ[...] ಎಂದರೆ ರಾಜೀನಾಮೆ ಕೊಡು."

- ಎಚ್. ಡಿ. ದೇವೇಗೌ[...]

"ಗವಾಸ್ಕರ್‌ಗೆ ಇಂಡಿಯನ್ ಟೀಮ್ ಬ[...] ಗೊತ್ತೇ ವಿನಃ ಇಂಡಿಯನ್ ಕ್ರಿಕೆಟ್ ಬಗ್ಗೆ ಅಲ್ಲ."

-ಅಶೋಕ್ ಮಲ್ಹೋತ್ರ, ಮಾಜಿ ಕ್ರಿಕೆಟಿ[...]

"2012ನೇ ಇಸವಿ ವೇಳೆಗೆ ಬಾಲ ಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ರಾಜ್ಯದಿಂದ ತೊಡೆದು ಹಾಕಲಾಗುವುದು."

- ಆರ್. ಅಶೋಕ್, ಆರೋಗ್ಯ ಮಂತ್ರಿ



ಸಹೋದರರ ಸವಾಲ್

ಜೂನ್ 28ಕ್ಕೇ ಅಧಿವೇಶನ ಆರಂಭಿಸಬೇಕು..ಅದೇ ಒಳ್ಳೆಯದೆಂದು ಜ್ಯೋತಿಷಿಗಳು ಹೇಳಿದ್ದಾರೆ.

- ಎಚ್.ಡಿ.ರೇವಣ್ಣ





"ಏನಾದ್ರೂ ಆಗಿ ಹಾಳಾಗಿ ಹೋಗ್ಲಿ... ಅವರು ಹೇಳಿದಂತೆ ಮಾಡಿಬಿಡ್ರಿ."

-ಎಚ್. ಡಿ. ಕುಮಾರಸ್ವಾಮಿ ಕ್ಯಾಬಿನೆಟ್ ಮೀಟಿಂಗ್‌ನಲ್[...]

ವಾರದ ಅವಿವೇಕ

"ಬಸವಣ್ಣ ಹೀನಕುಲದಲ್ಲಿ ಹುಟ್ಟಿರಲು ಸಾ[...]ವಿಲ್ಲ"

- ಲೀಲಾದೇವಿ ಆರ್. ಪ್ರಸಾದ[...]

ವಾರದ ವಿವೇಕ


"ಯಾವುದೇ ವಾದದಲ್ಲಿ ವಿರೋಧಿಗೆ ಅನ[...]ಮಾನದ ಅನುಕೂಲ ನೀಡುವುದು ಹಾಗೂ ಗೆಲುವಿ[...] ಹುಮ್ಮಸ್ಸಿಗಿಂತ ಅರಿವಿನ ಹೆಚ್ಚಳದ ಕಡೆ ಗಮ[...] ಹರಿಸುವುದು ಅಗತ್ಯ."

-ಕೆ. ವಿ. ತಿರುಮಲೇಶ[...]

ಮದುವೆ ಕುರಿತು ಗಿರೀಶ್ ನಿಕ್ಕಮ್ ಕಳುಹಿಸಿರುವ ಹೇಳಿಕೆಗಳು ಈ ಸಂಚಿಕೆಯ ಪುಟದಂಚುಗಳಲ್ಲಿ....

ಸಾಂಕೇತಿಕ ನೆಮ್ಮದಿ ಹಾಗೂ ದಮನ ಸಂಸ್ಕೃತಿ

ಇವತ್ತು ನಮ್ಮ ದೇಶದಲ್ಲಿ ವಾಸ್ತವತೆಗಿಂತಲೂ ಸಂಕೇತಗಳಿಗೆ ಹೆಚ್ಚು ಪ್ರಾಶಸ್ತ್ಯ ಲಭಿಸುತ್ತದೆ. ಇದಕ್ಕೆ ಕಾರಣ ವಾಸ್ತವ ಕಠೋರವಾಗಿದ್ದು, ಸಂಕೇತಗಳು ಸುಳ್ಳು ನೆಮ್ಮದಿಯನ್ನು ನೀಡುವುದು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅನ್ನಿಸುತ್ತೆ. ಅಂತಹ ನೆಮ್ಮದಿ ನೀಡುವ ಸಂಕೇತಗಳಲ್ಲಿ ನಮ್ಮ ದೇಶದ ರಾಷ್ಟ್ರಪತಿ ಸ್ಥಾನವೂ ಒಂದು.



ಅದೊಂದು ಅಲಂಕಾರಿಕ ಹುದ್ದೆ. ಆದರೆ ಅಂತಹ ಹುದ್ದೆಯನ್ನು ಉಳಿಸಿಕೊಂಡು, ಸುಳ್ಳು ನೆಮ್ಮದಿಯನ್ನು ಪಡೆಯಲು ಪ್ರತಿವರ್ಷ ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ ಗೊತ್ತೇ? ಆ ಖರ್ಚು ವರ್ಷದಿಂದ ವರ್ಷಕ್ಕೆ ಹೇಗೆ ಹೆಚ್ಚಾಗುತ್ತಾ ಹೋಗುತ್ತಿದೆ ಎಂಬುದು ಗೊತ್ತೇ? ಇಲ್ಲಿ ಕೊಟ್ಟಿರುವ ಹಲವು ಅಂಕಿ ಅಂಶಗಳನ್ನು ಗಮನಿಸಿ: ರಾಷ್ಟ್ರಪತಿಗೆ ಪ್ರತಿ ತಿಂಗಳ ಸಂಬಳ ಎಂದು 50,000 ಸಾವಿರ ರೂಪಾಯಿಗಳನ್ನು ನೀಡುತ್ತಿದ್ದು ಅದರ ವಾರ್ಷಿಕ ಒಟ್ಟು ಮೊತ್ತ ಆರು ಲಕ್ಷ ರೂಪಾಯಿಗಳು ಮಾತ್ರ. ಆದರೆ ರಾಷ್ಟ್ರಪತಿಯವರ 350 ಕೊಠಡಿಗಳ ನಿವಾಸ ರಾಷ್ಟ್ರಭವನವನ್ನು ಮತ್ತು ಅದರೊಳಗೆ ನಡೆಯುವ ಸಭೆ, ಸಮಾರಂಭ, ಭೇಟಿ ಇತ್ಯಾದಿಗಳಿಗೆ ವೆಚ್ಚವಾಗುವುದು ಹಲವಾರು ಕೋಟಿ ರೂಪಾಯಿಗಳು. ಉದಾಹರಣೆಗೆ 1997-98 ರಲ್ಲಿ 6.89 ಕೋಟಿ ರೂ.ಗಳು, 2003-04 ರಲ್ಲಿ 9.80 ಕೋಟಿ ರೂ.ಗಳು, 2005-06 ರಲ್ಲಿ 13.70 ಕೋಟಿ ರೂಪಾಯಿ ಮತ್ತು ಈಗ ತಾನೇ ಸಂಪೂರ್ಣಗೊಂಡಿರುವ 2006-07 ರ ಆರ್ಥಿಕ ವರ್ಷದಲ್ಲಿ 18.51 ಕೋಟಿ ರೂಪಾಯಿಗಳು! ಸಾಂಕೇತಿಕ ನೆಮ್ಮದಿಗೆ ಎಷ್ಟೊಂದು ಹಣ!

ಈಗ ಈ ಹುದ್ದೆಗೆ ಪ್ರಥಮ ಬಾರಿಗೆ ಮಹಿಳೆಯೊಬ್ಬರು ಆಯ್ಕೆಯಾಗುವ ಹೊಸ್ತಿಲಿನಲ್ಲಿದ್ದಾರೆ. ಅವರು ಪ್ರತಿಭಾ ಪಾಟೀಲ್. ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಈ ಹುದ್ದೆಯನ್ನು ಅಲಂಕರಿಸಲು ಹಪಹಪಿಸುತ್ತಿದ್ದ ಇತರ ಜನರಿಗಿಂತ ಈಕೆಯೇ ವಾಸಿ (ಅದೂ ಒಂದು ತರಹದ ನೆಮ್ಮದಿ, ಸಾಂಕೇತಿಕ ನೆಮ್ಮದಿ!). ಏಕೆಂದರೆ ಸಾಯಿಬಾಬಾನ ಪರಮ ಭಕ್ತ, ಹೋಮ ಹವನಗಳ ಪರಿಪಾಲಕ ಮತ್ತು ಅಸ್ಪಷ್ಟ ನಿಲುವುಗಳ ಶಿವರಾಜ್ ಪಾಟೀಲ್ ರಾಷ್ಟ್ರಪತಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದರು. ಹಾಗೆಯೇ ಹಿಂದೂತ್ವವಾದಿ ನಿಲುವುಗಳನ್ನೇ ತಾಳುತ್ತಾ ಬಂದಿರುವ ಮಾಜಿ ರಾಜವಂಶದ ಕುಡಿ ಕರಣ್‌ಸಿಂಗ್ ಕೂಡ ಲಾಬಿ ಮಾಡುತ್ತಿದ್ದರು. ಇನ್ನು ಭೈರೋನ್‌ಸಿಂಗ್ ಶೇಖಾವತ್ ಎಂಬ ಸಂಘ ಪರಿವಾರಿ ಆ ಹುದ್ದೆಗೆ ಸ್ಪರ್ಧಿಸಿಯೇ ತೀರುತ್ತೇನೆಂದು ಧಮಕಿ ಹಾಕುತ್ತಿದ್ದಾರೆ. ಇವರೆಲ್ಲರಿಗೆ ಹೋಲಿಸಿದರೆ ಪ್ರತಿಭಾ ಪಾಟೀಲ್ ಎಂಬ ಸಭ್ಯ ಮಹಿಳೆ ಎಷ್ಟೋ ವಾಸಿ. ಇವರ ಆಯ್ಕೆಗೆ ಪ್ರಮುಖ ಕಾರಣ ಇವರು ಇಂದಿರಾ ಗಾಂಧಿ ವಂಶದ ಅಪ್ಪಟ ಭಟ್ಟಂಗಿ ಎಂಬುದು ನಿಜವಾದರೂ, ಅವರ ಬಗ್ಗೆ ಓದಿದ್ದರಲ್ಲಿ ನನಗೆ ಇಷ್ಟವಾದ ಅಂಶ ಯಾವುದೆಂದರೆ ಅವರ ಜಾತ್ಯತೀತ ನಿಲುವು.

ಪ್ರತಿಭಾ ಪಾಟೀಲರು ರಾಜ್ಯಪಾಲರಾಗಿರುವ ರಾಜಸ್ಥಾನದಲ್ಲಿ ಅಧಿಕಾರದಲ್ಲಿರುವ ವಸುಂಧರ ರಾಜೆ ಎಂಬ ಚೆಡ್ಡಿ ಮಹಿಳೆ ಕಳೆದ ವರ್ಷ 'ರಾಜಸ್ಥಾನ ಧರ್ಮ ಸ್ವಾತಂತ್ರ್ಯ ವಿಧೇಯಕ' ಎಂಬ ಕಾಯಿದೆಯನ್ನು ಜಾರಿಗೊಳಿಸಲು ಯತ್ನಿಸಿದರು. ಆ ಕಾಯಿದೆ ನಮ್ಮ ಸಂವಿಧಾನದಲ್ಲಿರುವ ಧಾರ್ಮಿಕ ಸ್ವಾತಂತ್ರ್ಯದ ಆಶಯಗಳಿಗೇ ವಿರುದ್ಧವಾಗಿತ್ತು. 'ಧರ್ಮ'ವನ್ನು ರಕ್ಷಿಸುವ ನೆಪದಲ್ಲಿ ಸೃಷ್ಟಿಸಲಾಗಿದ್ದ ಕಾಯಿದೆಯಲ್ಲಿ ಮತಾಂತರದ ಆರೋಪದ ಮೇಲೆ ಯಾರನ್ನ ಬೇಕಾದರೂ ಜಾಮೀನ ರಹಿತವಾಗಿ ಬಂಧಿಸುವ ಅವಕಾಶವನ್ನು ನೀಡಲಾಗಿತ್ತು. ಅಷ್ಟೇ ಅಲ್ಲದೆ, ಮತಾಂತರಗೊಂಡವರನ್ನು ಮತ್ತು ಮತಾಂತರಗೊಳಿಸಿದವರನ್ನು, ಇಬ್ಬರಿಗೂ 2-5 ವರ್ಷ ಬಂಧನ ಅಥವಾ/ಮತ್ತು 50,000 ರೂಪಾಯಿಗಳ ದಂಡವನ್ನು ವಿಧಿಸಬಹುದಾಗಿತ್ತು.


ವಾಸ್ತವ ಸ್ಥಿತಿ ಯಾವುದೆಂದರೆ ಸ್ವಯಂಪ್ರೇರಿತ ಮತಾಂತರ ಹಕ್ಕನ್ನು ನಮ್ಮ ಸಂವಿಧಾನ ನೀಡಿದೆಯಲ್ಲದೆ, ಕಳೆದ 34 ವರ್ಷಗಳಿಂದ ಮತಾಂತರ ಕುರಿತಂತೆ ಹಲವು ರಾಜ್ಯಗಳಲ್ಲಿ ಕಾನೂನುಗಳಿದ್ದರೂ ಬಲಾತ್ಕಾರದಿಂದ ಮತಾಂತರಗೊಳಿಸಿದ ಯಾವ ಆರೋಪವೂ ದೃಢಪಟ್ಟಿಲ್ಲ. ಹಾಗಿರುವಾಗ, ವಸುಂಧರ ರಾಜೆ ಇಂತಹ ಒಂದು ಕಠೋರ ಕಾನೂನನ್ನು ಜಾರಿಗೊಳಿಸಲು ಹೊರಟದ್ದು ಯಾಕೆ? ಈ ಪ್ರಶ್ನೆಗೆ ಉತ್ತರ ಸುಲಭ. ಈ ಕಾನೂನು ಜಾರಿಗೆ ಬಂದರೆ ಸಂಘ ಪರಿವಾರದ ಕುತಂತ್ರಿಗಳು, ಭಜರಂಗದ ಪುಂಡರು, ಬಿಜೆಪಿಯ ಸದಸ್ಯರು... ಹೀಗೆ ಯಾವ ಚೆಡ್ಡಿ ಬೇಕಾದರೂ ಯಾರ ಮೇಲಾದರೂ ಮತಾಂತರದ ಆರೋಪ ಹೊರಿಸಿ ಭಯೋತ್ಪಾದನೆಯನ್ನು ಸೃಷ್ಟಿಸಲು ಅನುಕೂಲವಾಗಲೆಂದು.

ಆದರೆ ಪ್ರತಿಭಾ ಪಾಟೀಲರಿಗೆ ಈ ಕಾಯಿದೆಯಲ್ಲಿ ಅಡಗಿರುವ ದುಷ್ಟ ಬುದ್ಧಿ ಅರಿವಾಯಿತು. ಆದ್ದರಿಂದ ಯಾವುದೇ ಕಾರಣಕ್ಕೂ ತಾನು ಅದಕ್ಕೆ ಸಹಿ ಹಾಕುವುದಿಲ್ಲ ಬೇಕಿದ್ದರೆ ರಾಷ್ಟ್ರಪತಿಯವರಿಂದಲೇ ಸಹಿ ಪಡೆಯಿರಿ ಎಂದು ಯಾವ ಮೂಲಾಜೂ ಇಲ್ಲದೆ ರಾಜೆ ಸರ್ಕಾರಕ್ಕೆ ಹೇಳಿದರು.

ಅದಕ್ಕೇ ಹೇಳಿದ್ದು, ಇತರರಿಗಿಂತ ಪ್ರತಿಭಾ ಪಾಟೀಲರೇ ವಾಸಿ ಎಂದು.

* * * * * *

ಮಾನವ ಹಕ್ಕುಗಳ ಹೋರಾಟಗಾರ ಬಿನಾಯಕ್ ಸೇನ್‌ರವರನ್ನು ಛತ್ತೀಸಗಢದ ರಾಜ್ಯ ಇನ್ನೂ ಬಂಧನದಲ್ಲಿಟ್ಟಿದೆ. ಅವರ ಪರವಾಗಿ ಹೋರಾಡುತ್ತಿರುವ ಪ್ರಗತಿಪರರೊಂದಿಗೆ ಈ ಜಗತ್ತಿನ ಅಪ್ರತಿಮ ಬುದ್ಧಿಜೀವಿ ಮತ್ತು ಅಮೆರಿಕಾ ಸಾಮ್ರಾಜ್ಯಶಾಹಿಯ ಕಠೋರ ಟೀಕಾಕಾರ ನೋಮ್ ಚಾಮ್‌ಸ್ಕಿಯವರೂ ಧ್ವನಿಗೂಡಿಸಿದ್ದಾರೆ. ಇತ್ತೀಚೆಗೆ ಚಾಮ್‌ಸ್ಕಿಯವರೂ ಒಳಗೊಂಡಂತೆ 37 ಪ್ರಗತಿಪರರು ಬಿನಾಯಕ್ ಸೇನ್‌ರವರನ್ನು ಬಿಡುಗಡೆಗೊಳಿಸಬೇಕೆಂದೂ, ಛತ್ತೀಸಗಢದಲ್ಲಿ ಅಸ್ತಿತ್ವದಲ್ಲಿರುವ POTA ಗಿಂತಲೂ ಅಮಾನುಷ ಕಾಯಿದೆಯನ್ನು ರದ್ದುಗೊಳಿಸಬೇಕೆಂತಲೂ ಮನವಿಯನ್ನು ಸಲ್ಲಿಸಿದ್ದಾರೆ. ಆ ಮನವಿಯು ಈ ಇಡೀ ಪ್ರಕರಣವನ್ನು ಸರಿಯಾಗಿ ಅರ್ಥೈಸಿರುವುದರಿಂದ ಅದರ ಅನುವಾದವನ್ನು ಇಲ್ಲಿ ನೀಡುತ್ತಿದ್ದೇನೆ:



"ಛತ್ತೀಸಗಢದ PUCL ನ ಪ್ರಧಾನ ಕಾರ್ಯದರ್ಶಿಯಾಗಿರುವ ಡಾ. ಬಿನಾಯಕ್ ಸೇನ್‌ರವರನ್ನು ಮೇ 14 ರಿಂದ ಬಂಧನದಲ್ಲಿಟ್ಟಿರುವುದು ಗಾಭರಿ ಹುಟ್ಟಿಸುವ ಸಂಗತಿಯಾಗಿದೆ. ಭಾರತದಲ್ಲೇ ಅತಿ ದೀರ್ಘ ಕಾಲದಿಂದ PUCL ಮಾನವಹಕ್ಕುಗಳಿಗಾಗಿ ಹೋರಾಡುತ್ತಿರುವ ಸಂಘಟನೆಯಾಗಿದೆ.

ಭಾರತದ ಅತಿ ಹಿಂದುಳಿದ ಪ್ರದೇಶಗಳಲ್ಲಿನ ಬಡ ಜನರ ಆರೋಗ್ಯ ಕ್ಷೇಮಕ್ಕಾಗಿ ಶ್ರಮಿಸುವ ಮನೋಭಾವವೇ ಕ್ಷೀಣಿಸುತ್ತಿರುವಾಗ ಬಿನಾಯಕ್ ಸೇನ್‌ರವರು ವೈದ್ಯರಾಗಿ ಅಂತಹ ಘನಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ. ಕಳೆದ ಮೂವತ್ತು ವರ್ಷಗಳಿಂದ ಹಿಂದುಳಿದ ಪ್ರದೇಶಗಳಲ್ಲಿ ಸಮುದಾಯಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ ಮಾತ್ರವಲ್ಲ ಸಮುದಾಯಿಕ ಆರೋಗ್ಯ ಕಾರ್ಯಕರ್ತರ ಯೋಜನೆಯನ್ನು ರೂಪಿಸುವಲ್ಲಿಯೂ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದ ಸಮಿತಿಯ ಸದಸ್ಯರೂ ಆಗಿದ್ದವರು. ದಲ್ಲಿ ರಾಜ್ಹಾರ ಎಂಬಲ್ಲಿ ಕಾರ್ಯಕರ್ತರೇ 25 ವರ್ಷಗಳಿಂದ ನಡೆಸಿಕೊಂಡು ಬಂದಿರುವ ಶಾಹೀದ್ ಆಸ್ಪತ್ರೆಯನ್ನು ಸ್ಥಾಪಿಸಲು ನೆರವಾದವರು ಸೇನ್.

ಸೇನ್‌ರವರನ್ನು ಬಂಧಿಸುವ ಮೂಲಕ ಭಾರತದಲ್ಲಿ ಮಾನವ ಹಕ್ಕುಗಳ ಹೋರಾಟಗಳಿಗೆ ಧಕ್ಕೆ ಉಂಟುಮಾಡಲಾಗಿದೆ. ಸಲ್ವಾಜುದುಂ ಎಂಬ ಕಾರ್ಯಾಚರಣೆಯ ಮೂಲಕ ಛತ್ತೀಸಗಢದ ಸರ್ಕಾರ ನಡೆಸುತ್ತಿರುವ ದೌರ್ಜನ್ಯಗಳನ್ನು ಬಯಲಿಗೆಳೆಯುವಲ್ಲಿ PUCL ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ. ಅಷ್ಟೇ ಅಲ್ಲ, ನಕಲಿ ಎನ್‌ಕೌಂಟರ್‌ಗಳು, ಮಹಿಳೆಯರ ಮೇಲಿನ ಅತ್ಯಾಚಾರಗಳು, ಇಡೀ ಹಳ್ಳಿಗಳಿಗೆ ಬೆಂಕಿಹಚ್ಚಿ ಭಸ್ಮಗೊಳಿಸುವುದು, ಹತ್ತಾರು ಸಾವಿರ ಆದಿವಾಸಿಗಳನ್ನು ಬಲವಂತವಾಗಿ ಒಕ್ಕಲೆಬ್ಬಿಸುವುದು, ಆ ಮೂಲಕ ಅವರನ್ನೆಲ್ಲ ಕುಲಕಸುಬಿಲ್ಲದೆ ನಿರಾಶ್ರಿತರನ್ನಾಗಿಸುವುದು... ಸರ್ಕಾರದ ಇಂತಹ ಕೌರ್ಯಗಳನ್ನು ಹಲವಾರು ಸ್ವತಂತ್ರ ಸಂಘಟನೆಗಳು ಸವಿವರವಾಗಿ ದಾಖಲಿಸುತ್ತಲೇ ಬಂದಿವೆ.

ಡಾ. ಬಿನಾಯಕ್ ಸೇನ್‌ರವರನ್ನು ಬಂಧಿಸುವ ಮೂಲಕ ಎಲ್ಲಾ ಮಾನವಹಕ್ಕು ಸಂಘಟನೆಗಳನ್ನು ಬೆದರಿಸುವ, ಬಾಯಿಮುಚ್ಚುವ ಷಡ್ಯಂತ್ರವೇ ಆಗಿದೆ. ಇತ್ತೀಚೆಗೆ ಛತ್ತೀಸಗಢ ಸರ್ಕಾರದ ದೌರ್ಜನ್ಯ ಹೆಚ್ಚಾಗುತ್ತಲಿದ್ದು ಈಗ ಅದನ್ನು ಇತರರ ಮೇಲೂ ಪ್ರಯೋಗಿಸಲಾಗುತ್ತಿದೆ. ಡಾ. ಬಿನಾಯಕ್ ಸೇನ್‌ರವರ ಪತ್ನಿ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಡಾ. ಇಳಿನಾ ಸೇನ್, ನಾದಿ ಘಾಟಿ ಮೋರ್ಛಾದ ಗೌತಮ್ ಬಂಧೋಪಾಧ್ಯಾಯ, PUCL ನ ರಶ್ಮಿ ದ್ವಿವೇದಿ. ಹಾಗು ಇತರ ಕಾರ್ಯಕರ್ತರ ವಿರುದ್ಧವೂ ಸರ್ಕಾರ ತನ್ನ ದಬ್ಬಾಳಿಕೆಯನ್ನು ಪ್ರಯೋಗಿಸುತ್ತಿದೆ.

ಛತ್ತೀಸಗಢದ ಕಠೋರ ಕಾನೂನುಗಳ ಅಡಿ ಸುಳ್ಳು ಆರೋಪಗಳ ಆಧಾರದ ಮೇಲೆ ಬಿನಾಯಕ್ ಸೇನ್‌ರವರನ್ನು ಬಂಧಿಸಲಾಗಿದೆ. ಈಗಾಗಲೇ ಈ ಕಠೋರ ಕಾನೂನುಗಳು ಬೇಕಂತಲೇ ಅಸ್ಪಷ್ಟವಾಗಿದ್ದು, ಆ ಮೂಲಕ ಯಾರನ್ನು ಬೇಕಾದರೂ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದರು ಎಂದು ಆರೋಪಿಸಿ, ಅವರನ್ನು ಬಂಧಿಸಿ, ಸರ್ಕಾರದ ವಿರುದ್ಧ ದನಿ ಎತ್ತುವವರನ್ನೆಲ್ಲ ದಮನಿಸಲಾಗುತ್ತಿದೆ ಎಂದು ಹಲವಾರು ಸಂಘಟನೆಗಳು ಟೀಕಿಸಿವೆ. ಆ ಸಂಘಟನೆಗಳು ಯಾವುದರ ಬಗ್ಗೆ ಎಚ್ಚರಿಕೆ ನೀಡಿದ್ದವೋ, ಅದನ್ನೇ ಈಗ ಸೇನ್‌ರವರನ್ನು ಬಂಧಿಸುವ ಮೂಲಕ ಸರ್ಕಾರ ಜಾರಿಗೊಳಿಸಿದೆ.

ಆದ್ದರಿಂದ ನಾವು ಈ ತಕ್ಷಣವೇ ಡಾ. ಸೇನ್‌ರವರ ಮೇಲಿರುವ ಸುಳ್ಳು ಆರೋಪಗಳನ್ನು ತಿರಸ್ಕರಿಸಿ ಅವರನ್ನು ಬಂಧನಮುಕ್ತಗೊಳಿಸಬೇಕು; ಇತರೆ ಮಾನವ ಹಕ್ಕುಗಳ ಹೋರಾಟಗಾರರ ಮೇಲಿನ ದಬ್ಬಾಳಿಕೆಯನ್ನು ನಿಲ್ಲಿಸಬೇಕು; ಸಲ್ವಾ ಜುಡುಂನನ್ನು ವಿಸರ್ಜಿಸಬೇಕು ಮತ್ತು ಛತ್ತೀಸಗಢದ ಸ್ಪೆಷಲ್ ಪಬ್ಲಿಕ್ ಸೆಕ್ಯೂರಿಟಿ ಆಕ್ಟ್ ಅನ್ನು ಹಿಂತೆಗೆಯಬೇಕು ಎಂದು ಒತ್ತಾಯಿಸುತ್ತೇವೆ."

ಇದನ್ನು ಇಲ್ಲಿ ಯಾಕೆ ನೀಡಿದೆನೆಂದರೆ ಇನ್ನು ಹಲವೇ ತಿಂಗಳುಗಳಲ್ಲಿ ಛತ್ತೀಸಗಢದಲ್ಲಿ ಅಧಿಕಾರದಲ್ಲಿರುವಂತೆಯೇ ಕರ್ನಾಟಕದಲ್ಲೂ ಸಂಘ ಪರಿವಾರದ ಸಂತತಿಯವರು ಆಡಳಿತದ ಚುಕ್ಕಾಣಿ ಹಿಡಿಯಲಿದ್ದಾರೆ. ಆದ್ದರಿಂದ ಇಲ್ಲೂ ಏನಾಗಬಹುದು ಎಂಬುದರ ಬಗ್ಗೆ ಒಂದು ಮುನ್ನೆಚ್ಚರಿಕೆ ಅಷ್ಟೇ...

* * * * * * * * * *





ಕಂಡಹಾಗೆ

ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಮೊನ್ನೆ ಎಲ್ಲೋ ಒಂದು ಕಡೆ ಮಾತಾಡುತ್ತಾ "ಬಸವಣ್ಣ ಮಾದಿಗ ಜಾತಿಯಲ್ಲಿ ಹುಟ್ಟಿದ್ದರು ಅಂತಾ ಬಂಜಗೆರೆ ಜಯಪ್ರಕಾಶ್ ಹೇಳುತ್ತಿದ್ದಾರೆ. ಬಸವಣ್ಣ ಹೀಗೆ ಹೀನ ಜಾತಿಯಲ್ಲಿ ಹುಟ್ಟಿದ್ದರೆಂದು ಹೇಳಿರುವುದು ಸರಿಯೇ?" ಎಂಬಿತ್ಯಾದಿ ಚೀರಿಕೊಂಡಿದ್ದಾರೆ. ಇನ್ನು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನೇಸರ್ಗಿಯವರು "ಅನು ದೇವಾದಲ್ಲಿ ಬಸವಣ್ಣನ ಸೋದರಿಯರ ಬಗ್ಗೆ ಅವಮಾನಕರವಾಗಿ ಬರೆಯಲಾಗಿದೆ. ಆ ಲೇಖಕರಿಗೆ ಆಯೋಗದಿಂದ ನೋಟೀಸ್ ಕೊಡುತ್ತೇನೆ" ಎಂದು ಹೇಳಿದ್ದೂ ಪತ್ರಿಕೆಗಳಲ್ಲಿ ಬಂದಿದೆ. ರಾಜ್ಯ ಮಹಿಳಾ ಆಯೋಗದ ವ್ಯಾಪ್ತಿ ಹೀಗೆ ಚರಿತ್ರೆ ಪುರಾಣಗಳವರೆಗೂ ಹರಡಿಕೊಂಡಿದೆ ಎಂಬುದು ನನಗಂತೂ ಗೊತ್ತಿರಲಿಲ್ಲ, ಆ ವಿಚಾರ ಇರಲಿ.

ಲೀಲಾದೇವಿ ಪ್ರಸಾದ್ ಒಮ್ಮೆ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದವರು. ಭಾಷೆ, ಸಂಸ್ಕೃತಿ, ಸಂಶೋಧನೆಗಳ ಬಗ್ಗೆ ಅವರಿಗೆ ಅಷ್ಟು ತಿಳುವಳಿಕೆ ಇಲ್ಲ ಎಂಬುದು ನಮಗಿರಲಿ ಸ್ವತಃ ಲೀಲಾದೇವಿಗೇ ಅದು ಗೊತ್ತಿದೆ. ಆದರೆ ಈ ವಿವಾದದಲ್ಲಿ ತಲೆ ಹಾಕುವ ಭರದಲ್ಲಿ ಮಾದಿಗರೆಂದರೆ ಅದೊಂದು ಹೀನ ಜಾತಿ ಎಂದು ಮಾತಾಡುವುದು ಎಷ್ಟು ಅಸಹ್ಯ ಅಲ್ಲವಾ?

ಮೇಲುಜಾತಿ ದುರಹಂಕಾರ ಅಂದರೆ ಇದೇನೆ. ಸ್ವತಃ ಲಿಂಗಾಯತರೂ, ಬಸವಣ್ಣನ ಅನುಯಾಯಿಯೂ ಎಂಬಂತೆ ಪೋಸ್ ನೀಡುತ್ತಿರುವ ಲೀಲಾದೇವಿಗೆ ಬಸವತತ್ವ ಅರ್ಥವಾಗಿದಿದ್ದರೆ ಈ ಕೀಳು ಮಾತುಗಳನ್ನು ಆಡುತ್ತಿರಲಿಲ್ಲ.

ಬಸವಣ್ಣನ ಜಾತಿ ಮೂಲದ ವಿಚಾರ ಈಗ ಯಾಕೆ ಬೇಕಿತ್ತು, ಬಸವಣ್ಣ ಕೇವಲ ಲಿಂಗಾಯತರಿಗೆ ಮಾತ್ರ ಸೀಮಿತವಲ್ಲ, ಎಲ್ಲರಿಗೂ ಸೇರಿದವನೆಂದು ಈಗ 'ಅನು ದೇವಾ' ವಿರೋಧಿಗಳು ಹೇಳುತ್ತಿದ್ದಾರೆ. ಆದರೆ ಇದು ತೋರಿಕೆಯ ಮಾತುಗಳೆಂಬುದು ಸ್ಪಷ್ಟ. ಇವರಲ್ಲಿ ಎಷ್ಟು ಜನ ಜಾತಿ ಚೌಕಟ್ಟನ್ನು ಮೀರಿದ ಸಾಮಾಜಿಕ ಜೀವನ ನಡೆಸುತ್ತಿದ್ದಾರೆ? ಅವರೆಲ್ಲ ಎಷ್ಟರ ಮಟ್ಟಿಗೆ ಜಾತ್ಯತೀತ, ಸಮಾನತೆಯ ಮೌಲ್ಯಗಳ ಪರ ಇದ್ದಾರೆಂಬುದನ್ನು ಗಮನಿಸಿದರೆ ನಿರಾಶೆಯಾಗುತ್ತದೆ.


'ಅನು ದೇವಾ' ವಿವಾದದಲ್ಲಿ ಇನ್ನೊಂದೆರಡು ಸೂಕ್ಷ್ಮ ವಿಚಾರಗಳಿವೆ. ಸ್ವತಃ scholar ಗಳಾಗಿರುವ ಬಹುತೇಕ ವೀರಶೈವ ಮಠಾಧೀಶರು ಬಂಜಗೆರೆಯವರ ನಿಲುವನ್ನು ಸಮರ್ಥಿಸದೇ ಹೋದರೂ ವಿರೋಧಿಸುತ್ತಿಲ್ಲ, ಹಾಗೇನೇ ಪುಸ್ತಕ ನಿಷೇಧಿಸಬೇಕೆಂದೂ ಹೇಳುತ್ತಿಲ್ಲ. ಆದರೆ ಕಾಂಗ್ರೆಸ್‌ನ ಒಬ್ಬ ಭೀಮಣ್ಣ ಖಂಡ್ರೆ ಮಾತ್ರ ರಕ್ತಪಾತದ ಬೆದರಿಕೆ ಹಾಕುತ್ತಿದ್ದಾರೆ. ಇದು ಬಂಜಗೆರೆಗಾಗಲೀ, ಅಥವಾ ಅವರ ಪುಸ್ತಕಕ್ಕಾಗಲೀ ಹಾಕುತ್ತಿರುವ ಬೆದರಿಕೆಯಲ್ಲ. ಬದಲಾಗಿ ಎಲ್ಲಾ ದಮನಿತ ಜಾತಿ ಜನಾಂಗದವರಿಗೆ, ವೈಚಾರಿಕ ಚಿಂತನೆಗಳ ಪ್ರಗತಿಪರರಿಗೆ ಹಾಗೂ ಸಮಾನತೆಯ ಆಶಯಗಳುಳ್ಳ ಬಳಗದವರಿಗೆ ಖಂಡ್ರೆಯ ಧಮಕಿ ಇದು. ಚರ್ಚೆ, ವಿಚಾರ ವಿನಿಮಯದ ಬದಲು ಹೀಗೆ ಬರೀ ಬೆದರಿಕೆಯ ಮಾತಾಡುತ್ತಾ ಮಧ್ಯಯುಗೀನ ಸೈನಿಕನಂತೆ ಖಂಡ್ರೆ ಖಡ್ಗ ಹಿಡಿದು ನಿಂತುಬಿಟ್ಟರೆ ಅದು ಬಸವಣ್ಣನಿಗೇ ಮಾಡುವ ಘೋರ ಅಪಚಾರ.

ಈ ಬೆದರಿಕೆ ಅಟ್ಟಹಾಸಗಳಿಗೆ ತಲೆಬಾಗದವರೂ ಕರ್ನಾಟಕದಲ್ಲಿ ಅಸಂಖ್ಯಾತ ಜನ ಇದ್ದಾರೆಂಬುದು ಖಂಡ್ರೆ, ಲೀಲಾದೇವಿ ಆರ್. ಪ್ರಸಾದ್ ಮತ್ತು ಪ್ರಮೀಳಾ ನೇಸರ್ಗಿ ತರದವರಿಗೆ ಗೊತ್ತಿರಲಿ.

-ಗೌರಿ ಲಂಕೇಶ್



> ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಎಂದು ಬೀಗುತ್ತಿರುವ ಭಾರತದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬಂದಿರುವ ಗತಿ ಇದು. ಇಲ್ಲಿ ಬಂಜಗೆರೆ ಹೇಳಿರುವುದೇ ಸರ್ವಕಾಲಿಕ ಸತ್ಯ ಎಂದು ಯಾರೂ ವಾದಿಸುತ್ತಿಲ್ಲ. ಆದರೆ ಅವರು ತಮ್ಮ ಸಂಶೋಧನೆಯ ಮೂಲಕ ತಮಗನ್ನಿಸಿದ್ದನ್ನು ಬರೆದಿದ್ದಾರೆ. ಅವರೇ ಹಲವಾರು ಕಡೆಗಳಲ್ಲಿ ಹೇಳಿರುವಂತೆ ಇದೇ ಅಂತಿಮ ಸತ್ಯವಲ್ಲ, ಸಂಶೋಧನೆ ಇನ್ನೂ ಮುಂದುವರೆಯಬೇಕಾಗಿದೆ. ಆದರೆ ಬಸವಣ್ಣನಂತಹ ಮಹಾಪುರುಷ ಕೇವಲ ಬ್ರಾಹ್ಮಣ ಜಾತಿಯಲ್ಲಿ ಮಾತ್ರ ಹುಟ್ಟಲು ಸಾಧ್ಯ, ದಲಿತ ಜಾತಿಗಳಲ್ಲಿ ಅಂತಹ ಅಪ್ರತಿಮ ಪ್ರತಿಭೆ ಹುಟ್ಟುವುದು ಅಸಾಧ್ಯ ಎಂಬ ಬ್ರಾಹ್ಮಣಶಾಹಿ ಮನಸ್ಥಿತಿಯಿಂದ ಹೊರಡುತ್ತಿರುವ ಈ ವಿರೋಧವನ್ನು ಎಲ್ಲರೂ ಖಂಡಿಸಬೇಕಿದೆ.




"ಆನು ದೇವಾ...."

ಅರೆಹುಚ್ಚರಂತಾದ ಖಾದಿ-ಕಾವಿಧಾರಿಗಳು

ಡಾ. ಬಂಜಗೆರೆ ಜಯಪ್ರಕಾಶ್‌ರವರ 'ಆನು ದೇವಾ ಹೊರಗಣವನು' ಎಂಬ ಸಂಶೋಧನಾ ಕೃತಿಯನ್ನು ಮುಟ್ಟುಗೋಲು ಹಾಕಬೇಕೆಂದು' ಆಗ್ರಹಿಸಿ ಇಡೀ ಕರ್ನಾಟಕದಾದ್ಯಂತ-ಅದರಲ್ಲೂ ಪ್ರಮುಖವಾಗಿ ಉತ್ತರ ಕರ್ನಾಟಕದಾದ್ಯಂತ-ಲಿಂಗಾಯತ ಖಾದಿ ಮತ್ತು ಕಾವಿ ಪಡೆ ಹುಯಿಲೆಬ್ಬಿಸುತ್ತಿದೆ. ಕೃತಿಯು ಪ್ರತಿಪಾದಿಸಿದ ವಿಚಾರಗಳ ವಸ್ತುನಿಷ್ಠತೆಯ ಬಗ್ಗೆ ಸಾಹಿತ್ಯಿಕ ಚರ್ಚೆ, ವಾಗ್ವಾದ, ಸಂಶೋಧನೆಗಳಂತಹ ಅಕಡೆಮಿಕ್ ಚಟುವಟಿಕೆಗಳ ಮೂಲಕ ಉತ್ತರ ನೀಡುವುದನ್ನು ಬಿಟ್ಟು ಅದನ್ನು ಮುಟ್ಟುಗೋಲು ಹಾಕಬೇಕೆಂದು ಒತ್ತಾಯಿಸುತ್ತಾ, ಇಲ್ಲದಿದ್ದರೆ ರಕ್ತಪಾತವಾಗುತ್ತದೆ ಎಂದು ಬೆದರಿಕೆಯನ್ನೊಡ್ಡುತ್ತಾ ಅದನ್ನೊಂದು ಬೀದಿರಂಪ ಮಾಡುತ್ತಿರುವುದರ ಹಿಂದೆ ಅವರವರ ರಾಜಕೀಯ ಹಿತಾಸಕ್ತಿಗಳಿರುವುದು ಮೇಲ್ನೋಟಕ್ಕೇ ಎದ್ದು ಕಾಣುತ್ತದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯ ಹರಣವಲ್ಲದೇ ಮತ್ತೇನಲ್ಲ. ಇದರ ಹಿಂದೆ ಲಿಂಗಾಯತ ಸಮೂಹವನ್ನು ದಿಕ್ಕುತಪ್ಪಿಸಿ, ಅವರನ್ನು ಓಲೈಸುವ ನಾಟಕವಾಡಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕೆ, ಮೂಲೆಗುಂಪಾಗಿ ಹೋಗಿರುವ ಕೆಲವು ರಾಜಕಾರಣಿಗಳು ನಡೆಸುತ್ತಿರುವ ಷಡ್ಯಂತ್ರವಿದೆ.

ಪಾಪುನ ಅವಕಾಶವಾದಿತನ

ಉತ್ತರ ಕರ್ನಾಟಕದ ಪತ್ರಕರ್ತ ಧುರೀಣ ಎಂದು ಲೇಬಲ್ ಅಂಟಿಸಿಕೊಂಡಿರುವ ಪಾಟೀಲ್ ಪುಟ್ಟಪ್ಪ (ಪಾಪು) 'ಆನು ದೇವಾ...' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಹೇಳಿಕೆ ಕೊಟ್ಟದ್ದೇ ತಡ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಭೀಮಣ್ಣ ಖಂಡ್ರೆಗೆ ತನ್ನ ಕರ್ತವ್ಯ ಪ್ರಜ್ಞೆ ಜಾಗ್ರತಗೊಂಡು ಮೈಮೇಲೆ ದೆವ್ವಹಿಡಿದವರಂತೆ ಆಡಲಾರಂಭಿಸಿದ್ದಾರೆ. ಜೊತೆಗೆ ಚಡ್ಡಿ ಸಂಸದರು, ಎಮ್ಮೆಲ್ಲೆಗಳು, ಕಾವಿದಾರಿಗಳು ತಾವೇನೂ ಕಡಿಮೆ ಇಲ್ಲವೆಂಬಂತೆ ಕೃತಿಯನ್ನು ಮುಟ್ಟುಗೋಲು ಹಾಕಬೇಕೆಂದು ಆಗ್ರಹಿಸುವ ಪೈಪೋಟಿಗಿಳಿದಿದ್ದಾರೆ. ಅದಕ್ಕಾಗಿ ತೀರಾ ವಿಕೃತ ಎನ್ನಬಹುದಾದಂತಹ ಪ್ರತಿಭಟನೆಯನ್ನೂ ನಡೆಸುತ್ತಿದ್ದಾರೆ.



ಪಾಟೀಲ್ ಪುಟ್ಟಪ್ಪ

ಪಾಟೀಲ್ ಪುಟ್ಟಪ್ಪನವರ ಮುಟ್ಟುಗೋಲು ಸಂಸ್ಕೃತಿ ಧಿಡೀರ್ ಎಂದು ಪ್ರಾರಂಭವಾದದ್ದೇನಲ್ಲ, ಈ ರೀತಿ ಬಣ್ಣ ಬದಲಾಯಿಸುತ್ತಾ ಪ್ರತಿಭಟನೆ ಮಾಡುವುದರಲ್ಲಿ ಅವರು ನಿಷ್ಣಾತರು. ಈ ಹಿಂದೆ 1990ರಲ್ಲಿ ಡಾ. ಎಂ.ಎಂ. ಕಲಬುರ್ಗಿ ಬಸವಣ್ಣನ ಬಗ್ಗೆ ಬರೆದ "ಮಾರ್ಗ" ಎಂಬ ಸಂಶೋಧನಾ ಗ್ರಂಥದಲ್ಲಿ ಬಸವಣ್ಣ ಲಿಂಗೈಕ್ಯರಾಗಲಿಲ್ಲ, ಬದಲಾಗಿ ಕೊಲೆಯಾಗಿದ್ದರು ಎಂದು ಹೇಳಿದ್ದಕ್ಕೆ, ಆ ಕೃತಿಯ ಕುರಿತು ವಿಮರ್ಶೆ, ಸಂಶೋಧನೆ ಏನೂ ಬೇಡ, ಅದನ್ನು ಮುಟ್ಟುಗೋಲು ಹಾಕಿ ಎಂದು ಮೈ ಪರಚಿಕೊಂಡಿದ್ದರು. ಅಲ್ಲದೇ ಧಾರವಾಡದ [illegible] ಕಾದಂಬರಿಕಾರ ಬಸವರಾಜ ಕಟ್ಟಿಮನಿಯವರ ಕಾದಂಬರಿಯಲ್ಲಿ ಬಸವಣ್ಣನವರ ಕುರಿತು ಅವಹೇಳನಕಾರಿಯಾಗಿ ಬರೆಯಲಾಗಿದೆ ಎಂದು ಆಪಾದಿಸಿದ್ದರು. ಈಗ ಮತ್ತದೇ ಹಳೇ ಚಾಳಿಯನ್ನು ಶುರುವಿಟ್ಟುಕೊಂಡು ಬಂಜಗೆರೆ ಜಯಪ್ರಕಾಶರ 'ಆನು ದೇವಾ...'ವನ್ನು ಮುಟ್ಟುಗೋಲು ಹಾಕಬೇಕೆಂದು ಒತ್ತಾಯಿಸುತ್ತಿದ್ದಾರೆ.

ದಿವಂಗತ ರಾಜು ಪಾಟೀಲ್ ಎಂಬ ಪಾಪುರವರ ಪುತ್ರ ಪಾಪುರವರು ಹೊರತರುವ 'ಪ್ರಪಂಚ' ಎಂಬ ವಾರಪತ್ರಿಕೆ ಹೊರಡುವ ಸ್ಥಳದಲ್ಲಿಯೇ ಅಶ್ಲೀಲ ಪುಸ್ತಕಗಳನ್ನು ಮುದ್ರಿಸುತ್ತಿರುವಾಗ ಪೊಲೀಸರಿಗೆ ಸಿಕ್ಕಿಹಾಕಿಕೊಂಡಿದ್ದರು. ಅದನ್ನು ಪಾಪು ಖಂಡಿಸದೇ ಪುತ್ರ ವಾತ್ಸಲ್ಯವನ್ನು ಮೆರೆದಿದ್ದರು. ಆಗ ಸಾಮಾಜಿಕ ಹಿತಾಸಕ್ತಿಯನ್ನು ಕಾಪಾಡುವ ಅವರ ಕರ್ತವ್ಯ ಪ್ರಜ್ಞೆ ಜಾಗೃತವಾಗಿರಲಿಲ್ಲ, ಈಗ ಬಂಜಗೆರೆಯವರ ಕೃತಿಯು ಹೊರಬಂದಾಕ್ಷಣ ಅದರ ಬಗ್ಗೆ 'ಇಲ್ಲಸಲ್ಲದ್ದನ್ನು ಆರೋಪಿಸಿ ಅವರ ಪಾಪ, ಅಲ್ಲಲ್ಲ ಕರ್ತವ್ಯ ಪ್ರಜ್ಞೆ ಜಾಗೃತಗೊಂಡುಬಿಟ್ಟಿದೆ.

ಧಾರವಾಡ ವಿದ್ಯಾವರ್ಧಕ ಸಂಘದ ಗುತ್ತಿಗೆ ಹಿಡಿದಿರುವ ಕೆಲವರು ಜೂನ್ ಒಂದರಂದು 'ಆನು ದೇವಾ...'ವನ್ನು ಮುಟ್ಟುಗೋಲು ಹಾಕುವುದಕ್ಕೆ ಒತ್ತಾಯಿಸಿದರೆ, ಪಾಪು ಜೂನ್ 15ರಿಂದ ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತೇವೆಂದು ಕೂಗಾಡಿದರು. ಇದರ ಬೆನ್ನಹಿಂದೆಯೇ ಅದೇ ವಿದ್ಯಾವರ್ಧಕ ಸಂಘದ ಎದುರು ಮನ್ಸೂರ್ ಮಠದ ಬಸವರಾಜ್ ದೇವರು ಹಾಗೂ ಕೆಲವು ದಲಿತ ಮುಖಂಡರು ಧರಣಿ ಕುಳಿತು ಇವರ ಕುತಂತ್ರವನ್ನು ಬಯಲಿಗೆಳೆದರು.


ಈ ಪಾಪು ಎಂತಹ ಚಾಣಾಕ್ಷ ಎಂದರೆ, ತನ್ನ ಮುಟ್ಟುಗೋಲು ಸಂಸ್ಕೃತಿಗೆ ಗಟ್ಟಿಯಾದ ಬೆಂಬಲ ರೂಪಿಸಿಕೊಳ್ಳಲು ಹಿರಿಯ ಕವಿ, ಸಾಹಿತಿ ಚೆನ್ನವೀರ ಕಣವಿಯವರ ಹೆಸರನ್ನೂ ಬಳಸಿಕೊಳ್ಳುವುದಕ್ಕೆ ಪ್ರಯತ್ನ ನಡೆಸಿದರು. ಕೊನೆಗೆ ಕಣವಿಯವರೇ ಖುದ್ದಾಗಿ 'ನಾನು ಬಂಜಗೆರೆಯವರ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಬೆಂಬಲಿಸುವುದಿಲ್ಲ' ಎಂದು ಹೇಳಿದ ಮೇಲೆ ಹಾಗೂ ಧಾರವಾಡ ವಿದ್ಯಾವರ್ಧಕ ಸಂಘದ ಅನೇಕ ಸದಸ್ಯರು ಕಣವಿಯವರ ದಾರಿಯನ್ನು ತುಳಿದ ಮೇಲೆ ಪಾಪು ತಂತ್ರ ಠುಸ್ ಎಂದಿತು.

ಆದರೆ ಪಾಪುರಂತಹವರನ್ನು ಬೆಂಬಲಿಸುವುದಕ್ಕೆ ಅಜ್ಞಾನಿಗಳ ಒಂದು ದಂಡೇ ಹುಬ್ಬಳ್ಳಿ-ಧಾರವಾಡಗಳಲ್ಲಿದೆ. ಜೂನ್ 11ರಂದು ಧಾರವಾಡದ ಬಸವಧರ್ಮ

ಕುಮಾರ್ ಬುರಡಿಕಟ್ಟಿ

ಹೋರಾಟ ಸಮಿತಿಯವರು ಪ್ರತಿಭಟನೆ ನಡೆಸಿ 'ಆನು ದೇವಾ...'ವನ್ನು ಮುಟ್ಟುಗೋಲು ಹಾಕಬೇಕೆಂದು ಒತ್ತಾಯಿಸಿದರು. ಅವರ ವಿಕೃತಿ ಎಷ್ಟರ ಮಟ್ಟಿಗಿತ್ತೆಂದರೆ ಬಂಜಗೆರೆಯವರ ಪ್ರತಿಕೃತಿಯನ್ನು ಮಾಡಿ ಅದಕ್ಕೆ ಚಪ್ಪಲಿಹಾರ ಹಾಕಿ, ಚಪ್ಪಲಿಯಿಂದ ಹೊಡೆದು ತಮ್ಮ ವಿಕೃತಿಯನ್ನು ಪ್ರದರ್ಶಿಸಿದ ನಂತರ ಅದನ್ನು ದಹಿಸಲಾಯಿತು.

ಇದೇ ಸಂದರ್ಭದಲ್ಲಿ ಈಗ ಎಲ್ಲೆಡೆ ಅಪ್ರಸ್ತುತವಾಗಿರುವ ರಾಷ್ಟ್ರೀಯ ಹಿಂದೂ ಸೇನೆಯ ಪ್ರಮೋದ್ ಮುತಾಲಿಕ್ ಎಂಬ ಚೆಡ್ಡಿ ಪುಸ್ತಕವನ್ನು ಯಾರೂ ಕೊಂಡು ಓದಬಾರದು ಎಂದು ಫರ್ಮಾನು ಹೊರಡಿಸಿದ. ಜಿ.ಪಂ. ಮಾಜಿ ಅಧ್ಯಕ್ಷ ವಿ.ಎಸ್. ಪಾಟೀಲ್ ಮಾತನಾಡುತ್ತಾ ಬಸವಣ್ಣನವರ ಚಿಂತನೆಗಳನ್ನು ವಿದೇಶಿಯರು ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ಕೆಲವು ಪಟ್ಟಭದ್ರರು ಬಂಜಗೆರೆಯವರಿಂದ ಈ ಕೃತಿಯನ್ನು ಬರೆಸಿದ್ದಾರೆಂದು ತಳಬುಡವಿಲ್ಲದ ವಾದವನ್ನು ಮುಂದಿಟ್ಟದ್ದಾರೆ. ಇನ್ನು ಹೋರಾಟ ಸಮಿತಿಯ ಅಧ್ಯಕ್ಷ ಎಂ.ಸಿ. ಬಂಡಿ ಎಂಬ ಶರಣ ಬಂಜಗೆರೆಯವರ ವಿರುದ್ಧ ಐಪಿಸಿ ಕಲಂ 295-ಎ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಅವರನ್ನು ಬಂಧಿಸಿ ಎಂದು ಕೂಗಾಡಿದ್ದಾರೆ.



ಭೀಮಣ್ಣ ಖಂಡ್ರೆ

ಇನ್ನೊಬ್ಬ ಶರಣ ಹುಬ್ಬಳ್ಳಿಯ ವಕೀಲರ ಸಂಘದ ಅಧ್ಯಕ್ಷ ಸಿ.ಆರ್. ಪಾಟೀಲ್ ಜೂನ್ 14ರಂದು 'ಆನು ದೇವ...' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಆಗ್ರಹಿಸಿ ಕೋರ್ಟ್ ಕಲಾಪವನ್ನೇ ಬಹಿಷ್ಕರಿಸಿದ. ಅಲ್ಲದೇ ಬಹಿರಂಗ ಸಭೆಯೊಂದರಲ್ಲಿ ಮಾತನಾಡುತ್ತಾ ಬಂಜಗೆರೆಯವರ ಮೇಲೆ ಕ್ರಿಮಿನಲ್ ಕೇಸು ದಾಖಲಿಸದೆ ಹೋದರೆ ಇತ್ತೀಚೆಗೆ ಪಂಜಾಬ್‌ನಂತೆ ಕರ್ನಾಟಕವೂ ಹೊತ್ತಿ ಉರಿಯುತ್ತದೆ ಎಂದು ಗುಡುಗಿದ್ದಾನೆ.

ಇದೇ ಸಮಯದಲ್ಲಿ ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನದಲ್ಲಿ ದಲಿತರು ಮತ್ತು ಬಸವರಾಜ ಸೂಳಿಬಾವಿ, ಡಾ. ಶಿವಾನಂದ ಕೆಳಗಿನಮನಿ, ಡಾ. ನಿಂಗಪ್ಪ ಮುದೇನೂರ್, ಡಾ. ವಿನಯ, ಪ್ರೊ. ಎಂ.ಡಿ. ಒಕ್ಕುಂದ, ಡಾ. ಸೈಯಪೂರ್‌ರಂತಹ ಪ್ರಗತಿಪರ ಚಿಂತಕರು, ಬರಹಗಾರರು ಹಾಗೂ ಕಲಾವಿದ ಬಿ. ಮಾರುತಿ, ಕಾರ್ಮಿಕ ನಾಯಕ ಬಿ.ಐ. ಈಳಗೇರ್, ದಲಿತ ನಾಯಕ ಮಾರುತಿ ಹಾಲಬಾವಿ ಮುಂತಾದವರು ಸೇರಿಕೊಂಡು 'ಆನುದೇವ...'ಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೇ ಕೃತಿಯನ್ನೇನಾದರೂ ಮುಟ್ಟುಗೋಲು ಹಾಕಿದರೆ ಉಗ್ರ ಪ್ರತಿಭಟನೆ ನಡೆಸಬೇಕಾಗುತ್ತದೆಂದು ಸರ್ಕಾರವನ್ನು ಎಚ್ಚರಿಸಿದ್ದಾರೆ.

ಹುಬ್ಬಳ್ಳಿಗೆ ಆಗಮಿಸಿದ್ದ ಲಿಂಗಾಯತ ಸಚಿವ ಮಹಾದೇವ್ ಪ್ರಸಾದ್ 'ಆನು ದೇವಾ...' ಕೃತಿಯಲ್ಲಿನ ವಿವಾದಿತ ವಿಚಾರಗಳ ಬಗ್ಗೆ ಒಂದು ಅಧ್ಯಯನ ಸಮಿತಿಯನ್ನು ರಚಿಸಲಾಗುವುದೆಂದೂ, ಅದರಲ್ಲಿ ಡಾ.ಚಿದಾನಂದ ಮೂರ್ತಿ ಕೂಡ ಇರುತ್ತಾರೆಂದೂ ಹೇಳಿಕೆ ನೀಡಿದ್ದಕ್ಕೆ ಕೆಂಡಾಮಂಡಲವಾದ ಪಾಪು, ಚಿದಾನಂದ ಮೂರ್ತಿಯವರ ಸಂಶೋಧನೆಯೂ ಪರಿಶುದ್ಧವೇನಲ್ಲ, ಕಳ್ಳನನ್ನು ಹಿಡಿಯಲು ಮತ್ತೊಬ್ಬ ಕಳ್ಳನನ್ನು ನಿಯೋಜಿಸಿದಂತಾಗುತ್ತದೆ ಎಂದು ಕೂಗಾಡಿದ್ದಾರೆ. ಅಲ್ಲದೆ, ಮನೆಗೆ ಬೆಂಕಿ ಬಿದ್ದಾಗ ಅದನ್ನು ಆರಿಸಬೇಕೆ ಹೊರತು ಬೆಂಕಿ ಹೇಗೆ ಬಿದ್ದಿತೆಂದು ತಿಳಿಯಲು ಸಮಿತಿ ರಚಿಸಿದಂತಾಗುತ್ತದೆ ಎಂದು ಹೇಳುತ್ತಾ ಸಮಿತಿಯೂ ಬೇಡ, ಚರ್ಚೆಯೂ ಬೇಡ ನೇರವಾಗಿ ಮುಟ್ಟುಗೋಲು ಹಾಕಿ ಎಂದು ಪರಚಿಕೊಂಡರು. ಒಟ್ಟಿನಲ್ಲಿ ಪಾಪುಗೆ ಈ ಕುರಿತು ಚರ್ಚೆಯಾಗುವುದೇ ಬೇಡವಾಗಿಹೋಗಿದೆ. ಅವರದೇನಿದ್ದರೂ ಮುಟ್ಟುಗೋಲು ಮಾಡಬೇಕೆಂಬ ಫ್ಯಾಸಿಸ್ಟ್ ನಿಲುವು.

ಭೀಮಣ್ಣ ಖಂಡ್ರೆ-ಮುತಾಲಿಕ್ ಎಂಬ ಚೆಡ್ಡಿಗಳು

ಪಾಪುರದು ಒಂದು ರೀತಿಯ ಫ್ಯಾಸಿಸ್ಟ್ ನಿಲುವಾದರೆ ಅಖಿಲ ಭಾರತ ವೀರಶೈವ ಮಹಾಸಭಾದ ಹಾಲಿ ಅಧ್ಯಕ್ಷ ಭೀಮಣ್ಣ ಖಂಡ್ರೆಯದು ಇನ್ನೊಂದು ರೀತಿಯ ಫ್ಯಾಸಿಸ್ಟ್ ವಾದ. ಪಾಪುಗಿರುವಂತೆ ಖಂಡ್ರೆಗೂ ಮುಟ್ಟುಗೋಲಿನ ಖಯಾಲಿ ಜಾಸ್ತಿ. ಅಲ್ಲದೇ ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಪುಸ್ತಕ ಸುಡುವ, ಮತ್ತು ಆ ಮೂಲಕ ಬೆದರಿಕೆ ಒಡ್ಡುವ ಕಾಯಿಲೆ ಬೇರೆ.

ಈ ಹಿಂದೆ ಎಚ್.ಎಸ್. ಶಿವಪ್ರಕಾಶ್‌ರ 'ಮಹಾಚೈತ್ರ' ಹಾಗೂ ಪಿ.ವಿ. ನಾರಾಯಣರ 'ಧರ್ಮಕಾರಣ' ಕೃತಿಗಳು ಹೊರಬಂದಾಗ ಅವು ಬಸವಣ್ಣನವರ ವ್ಯಕ್ತಿತ್ವಕ್ಕೆ ಕಳಂಕ ತಂದಿವೆ ಎಂದು ಅವುಗಳನ್ನು ಸುಟ್ಟುಹಾಕಿದ ಕುಖ್ಯಾತಿಗೆ ಪಾತ್ರರಾಗಿದ್ದಾರೆ ಖಂಡ್ರೆ. ಅವುಗಳನ್ನು ಬರೆದವರನ್ನೂ ತಿಥಿ ಮಾಡಬೇಕೆನ್ನುವಷ್ಟರ ಮಟ್ಟಿಗೆ ಹೋಗಿತ್ತು ಇವರ ಫ್ಯಾಸಿಸ್ಟ್ ಪ್ರವೃತ್ತಿ. ಹಾವನೂರ ವರದಿ ಜಾರಿಗೆ ಬಂದರೆ ಲಿಂಗಾಯತರಿಗೆ ಮೋಸವಾಗುತ್ತದೆ ಎಂದು ಅರಚುತ್ತಾ ವಿಧಾನಸಭೆಯಲ್ಲಿಯೇ ಅದರ ಪ್ರತಿಗಳನ್ನು ಸುಟ್ಟುಹಾಕಿದ ಅಪಕೀರ್ತಿಯೂ ಇವರಿಗಿದೆ. ಈಗ ಬಹಳ ದಿನಗಳಿಂದ ಯಾವುದೇ ವಿವಾದ ಸಿಗದ ಕಾರಣ ರಾಜಕಾರಣದಲ್ಲಿ ಹೆಚ್ಚು ಕಡಿಮೆ ಮೂಲೆಗುಂಪಾಗಿದ್ದ ಖಂಡ್ರೆಗೆ ಈಗ 'ಆನು ದೇವ...' ಒಂದು ವರದಾನವಾಗಿ ಬಂದಿದೆ. ಇದನ್ನೇ ನೆಪ ಮಾಡಿಕೊಂಡು ಕಂಡಕಂಡಲ್ಲಿ ವೀರಶೈವ ಧರ್ಮದ ವಕ್ತಾರನಂತೆ ಬೀಗುತ್ತಾ ಕೃತಿಯ ಬಗ್ಗೆ ಯದ್ವಾತದ್ವಾ ಮಾತನಾಡುತ್ತ ಜನರನ್ನು ದಿಕ್ಕುತಪ್ಪಿಸು

ಮೇಲ್ಜಾತಿ ಲಿಂಗವಂತರ ಹೊಸ ಕುತಂತ್ರ

ಇಲ್ಲದ ವಾದ, ಸಲ್ಲದ ವಾದ


ಒಂದು ವಾದವನ್ನು ಸಮರ್ಥವಾಗಿ ಎದುರಿಸಲಾಗದೇ ಹೋದಾಗ ಅಥವಾ ಅದನ್ನು ವಿರೋಧಿಸಲಾಗದೇ ಹೋದಾಗ ಒಂದು ವಾದದಲ್ಲಿರುವ ಕ್ಷುಲ್ಲಕ ಅಂಶಗಳನ್ನು ಅಥವಾ ತಪ್ಪು ವ್ಯಾಖ್ಯಾನಗಳನ್ನು ಮುಂದಿಟ್ಟುಕೊಂಡು, ಮೂಲ ವಾದವನ್ನು ಮರೆಸುತ್ತಾ ಬಂದಿರುವುದು ಬ್ರಾಹ್ಮಣ್ಯ ಕುತಂತ್ರದ ಹಳೆಯ ಭಾಗ. ಆದರೆ 'ಆನು ದೇವಾ ಹೊರಗಣವನು' ಪುಸ್ತಕದಲ್ಲಿ ಬಂಜಗೆರೆಯವರು ಎತ್ತಿರುವ ಅಂಶಗಳ ಬಗ್ಗೆ ಸರಿಯಾದ ತಾತ್ವಿಕ ಪ್ರತಿರೋಧ ಒಡ್ಡದ ಪರಿಸ್ಥಿತಿಯಲ್ಲಿರುವ ಸ್ಥಾವರ ಲಿಂಗವಂತರು ಈಗ ಬ್ರಾಹ್ಮಣ್ಯದ ಹಳೇ ತಂತ್ರವನ್ನೇ ಅನುಸರಿಸುತ್ತಿರುವುದು ಎದ್ದುಕಾಣುತ್ತಿದೆ.

ಬಸವಣ್ಣ ಮಾದಿಗನಾಗಿದ್ದರೆ ತಪ್ಪೇನು? ಅದು ಐತಿಹಾಸಿಕ ಸತ್ಯವಾಗಿದ್ದರೆ ನಾವದನ್ನು ತುಂಬು ಮನಸ್ಸಿನಿಂದ ಆಹ್ವಾನಿಸುತ್ತೇವೆ ಎಂದು ಸ್ಥಾವರ ಲಿಂಗಾಯತರು ಚಿದಾನಂದಮೂರ್ತಿಗಳ ನೇತೃತ್ವದಲ್ಲಿ ಹೇಳುತ್ತಿದ್ದರೂ, ಅವರ ಒಳಮನಸ್ಸು ಈ ಸಾಧ್ಯತೆಯನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿದೆ ಎಂಬುದಕ್ಕೆ ಉತ್ತರ ಕರ್ನಾಟಕದಲ್ಲಿ ಅವರು ಎಬ್ಬಿಸುತ್ತಿರುವ ಹುಯಿಲೇ ಸಾಕ್ಷಿ. ಮೊನ್ನೆ ಲೀಲಾದೇವಿ ಆರ್. ಪ್ರಸಾದ್ ಎಂಬ ಲಿಂಗವಂತರು 'ಬಸವಣ್ಣ ಹೀನ ಕುಲದಲ್ಲಿ ಹುಟ್ಟಲು ಸಾಧ್ಯವೇ ಇಲ್ಲ' ಎಂದು ಹೇಳಿಕೆ ನೀಡಿ ಸ್ಥಾವರ ಲಿಂಗವಂತರು 'ಆನು ದೇವಾ...'ವನ್ನು ವಿರೋಧಿಸುತ್ತಿರಲು ಕಾರಣವೇನೆಂಬುದನ್ನು ಸ್ಪಷ್ಟವಾಗಿ ಹೊರಹಾಕಿದ್ದಾರೆ. 'ಬಸವಣ್ಣ ಹೀನ ಕುಲದಲ್ಲಿ ಹುಟ್ಟಲು ಸಾಧ್ಯವಿಲ್ಲ' ಎಂಬುದರ ಹಿಂದೆ ಇರುವುದು 'ಎಲ್ಲಾ ಜಾತಿಗಳೂ ಒಂದೇ' ಎಂಬ ಬಸವನ ತತ್ವವಲ್ಲ, ಬದಲಿಗೆ ಮೇಲು ಕೀಳೆಂಬ ಮೇಲ್ಜಾತಿ ದುರಭಿಮಾನ. ಇನ್ನೂ ಲೀಲಾದೇವಿ ಆರ್. ಪ್ರಸಾದ್ ಮೇಲೆ ಯಾರೂ ಜಾತಿ ನಿಂದನೆ ಕೇಸು ಹಾಕದಿರುವುದೇ ಆಶ್ಚರ್ಯ. ಯಾರನ್ನಾದರೂ ಜೈಲಿಗೆ ಕಳಿಸಬೇಕಿದ್ದರೆ ಬಹಿರಂಗವಾಗಿ ದಲಿತರನ್ನು ಹೀನ ಜಾತಿಯವರು ಎಂದು ನಿಂದಿಸಿರುವ ಲೀಲಾದೇವಿ. ಆರ್. ಪ್ರಸಾದರನ್ನ.



ಆದರೆ ಮಿಕ್ಕ 'ಬುದ್ಧಿವಂತರು' ನೇರವಾಗಿ ತಮ್ಮೊಳಗಿರುವ ಈ ಭಾವನೆಯನ್ನು ಹೊರಹಾಕಲು ಸಾಧ್ಯವಿಲ್ಲವಾದ್ದರಿಂದ 'ಆನು ದೇವಾ'ದಲ್ಲಿರುವ ಕೆಲವು ಸಾಲುಗಳನ್ನು ತಪ್ಪಾಗಿ ವ್ಯಾಖ್ಯಾನಿಸಿ ಬಂಜಗೆರೆ ಅವರ ತಲೆದಂಡವನ್ನು ಆಗ್ರಹಿಸುತ್ತಿದ್ದಾರೆ. ಈಗ ಈ ಸ್ಥಾವರಿಗಳ ವಾದವೇನೆಂದರೆ, ಬಂಜಗೆರೆಯವರು ತಮ್ಮ ಪುಸ್ತಕದಲ್ಲಿ ಅಂಬೇಡ್ಕರ್ ಮತ್ತು ಕುವೆಂಪುರವರನ್ನೂ ಅವಮಾನಿಸಿದ್ದಾರೆ ಎಂಬುದು. ಅದರ ಸುತ್ತ ಚಳವಳಿಗಳನ್ನು, ಬಂದ್‌ಗಳನ್ನು ಸಂಘಟಿಸುತ್ತಿದ್ದಾರೆ. ಆಶ್ಚರ್ಯವೆಂದರೆ ಈ ಚಳವಳಿಯಲ್ಲಿ ಅಂಬೇಡ್ಕರ್ ಪ್ರತಿಮೆಗೆ ಚಪ್ಪಲಿ ಹಾರ ಹಾಕಿದ, ಅವಮಾನ ಮಾಡಿದ ಭಜರಂಗಿಗಳು, ಶ್ರೀರಾಮ ಸೇನೆಯವರು, ಇನ್ನಿತರ ಲಿಂಗವಂತರೂ ಸೇರಿಕೊಂಡಿರುವುದು. ಚೆಡ್ಡಿ ಹಾಕಿಕೊಂಡಿರುವ ಕೆಲವು ದಲಿತ ಸಂಘಟನೆಗಳು ಸಹ ಅಲ್ಲಲ್ಲಿ ಬಂಜಗೆರೆಯವರು ಅಂಬೇಡ್ಕರ್‌ಗೆ ಅವಮಾನ ಮಾಡಿದ್ದಾರೆ ಎಂದು ಕೂಗೆಬ್ಬಿಸಿವೆ.

ಆದರೆ 'ಆನು ದೇವಾ...'ದಲ್ಲಿ ಬಂಜಗೆರೆಯವರು ಕುವೆಂಪು ಮತ್ತು ಅಂಬೇಡ್ಕರ್ ಬಗ್ಗೆ ಏನು ಹೇಳಿದ್ದಾರೆ? ಆ ಪುಸ್ತಕದಲ್ಲಿ ಈ ವಿಷಯದ ಬಗ್ಗೆ 15ನೇ ಪುಟದಲ್ಲಿ ಪ್ರಸ್ತಾಪವಿದೆ. ಅದರ ಸಂಪೂರ್ಣ ಪಠ್ಯವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.....



"......ನಮ್ಮ ಸಮಕಾಲೀನ ಕಾಲಘಟ್ಟದಲ್ಲೇ ಬಾಳಿ ಬದುಕಿದ ಎರಡು ಮಹಾನ್ ಮೇಧಾವಿ ಚೇತನಗಳಾದ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ಅನಧಿಕೃತವಾಗಿ ಕೆಲವರು ಇಂತಹ ಕಿಡಿಗೇಡಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದ ಹಲವು ಪ್ರಸಂಗಗಳನ್ನು ನಾನು ಗಮನಿಸಿದ್ದೇನೆ. ಅಂಬೇಡ್ಕರ್ ಮತ್ತು ಕುವೆಂಪು ಅವರ ಜಾತಿಯನ್ನು ಮರೆಮಾಚಲು ಬರುವುದಿಲ್ಲವಾದ್ದರಿಂದ ಅವರ ಬಗ್ಗೆ ಇಂತಹ ವಕ್ರ ಅನಿಸಿಕೆಗಳನ್ನು ವ್ಯಕ್ತಪಡಿಸಲಾಗುತ್ತಿತ್ತು ಎಂದು ಕಾಣಿಸುತ್ತದೆ. ಈ ವಕ್ರ ಅಭಿಪ್ರಾಯದ ಸಾರಾಂಶವೆಂದರೆ, ಕುವೆಂಪು ಮತ್ತು ಅಂಬೇಡ್ಕರ್ ಶೂದ್ರ ಮತ್ತು ದಲಿತ ಜಾತಿಗೆ ಸೇರಿದವರಿರಬಹುದು. ಆದರೆ ಅವರ ಬುದ್ಧಿ ಸಾಮರ್ಥ್ಯವನ್ನು ನೋಡಿದರೆ, ಅವರು ಬ್ರಾಹ್ಮಣ ಸಂಯೋಗದಿಂದ ಜನ್ಮತಳೆದವರಿರಬೇಕು. ಇದು ಎಂತಹ ಅಮಾನವೀಯವಾದ ಕುತ್ಸಿತ ಮನೋಭಾವನೆಯ ಚಿಂತನೆ ಎಂಬುದು ನಮಗರ್ಥವಾಗುತ್ತದೆಯಾದರೂ ಇಂತಹ ಅಸತ್ಯಗಳನ್ನು ಕುಚೇಷ್ಟೆಗೆ ಪ್ರಚಲಿತಗೊಳಿಸುವವರ ಮನಃಸ್ಥಿತಿ ಯಾವ ಬಗೆಯದು. ಈ ಬಗೆಯ ಅಪದ್ಧಗಳನ್ನು ಮಾತನಾಡುವುದಕ್ಕೆ, ಹಾಗೆ ಮಾತನಾಡುವ ವ್ಯಕ್ತಿಗಳು ವ್ಯಕ್ತಿಗತವಾಗಿ ಕೆಡುಕರಾಗಿದ್ದರು ಎಂಬುದೊಂದೇ ಏಕೈಕ ಕಾರಣವಾಗಿರಲಾರದು.

ಅದಕ್ಕೆ ಬದಲಾಗಿ ಬುದ್ಧಿವಂತಿಕೆ, ಶ್ರೇಷ್ಠ ಸಾಧನೆ ಮುಂತಾದವಗಳೆಲ್ಲ ಸಾಧ್ಯವಾಗುವುದು ಕೆಲವು ನಿರ್ದಿಷ್ಟ ಜಾತಿಯವರಿಗೆ ಮಾತ್ರ ಹೊರತು ಇತರರಿಗೆ ಆ ಶ್ರೇಷ್ಠತೆಯನ್ನು ಸಾಧಿಸಲು ಸಾಧ್ಯವಿಲ್ಲ ಎಂಬ ಪೂರ್ವಾಗ್ರಹಪೀಡಿತ ದೃಷ್ಟಿಕೋನ ಇದರ ಹಿನ್ನೆಲೆಯಲ್ಲಿ ಕ್ರಿಯಾಶೀಲವಾಗಿರುತ್ತದೆ."

ಆ ಮೇಲಿನ ಪ್ಯಾರಾಗಳಲ್ಲಿ ಬಂಜಗೆರೆಯವರು ಹೇಗೆ ಕುವೆಂಪುರವರನ್ನಾಗಲಿ, ಅಂಬೇಡ್ಕರ್‌ರವರನ್ನಾಗಲಿ ಅವಮಾನಿಸಿದ್ದಾರೆ?

ಅಂದಹಾಗೆ, ಇವತ್ತು ಮಾದಿಗ ಸಮುದಾಯವನ್ನು, ಬಸವಣ್ಣನವರನ್ನು ಅವಮಾನಿಸುತ್ತಿರುವುದು ಬೇರಾರೂ ಅಲ್ಲ, ಬದಲಾಗಿ ಲೀಲಾದೇವಿ ಆರ್. ಪ್ರಸಾದ್ ಮತ್ತು ಆಕೆಯಂತಹ ಬುದ್ಧಿಹೀನರು. ಅವರಿಗೆಲ್ಲಾ ಪ್ರಜ್ಞಾವಂತರು ತಕ್ಕದಾದ ಪಾಠ ಕಲಿಸಬೇಕಿದೆ. ●

ತ್ತಿದ್ದಾರೆ. ಇದರಿಂದ ಲಿಂಗಾಯತ ಸಮುದಾಯಕ್ಕೆ ಎಷ್ಟು ಒಳ್ಳೆಯದಾಗುತ್ತೋ ಗೊತ್ತಿಲ್ಲ, ಆದರೆ ಇದರಿಂದ ತಮಗೆ ರಾಜಕೀಯ ಲಾಭವಾದರೆ ಸಾಕು.

ಹೀಗಾಗಿ 'ಆನು ದೇವ...' ವಿರುದ್ಧ ಅತ್ತ ಬೀದರ್, ಗುಲಬರ್ಗಾಗಳಲ್ಲಿ ಖಂಡ್ರೆಯ ಅವಾಂತರಗಳು ಪ್ರಾರಂಭವಾಗಿವೆ. ಕೃತಿಯನ್ನು ಮುಟ್ಟುಗೋಲು ಹಾಕದಿದ್ದರೆ ಜೂನ್ 17ರಿಂದ ರಾಜ್ಯಾದ್ಯಂತ ಪ್ರತಿಭಟನೆ ಮಾಡುವುದಾಗಿ ಗುಟುರು ಹಾಕಿಕೊಂಡು ತಿರುಗಾಡುತ್ತಿದ್ದ ಖಂಡ್ರೆಗೆ ಸಾಥ್ ನೀಡಿದವರು ಮಹಾಸಭಾದ ಉಪಾಧ್ಯಕ್ಷ ವಿಶ್ವನಾಥ್ ರೆಡ್ಡಿ ಮುದ್ನಾಳ್. ಇನ್ನು ಪ್ರವೀಣ್ ಶೆಟ್ಟಿ ನೇತೃತ್ವದ ಕರ್ನಾಟಕ ರಕ್ಷಣಾ ವೇದಿಕೆ ಎಂಬ ಪಡ್ಡೆ ಹುಡುಗರ ಗ್ಯಾಂಗ್ 'ಆನು ದೇವ...'ವನ್ನು ಎಷ್ಟರ ಮಟ್ಟಿಗೆ ಓದಿ ಅರ್ಥೈಯಿಸಿಕೊಂಡಿದ್ದಾರೋ ಗೊತ್ತಿಲ್ಲ, ಆದರೆ ಖಂಡ್ರೆಗೆ ದನಿಗೂಡಿಸುತ್ತಾ ಕೃತಿಯನ್ನು ಬ್ಯಾನ್ ಮಾಡಬೇಕೆಂದು ಆಗ್ರಹಿಸುತ್ತಿದ್ದಾರೆ. ಅಫಜಲ್ಪುರದ ಭಾರತೀಯ ಬಸವ ಬಳಗ, ಬಸವ ವಿಶ್ವಸ್ಥ ಮಂಡಳಿ ಹಾಗೂ ವಚನೋತ್ಸವ ಸಮಿತಿಯ ಶರಣಪ್ಪ, ಜಗದೇವಪ್ಪ ಅಂಜುಟಗಿ, ಮಹಾನಂದ ಮ್ಯಾಳೇರಿ, ಡಾ. ಬಿರಾದಾರ್ ಮುಂತಾದವರು ಈ ಕೃತಿ ಓದುವುದಕ್ಕೂ ಯೋಗ್ಯವಿಲ್ಲ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಅಖಿಲ ಕರ್ನಾಟಕ ರಾಜ್ಯ ಕುಂಬಾರ ಸಂಘದ ಅಧ್ಯಕ್ಷ ಡಾ. ರವೀಂದ್ರ ಕುಂಬಾರ ಕೂಡ ಈ ಕೃತಿ ಶರಣ ಪರಂಪರೆಗೆ ಧಕ್ಕೆ ತಂದಿದೆ ಎಂದು ಖಂಡ್ರೆ-ಮುದ್ನಾಳ್ ಜೋಡಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ವಾಸ್ತವದಲ್ಲಿ ಖಂಡ್ರೇಯೇನೂ ಸಾಚಾ ವ್ಯಕ್ತಿಯಲ್ಲ. ಅವರ ಭ್ರಷ್ಟತೆಗಳನ್ನು ಅರಿಯಬೇಕೆಂದರೆ ಅವರ ಮತಕ್ಷೇತ್ರ ಭಾಲ್ಕಿಗೆ ಒಮ್ಮೆ ಹೋಗಿಬರಬೇಕು. ತನ್ನ ತೀರದ ಧನದಾಹದಿಂದ ಲಿಂ. ಚನ್ನಬಸಪ್ಪ ಪಟ್ಟದೇವರು ಸ್ಥಾಪಿಸಿದ್ದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯನ್ನೇ ಖಂಡ್ರೆ ನುಂಗಿ ಹಾಕಿದ್ದಾರೆ. ರಾಜಕೀಯವಾಗಿ ಮೂಲೆಗುಂಪಾಗಿ ಹೋಗಿರುವ ಅವರು ಮತ್ತೆ ಮೇಲೇಳಬೇಕೆಂದರೆ ಅವರಿಗೆ ಲಿಂಗಾಯತರ ಅನುಕಂಪ ಬೇಕೇಬೇಕು. ಹಾಗಾಗಿ 'ಆನು ದೇವ...' ವಿವಾದವನ್ನು ಸೃಷ್ಟಿಸಿ ಹೀರೋ ಆಗಲು ಹೊರಟಿದ್ದಾರಷ್ಟೆ. ಇನ್ನು ಮುದ್ನಾಳ್ ರಾಜ್ಯ ಪ್ರಶಸ್ತಿಯನ್ನೇ ತಿರಸ್ಕರಿಸಿ ಒಂದಿಷ್ಟು ಹೆಸರು ಮಾಡಲು ಪ್ರಯತ್ನಿಸಿದ್ದರೂ ಅದರಿಂದ ಹೆಚ್ಚೇನೂ ಉಪಯೋಗವಾಗಲಿಲ್ಲ, ಹಾಗಾಗಿ ಖಂಡ್ರೆಯ ಹೋರಾಟ-ಹಾರಾಟದ ಸರ್ಕಸ್‌ಗೆ ಸೇರಿಕೊಂಡಿದ್ದಾರೆ.

ಚರಂತಿಮಠನ ಅರಚಾಟ

'ಆನು ದೇವ...' ಕೃತಿಯ ಬಗ್ಗೆ ಕಾವಿ ಮತ್ತು ಖಾದಿಗಳು ಎಲ್ಲೆಂದರಲ್ಲಿ ಮಾಡಿದ ಕಿರುಚಾಟಕ್ಕೆ ಬಾಗಲಕೋಟೆಯಲ್ಲಿ ಕುಂಭಕರ್ಣ ನಿದ್ದೆಯಲ್ಲಿದ್ದ ಶಾಸಕ ವೀರಣ್ಣ ಚರಂಡಿಮಠ, ಕ್ಷಮಿಸಿ ವೀರಣ್ಣ ಚರಂತಿಮಠ ಕೂಡ ಎಚ್ಚರಗೊಂಡುಬಿಟ್ಟ. ಈತ ಬಸವಣ್ಣನ ಬಹಳ ದೊಡ್ಡ ಅಭಿಮಾನಿಯೇನಲ್ಲ, ಬಸವಣ್ಣನ ತತ್ವಗಳ ವಿರುದ್ಧ ಏನೇನು ಮಾಡಬಹುದೋ ಅದನ್ನೆಲ್ಲಾ ಮಾಡಿದ ಧೀರನೀತ. ಆದರೆ ಎಲ್ಲರೂ ಬಸವಣ್ಣನಿಗೆ, ಲಿಂಗಾಯತರಿಗೆ ಅನ್ಯಾಯವಾಗುತ್ತಿದೆ ಎಂದು ಹುಯಿಲೆಬ್ಬಿಸುತ್ತಿದ್ದಾರಾದ್ದರಿಂದ ತಾನೂ ಸುಮ್ಮನಿರಬಾರದೆಂದು ಉಳಿದೆಲ್ಲರ ಕಿರುಚಾಟಕ್ಕಿಂತ ಜೋರಾಗಿ ಅರಚಾಟ ಮಾಡುತ್ತಾ ಗಮನ ಸೆಳೆಯುತ್ತಿದ್ದಾನೆ.



ಚರಂತಿ ಮಠ

ಎಲ್ಲರಿಗಿಂತ ತಾನೇ ಶ್ರೇಷ್ಠ ಹೋರಾಟಗಾರನೆಂದು ತೋರಿಸಿಕೊಳ್ಳುವುದಕ್ಕೆ, ಮೊನ್ನೆ ಈತ ಬಾಗಲಕೋಟೆ ಬಂದ್‌ಗೆ ಕರೆ ನೀಡಿದ್ದ. ಚರಂತಿಮಠನನ್ನು ಓಲೈಸಿಕೊಳ್ಳಲು ಜಿಲ್ಲೆಯ ಎಲ್ಲ ಕಾವಿಧಾರಿಗಳೂ ಇವನ ಅರಚಾಟಕ್ಕೆ ಬೆಂಬಲಿಸಿ ಬೀದಿಗೆ ಇಳಿದದ್ದು ದುರಂತ. ಇಳಕಲ್ ಮಹಾಂತ ಸ್ವಾಮಿ ಬಂಜಗೆರೆಯವರನ್ನು ಭಂಡಗೆರೆ ಎಂದು ಕರೆದು ತಮ್ಮ ನೈಜತನವನ್ನು ಪ್ರದರ್ಶಿಸಿಕೊಂಡಿದ್ದಾರೆ.

ಚರಂತಿಮಠನಿಗೆ ಬೆಂಬಲವಾಗಿ ಜಿಲ್ಲೆಯ ಎಲ್ಲ ಚೆಡ್ಡಿ ಶಾಸಕರು ಮತ್ತು ಸಂಸದರು ಒಗ್ಗಟ್ಟಿನಿಂದ ನಿಂತಿದ್ದಾರೆ. ಕೃತಿಯ ಬಗ್ಗೆ ಗಂಧಗಾಳಿ ಗೊತ್ತಿಲ್ಲದ ಜಮಖಂಡಿಯ ಬಿದ್ದಿ ವ್ಯವಹಾರಿ, ಸ್ತ್ರೀಲೋಲ ಹಪಾಹಪಿ- ಹೀಗೆ ಏನೇನೋ ಅಡ್ಡ ಬಿರುದುಗಳನ್ನು ಗಳಿಸಿಕೊಂಡಿರುವ ಸಿದ್ದು ಸವದಿ ಎಂಬುವವನು ಅತ್ಯಂತ ಕೆಟ್ಟದಾದ ಶಬ್ದಗಳನ್ನು ಬಳಸಿ ಮಾತನಾಡಿದ್ದಾನೆ. ಇಂತಹ ಈ ಮಾತುಗಳನ್ನು ಆಡಿದ ಸವದಿಯನ್ನು ಚೆಡ್ಡಿ ಪತ್ರಕರ್ತರು ಭಾರಿ ಬುದ್ಧಿವಂತ ಎಂದು ಹಾಡಿ ಹೊಗಳುತ್ತಿದ್ದಾರೆ.

ಅಂತೂ ಇಂತೂ ಅವರಿವರ ಬೆಂಬಲಗಳಿಸಿದ ಚರಂತಿಮಠ ಕೊನೆಗೂ ಬಾಗಲಕೋಟೆ ಬಂದ್‌ನ್ನು ಮಾಡಿ ಮುಗಿಸಿದ. ಈತ ಇತ್ತೀಚೆಗೆ ಬಾಗಲಕೋಟೆ ವರ್ತಕರ ಸಂಘದ ಚೇರ್‌ಮ್ಯಾನ್ ಕ್ಷಮಿಸಿ ಛೇರ್‌ಮ್ಯಾನ್ ಆದ ಮೇಲಂತೂ ಇಡೀ ಬಾಗಲಕೋಟೆ ಇವನ ಹಿಡಿತಕ್ಕೆ ಬಂದು ಬಿಟ್ಟಿದೆ. ತನ್ನ ಛೇರ್‌ಮ್ಯಾನ್‌ಗಿರಿಯನ್ನು ಬಳಸಿಕೊಂಡ ಚರಂತಿಮಠ ಎಲ್ಲಾ ವರ್ತಕರಿಗೆ ಬಂದ್ ದಿನ ಅಂಗಡಿ ಮುಂಗಟ್ಟುಗಳನ್ನು ಮುಚ್ಚುವಂತೆ ತಾಕೀತು ಮಾಡಿದ್ದ. ಹಾಗಾಗಿ ಒಂದರ್ಥದಲ್ಲಿ ಬಂದ್‌ನ್ನು ಯಶಸ್ವಿ ಮಾಡಿಯೇ ಬಿಟ್ಟ. ಬಾಗಲಕೋಟೆಯ ಚೆಡ್ಡಿ ಪತ್ರಕರ್ತರು ಇದಕ್ಕೆ ಭಾರಿ ಪ್ರಚಾರ ನೀಡಿದ್ದು ಮತ್ತಷ್ಟು ಸಾರ್ವಜನಿಕರನ್ನು ದಿಕ್ಕು ತಪ್ಪಿಸುವುದಕ್ಕೆ.ಹಾದಿ ಮಾಡಿತು.

ಆದರೆ, ಜಿಲ್ಲೆಯ ಉಸ್ತುವಾರಿ ಸಚಿವ ಹಾಗೂ ದಲಿತರ ಸ್ವಯಂಘೋಷಿತ ನಾಯಕ ಗೋವಿಂದ ಕಾರಜೋಳ್ ಕೃತಿಯ ಪರವಾಗಿ ಒಂದು ಮಾತನಾಡಲಿಲ್ಲ. ಹೋಗಲಿ, ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತು ತುಟಿಪಿಟಕ್ಕೆನ್ನಲಿಲ್ಲ. ಮಾತನಾಡಿದರೆ ಎಲ್ಲಿ ಮೂಲೆಗುಂಪಾಗಿ ಬಿಡುತ್ತೇನೋ ಎಂಬ ಭಯ ಇರಬೇಕು ಆತನಿಗೆ.

ಒಟ್ಟಿನಲ್ಲಿ ಇವರೆಲ್ಲರ ಅರಚಾಟ, ಕಿರುಚಾಟ, ಆರ್ಭಟಗಳ ಪರಿಣಾಮವಾಗಿ ಬಾಗಲಕೋಟೆಯಲ್ಲಿ 'ಆನು ದೇವ...' ಕೃತಿಯನ್ನು ಬಹಿರಂಗವಾಗಿ ಮಾರಾಟ ಮಾಡುವ ಪರಿಸ್ಥಿತಿ ಇಲ್ಲವಾಗಿ ಹೋಗಿದೆ. ಅದು ಆಚರಣೆಯಲ್ಲಿ ಅಘೋಷಿತವಾಗಿ ಬ್ಯಾನ್ ಆಗಿಹೋಗಿದೆ. ಕೃತಿಯನ್ನು ಮಾರಾಟ ಮಾಡು ವುದಕ್ಕೆ ಪುಸ್ತಕ ವ್ಯಾಪಾರಿಗಳೂ ಹಿಂಜರಿಯುತ್ತಿದ್ದಾರೆ.

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ಎಂದು ಬೀಗುತ್ತಿರುವ ಭಾರತದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬಂದಿರುವ ಗತಿ ಇದು. ಇಲ್ಲಿ ಬಂಜಗೆರೆ ಹೇಳಿರುವುದೇ ಸರ್ವಕಾಲಿಕ ಸತ್ಯ ಎಂದು ಯಾರೂ ವಾದಿಸುತ್ತಿಲ್ಲ, ಆದರೆ ಅವರು ತಮ್ಮ ಸಂಶೋಧನೆಯ ಮೂಲಕ ತಮಗನ್ನಿಸಿದ್ದನ್ನು ಬರೆದಿದ್ದಾರೆ. ಅವರೇ ಹಲವಾರು ಕಡೆಗಳಲ್ಲಿ ಹೇಳಿರುವಂತೆ ಇದೇ ಅಂತಿಮ ಸತ್ಯವಲ್ಲ, ಸಂಶೋಧನೆ ಇನ್ನೂ ಮುಂದುವರೆಯಬೇಕಾಗಿದೆ. ಆದರೆ ಬಸವಣ್ಣನಂತಹ ಮಹಾಪುರುಷ ಕೇವಲ ಬ್ರಾಹ್ಮಣ ಜಾತಿಯಲ್ಲಿ ಮಾತ್ರ ಹುಟ್ಟಲು ಸಾಧ್ಯ, ದಲಿತ ಜಾತಿಗಳಲ್ಲಿ ಅಂತಹ ಅಪ್ರತಿಮ ಪ್ರತಿಭೆ ಹುಟ್ಟುವುದು ಅಸಾಧ್ಯ ಎಂಬ ಬ್ರಾಹ್ಮಣಶಾಹಿ ಮನಸ್ಥಿತಿಯಿಂದ ಹೊರಡುತ್ತಿರುವ ಈ ವಿರೋಧವನ್ನು ಎಲ್ಲರೂ ಖಂಡಿಸಬೇಕಿದೆ. ಇನ್ನೊಂದೆಡೆ ಇದನ್ನು ಒಂದು ವಿವಾದವನ್ನಾಗಿ ಮಾರ್ಪಡಿಸಿ ರಾಜಕೀಯದ ಬೇಳೆ ಬೇಯಿಸಿಕೊಳ್ಳುತ್ತಿರುವ ರಾಜಕಾರಣಿಗಳನ್ನೂ ವಿರೋಧಿಸಬೇಕಿದೆ. ಬೇಕಿದ್ದರೆ ಬಂಜಗೆರೆಯವರು ತಾಳಿರುವ ನಿಲುವುಗಳು, ತಲುಪಿರುವ ತೀರ್ಮಾನಗಳು ಹೇಗೆ ಸರಿಯಿಲ್ಲ ಎಂಬುದನ್ನು ಸಂಶೋಧನೆ ಮಾಡಿ ತೋರಿಸಬಹುದು. ಆದರೆ ಮುಟ್ಟುಗೋಲು ಹಾಕುವಂಥ ಫ್ಯಾಸಿಸ್ಟ್ ಸಂಸ್ಕೃತಿಯನ್ನು ನಾಡಿನ ಎಲ್ಲ ಪ್ರಜ್ಞಾವಂತ ನಾಗರಿಕರು ಒಕ್ಕೊರಲಿನಿಂದ ಖಂಡಿಸಬೇಕಿರುವುದು ಇಂದಿನ ತುರ್ತು ಅಗತ್ಯ.

'ಆನು ದೇವಾ....' ಬಗ್ಗೆ ಇಷ್ಟೆಲ್ಲಾ ಅರಚಾಟ, ಕಿರುಚಾಟಗಳು ನಡೆಯುತ್ತಿದ್ದರೂ ಇವುಗಳ ಅಬ್ಬರದಲ್ಲಿ ತೂರಿ ಹೋಗದೇ ಪ್ರಜ್ಞಾವಂತಿಕೆಯನ್ನು ಪ್ರದರ್ಶಿಸಿದ ಮಠಾಧೀಶರೂ ಇದ್ದಾರೆ. ಹುಬ್ಬಳ್ಳಿಯ ಮೂರು ಸಾವಿರ ಮಠಾಧೀಶರಾಗಲೀ, ಗದುಗಿನ ತೋಂಟದಾರ್ಯರಾಗಲೀ ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂಬ ವಾದವನ್ನು ಸಾರಾಸಗಟಾಗಿ ತಿರಸ್ಕರಿಸುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾದ ನಿಲುವನ್ನು ತೆಗೆದುಕೊಂಡಿದ್ದಾರೆ. ಆ ಮೂಲಕ ಇತರ ಕಾವಿಧಾರಿ ಶರಣರಿಗೆ ಆದರ್ಶವಾಗಿದ್ದಾರೆ. ಅಂತೆಯೇ ಬಂಜಗೆರೆಯವರೊಂದಿಗೆ ಕೃತಿಯ ಬಗ್ಗೆ ಮುಕ್ತವಾದ ಚರ್ಚೆ, ವಿಮರ್ಶೆ ಮತ್ತು ಸಂಶೋಧನೆಗಳನ್ನು ನಡೆಸಬೇಕೆಂದು ಶಿವ ಮಾತು ಹೇಳಿದ್ದಾರೆ. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯದ ಗಂಧಗಾಳಿ ಗೊತ್ತಿಲ್ಲದ ಕೆಲವು ಪುಂಡ ಕಾವಿಗಳು ಹಚ್ಚುತ್ತಿರುವ ಬೆಂಕಿಗೆ ರಾಜಕಾರಣಿಗಳು ತುಪ್ಪ ಸುರಿಯುತ್ತಿರುವುದು ಅವರಿಗೂ ಬೇಸರ ತಂದಂತಿದೆ. ■

ಗೋರಿಪಾಳ್ಯ: ಗ್ಯಾಂಗ್‌ವಾರ್‌ಗೆ ಬಲಿಯಾದ ಮುಸ್ಲಿಂ ಹುಡುಗಿಯರು!

ಗೋರಿಪಾಳ್ಯದ ಮುಸ್ಲಿಂ ಹುಡುಗಿಯರ ಕಿಡ್ನಾಪ್ ಸಿಡುಗಿಗೆ ಇದು ಮತ್ತೊಂದು ಸೇರ್ಪಡೆಯಷ್ಟೆ!

ನಿಷಾ ಬೇಗಮ್(ಹೆಸರನ್ನು ಬದಲಾಯಿಸಲಾಗಿದೆ) ಎಂಬ ಹದಿನಾಲ್ಕರ, ಇನ್ನೂ ಎಸ್ಸೆಲ್ಸಿ ಕೂಡ ಮುಗಿಸದ, ಹಾಲುಗಲ್ಲದ ಬಾಲೆಯನ್ನು ಕಲಾಸಿಪಾಳ್ಯದ ದೊಡ್ಡ ಮಸೀದಿಯ ಜಾಮೀಯಾ ಉಲ್ ಉಲೂಮ್ ಉರ್ದು ಶಾಲೆಯಿಂದಲೇ ಹೊತ್ತೊಯ್ದು ಒಂದು ವಾರದ ಕಾಲ ಒತ್ತೆಯಾಗಿಟ್ಟು ಕೊಂಡ ಪಾತಕಿ ಉಮರ್ ಪಾಷಾ ಗೋರಿಪಾಳ್ಯದ ಕಾಂಗ್ರೆಸ್ ಮುಖಂಡ ಆಲ್ತಾಫ್‌ನ ಇಬ್ಬರು ತಮ್ಮಂದಿರನ್ನು ಕೊಂದ ಕೇಸಿನ ಪ್ರಮುಖ ಆರೋಪಿ!


ಆರೀಫ್ ಪಾಷಾ


ಉಮರ್ ಪಾಷಾ


ಫಾರೂಕ್

ಸದ್ಯ ಕೆ.ಆರ್. ಮಾರ್ಕೆಟ್ಟಿನ ನಿಷ್ಠುರಿ ಪೊಲೀಸ್ ಇನ್ಸ್‌ಪೆಕ್ಟರ್ ಬಾಬು ನರೋನ ತಲೆ ಕೆಡಿಸಿಕೊಳ್ಳದೇ ಹೋಗಿದ್ದರೆ ನಿಷಾ ಬೇಗಮ್ ಈ ಹೊತ್ತಿಗೆ ಏನು ಗತಿಯಾಗುತ್ತಿದ್ದಳೊ. ಉಮರ್ ಪಾಷಾನನ್ನು ಜೈಲಿಗೂ ಹಾಗೂ ಕಿಡ್ನಾಪಾದ ಬಾಲಕಿಯನ್ನು ಆಕೆಯ ಪೋಷಕರಿಗೂ ಸಾಗಹಾಕಿದ ಬಾಬು ನರೋನ್ನರನ್ನು ಗೋರಿಪಾಳ್ಯದ ಬೆಟ್ಟಳ್ಳಿ ಖಾಂದಾನ್‌ನ ಸರಿಸುಮಾರು ಹದಿನೈದು ಸಾವಿರದಷ್ಟಿರುವ ಮುಸ್ಲಿಮರು ಕೃತಜ್ಞತೆಯಿಂದ ಸ್ತುತಿಸಿದ್ದಾರೆ.

ಮಾಜಿ ಕೌನ್ಸಿಲರ್ ಆರಿಫ್ ಹುಟ್ಟು ಹಾಕಿದ ಮಜೂರ್‌ಗಳು, ಮೊಬೈಲ್ ಕಳ್ಳರು, ಸ್ನ್ಯಾಪ್ ಕಳ್ಳರು, ರೌಡಿಗಳು ಕಾಲಕ್ರಮೇಣ ಗೋರಿಪಾಳ್ಯದ ಮುಸ್ಲಿಂ ಸಂತತಿಗೇ ಕಂಟಕರಾಗುತ್ತಿದ್ದಾರೆ. ಹೀಗೆ ಮರ್ಯಾದಸ್ಥ ಮುಸ್ಲಿಂ ಮನೆತನಗಳ ಯುವತಿಯರನ್ನು ಇಲ್ಲಿನ ಮುಸ್ಲಿಂ ಪಾತಕಿಗಳು ಪದೇಪದೇ ಅಪಹರಿಸಿ ಮುಕ್ಕುವುದು, ಕೊಂದು ಹಾಕುವುದು ಇಂದು ನಿನ್ನೆಯ ಪಿಡುಗೇನಲ್ಲ. 2006 ರ ಡಿಸೆಂಬರ್ 27 ರಂದು ಇದೇ ಆರಿಫ್‌ನ ಬಲಗೈ ಬಂಟ ತೋತಾ ರಫೀಕ್ ಗೋರಿಪಾಳ್ಯದ 9 ನೇ ಕ್ರಾಸಿನ ಶಫೀವುಲ್ಲಾ ಖಾನ್ ಎಂಬಾತನ ಮಗಳು ಆಸ್ಮಾತಾಜ್‌ಳನ್ನು ಹೊತ್ತೊಯ್ದು ರೇಪ್ ಮಾಡಿ ಅಮಾನುಷವಾಗಿ ಕೊಂದು ಹಾಕಿದ್ದ. ಈ ತೋತಾ ರಫೀಕ್ ಗೋರಿಪಾಳ್ಯದ ಕುಖ್ಯಾತ ಮೊಬೈಲ್ ಕಳ್ಳ. ಅಲ್ತಾಫ್ ಸಹೋದರರು ಜೋಡಿ ಹತ್ಯೆಯಲ್ಲಿ ಈತನೂ ಭಾಗೀದಾರನೆ.

ಅದಕ್ಕೂ ಮುನ್ನ ಒಂದಲ್ಲ ಎರಡು ಬಾರಿ ಲೈವ್‌ಬ್ಯಾಂಡ್ ಹುಡುಗಿಯರನ್ನು ಹೊತ್ತೊಯ್ದು ಪೀಡಿಸಿ ಜೈಲು ಕಂಡಿದ್ದ ತೋತಾ ರಫೀಕ್ ಆರಾಫತ್ ನಗರದ ಬಡ ಮುಸ್ಲಿಂ ಆಟೋ ಚಾಲಕನ ಮಗಳನ್ನು ಕಿಡ್ನಾಪ್ ಮಾಡಿಯೇ ಮದುವೆಯಾಗಿದ್ದ. ಮದುವೆಯಾಗಿಯೂ ಮೋಮಿನ್‌ಪುರದ ಬತ್ತಿ ಉಜ್ಜುವ ಮತ್ತೊಬ್ಬ ಯುವತಿಯನ್ನು ಎಳೆದೊಯ್ದು ಹಾಳು ಮಾಡಿದ್ದ. ಅದಾಗಿ ಆರೇ ತಿಂಗಳಿಗೆ ಪಕ್ಕದ ಸುಜಾತ ಟೆಂಟ್ ಹಿಂಬಾಗದ ಬೀಫ್ ಅಂಗಡಿಯವನ ಮನೆಗೆ ನುಗ್ಗಿ ಆತನ ಮಗಳನ್ನು ಮುಕ್ಕಿದ್ದ. ತದನಂತರ ಗಾರ್ಮೆಂಟ್ ಕೆಲಸಕ್ಕೆ ಹೋಗಿ ಬರುತ್ತಿದ್ದ ಕುಮ್ಸಿಮ್ ಎಂಬಾಕೆಯನ್ನು ನಡುರಸ್ತೆಯಲ್ಲೇ ಎತ್ತಿ ಆಟೋಕ್ಕೆ ತುರುಕಿಕೊಂಡಿದ್ದ.

ಇಲ್ಲಿನ ಹಂತಕರದು ಮೃಗೀಯತೆ. ತಾವು ಮದುವೆಯಾದರೂ ಆಗದೇ ಇದ್ದರೂ ಅಸಹಾಯಕ ಮುಸ್ಲಿಂ ಕುಟುಂಬ ಕಂಡರೆ ಬಿಡುವವರಲ್ಲ. ಮರ್ಯಾದೆಗೆ ಅಂಜುವ ಪೋಷಕರು ಪೊಲೀಸರಿಗೆ ದೂರು ಕೊಡುವುದಿಲ್ಲ. ಇದೇ ತೋತಾ ರಫೀಕ್ ಜೊತೆ ಸೇರಿದ ಆರಿಫ್‌ನ ಮಗ ಹಂತಕ ಇಮ್ರಾನ್ ನಾಲ್ವರು ಲೈವ್‌ಬ್ಯಾಂಡ್ ಗಾಯಕಿಯರನ್ನು ಹೊತ್ತೊಯ್ದು ಪೀಡಿಸಿದಾಗಲೂ ಪೊಲೀಸರು ಯಾವ ಮಟ್ಟದಲ್ಲಿ ಮಟ್ಟ ಹಾಕಬೇಕಿತ್ತೋ ಆ ಕೆಲಸ ಮಾಡಲೇ ಇಲ್ಲ. 2006 ರ ಡಿಸೆಂಬರ್ 27 ರಂದು ಅಸ್ಮಾತಾಜ್ ಎಂಬ ಯುವತಿಯನ್ನು ಹಂತಕ ತೋತಾ ರಫೀಕ್ ಹೊತ್ತೊಯ್ದು ಕೊಂದದ್ದಕ್ಕೆ ಮುಸ್ಲಿಂ ಸಮೂಹದಿಂದಲೂ ಪ್ರತಿಭಟನೆ ವ್ಯಕ್ತವಾಗಲಿಲ್ಲ.

ಇದರ ಪರಿಣಾಮವೇ ನಿಷಾ ಬೇಗಮ್ ಕಿಡ್ನಾಪ್. ಈ ಬಾರಿ ಆರಿಫ್ ಗ್ಯಾಂಗ್ ಮರ್ಯಾದಸ್ಥ ರೊಕ್ಕಸ್ಥ ಬೆಟ್ಟಳ್ಳಿ ಖಾಂದಾನದ ಮುಸ್ಲಿಂ ಮನೆತನವನ್ನು ತನ್ನ ಗುರಿಯಾಗಿಸಿಕೊಂಡಿದೆ. ಆನೇಕಲ್ ತಾಲ್ಲೂಕು ಬೆಟ್ಟಳ್ಳಿಯಿಂದ ಒಂದಾನೊಂದು ಕಾಲಕ್ಕೆ ಗೋರಿಪಾಳ್ಯಕ್ಕೆ ವಲಸೆ ಬಂದ ಮುಸ್ಲಿಮರೇ ಈಗ ಬಹುಸಂಖ್ಯಾತರಾಗಿಬಿಟ್ಟಿದ್ದಾರೆ. ಆವತ್ತು ಸೈಕಲ್ ತಳ್ಳಿಕೊಂಡು ಹಳೇ ಕಬ್ಬಿಣ, ಸೀಸೆ ಕೊಳ್ಳುತ್ತಿದ್ದ ಮುಸ್ಲಿಮರ ಪೈಕಿ ಮಕ್ಬೂಲ್ ಬೇಗ್ ಎಂಬಾತನ ಕುಟುಂಬದವರು ಕೋಟ್ಯಾಧಿಪತಿಗಳಾಗಿದ್ದಾರೆ. ಅವರ ಸಂತತಿಯ ಒಟ್ಟೂ ಮುಸ್ಲಿಮರು ಸೇರಿಬಿಟ್ಟರೆ ಗೋರಿಪಾಳ್ಯ, ಹೊಸಗುಡ್ಡದಹಳ್ಳಿ, ಶಾಮಣ್ಣ ಗಾರ್ಡನ್ ಏರಿಯಾಗಳಲ್ಲೇ ಒಟ್ಟೂ ಹದಿನೈದು ಸಾವಿರದಷ್ಟು ಓಟಿನ ಬ್ಯಾಂಕಾಗುತ್ತದೆ. ಜೊತೆಗೆ ಅಷ್ಟೂ ಬೆಟ್ಟಳ್ಳಿ ಖಾಂದಾನದ ಮುಸ್ಲಿಮರ ಬೆಂಬಲವೂ ದಕ್ಕುತ್ತದೆ.


ಪೊಲೀಸ್ ಇನ್ಸ್‌ಪೆಕ್ಟರ್ ಬಾಬು ನರೋನ


ಬೇಗಮ್

ಇದು ಮಾಜಿ ಕೌನ್ಸಿಲರ್ ಆರಿಫ್ ಮತ್ತು ಆತನ ಹಂತಕ ತಮ್ಮ ಫಾರೂಕ್‌ನ ಲೆಕ್ಕಾಚಾರ. ಈಗಾಗಲೇ ಗೋರಿಪಾಳ್ಯದ ಪಂಟರ್ ಅಲ್ತಾಫ್‌ನ ಇಬ್ಬರು ತಮ್ಮಂದಿರನ್ನು ಕೊಂದ ಕೇಸಿನಲ್ಲಿ ಆರಿಫ್‌ನ ಇಡೀ ಖಾಂದಾನ್ ಕೋರ್ಟಿಗೆ ಅಲೆಯುತ್ತಿದೆ. ಜೀವಾವಧಿ ಶಿಕ್ಷೆಯ ಕತ್ತಿ ನೆತ್ತಿಯ ಮೇಲೆ ತೂಗಾಡುತ್ತಿದೆ. ಅದರಿಂದ ಬಚಾವಾದರೂ ಅಲ್ತಾಫ್‌ನಿಂದ ಬಚಾವಾಗುವುದು ಕಷ್ಟ. ಇಂಥಾ ಕಂಟಕದಿಂದ ಪಾರಾಗಿ ಅಲ್ತಾಫ್‌ನನ್ನು ಎದುರಿಸಬೇಕೆಂದರೆ ಬೆಟ್ಟಳ್ಳಿ ಖಾಂದನ್‌ನ ತೋಳ್ಬಲ ಮತ್ತು ದುಡ್ಡಿನ ಬೆಂಬಲ ಎರಡೂ ಬೇಕು. ಅದಕ್ಕೆ ತನ್ನ ವಂಶದ ಯಾರಾದರೂ ಪಡ್ಡೆ ಹುಡುಗರನ್ನು ಮಕ್ಬೂಲ್ ಬೇಗ್‌ನ ಅಪ್ರಾಪ್ತ, ಅಪಕ್ವ ಮನಸ್ಸಿನ ಮಗಳ ಮೇಲೆ ಛೂ ಬಿಟ್ಟು ರಕ್ತ ಸಂಬಂಧ ಕಟ್ಟಿಕೊಳ್ಳಬೇಕು!


ಆಸ್ಮಾತಾಜ್

ಇದು ಗೋರಿಪಾಳ್ಯದ ಮಾಜಿ ಕೌನ್ಸಿಲರ್ ಆರಿಫ್‌ನ ಹುನ್ನಾರ. ಇದಕ್ಕೆ ಅಸ್ತ್ರವಾದವನು ಆತನ ಅಣ್ಣ ಫಾರುಕ್‌ನ ಅಸಂಖ್ಯಾತ ಪತ್ನಿಯರ ಪೈಕಿ ದೊಡ್ಡವಳು ಹಸೀನಾಳ ಕೊನೇ ಮಗ ಮಹ್ಮದ್ ಉಮರ್ ಷರೀಫ್ ಆಲಿಯಾಸ್ ಉಮರ್ ಪಾಷಾ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅಲ್ತಾಫ್‌ನ ಇಬ್ಬರು ತಮ್ಮಂದಿರನ್ನು ನಡುರಸ್ತೆಯಲ್ಲಿ ಕೊಚ್ಚಿ ಹಾಕಿದವರಲ್ಲಿ ಈತನೂ ಪ್ರಮುಖ ಆರೋಪಿ. ಇಂಥವನಿಗೆ ನಿಮ್ಮ ಮಗಳನ್ನು ಕೊಡಿ ಎಂದು ಪ್ರಸ್ತಾಪಿಸಿದಾಗಲೇ ಮಕ್ಬೂಲ್ ಬೇಗ್ ಕುಟುಂಬ ವಾಚಾಮಗೋಚರ ಉಗಿದು ಕಳಿಸಿತ್ತು.

ಹಾಗಂಥ ಅಪ್ಪ ಫಾರೂಕ್ ಸುಮ್ಮನಿರಬೇಕಲ್ಲ. ಮಗನನ್ನು ಬೆನ್ನು ತಟ್ಟುತ್ತಲೇ ಇದ್ದ. ಮಕ್ಬೂಲ್ ಬೇಗ್‌ನ ಕೊನೆ ಮಗಳು ಹೋಗಿ ಬಂದಲ್ಲೆಲ್ಲ ಹಿಂಬಾಲಿಸುತ್ತಿದ್ದ. ಆಕೆ ಹೋಗುತ್ತಿದ್ದ ಕಲಾಸಿಪಾಳ್ಯದ ದೊಡ್ಡ ಮಸೀದಿಯ ಉರ್ದು ಶಾಲೆಗೂ ವಕ್ಕರಿಸಿದ. 2007 ರ ಮೇ ... ರಂದು ಕಾರೊಂದರಲ್ಲಿ ಪೋಕರಿ ಹುಡುಗರನ್ನು ಹಾಕಿಕೊಂಡಿದ್ದೇ ನಿಷಾಳನ್ನು ಎತ್ತಾಕಿಕೊಂಡು ಹೈದರಾಬಾದಿಗೆ ಸಾಗಿಸಿಬಿಟ್ಟ.

ಯಾವತ್ತು ಬೆಟ್ಟಳ್ಳಿ ಖಾಂದಾನದ ಮುಸ್ಲಿಮರಿಗಿದು ಗೊತ್ತಾಗಿ ಹೋಯಿತೋ ಇಡೀ ಗೋರಿಪಾಳ್ಯವೇ ಪ್ರಕ್ಷುಬ್ಧಗೊಂಡಿದೆ. ಯಾರೋ ಸಾಮಾನ್ಯ ಮುಸ್ಲಿಮರಾಗಿದ್ದರೆ ಮಕ್ಬೂಲ್ ಬೇಗ್ ಮಗಳ ಧಾರೆ ಎರೆದುಬಿಡುತ್ತಿದ್ದ. ಆದರೆ ಉಮರ್ ಜೇಜೆ ನಗರದ ರೌಡಿ ಪೀಟರ್. ಇವತ್ತಲ್ಲ ನಾಳೆ ಒಂದೋ ಜೈಲು ಪಾಲಾಗುತ್ತಾನೆ. ತಪ್ಪಿದರೆ ಅಲ್ತಾಫ್ ಕೈಯಲ್ಲಿ ಹೆಣವಾಗುತ್ತಾನೆ. ಹೇಳಿಕೇಳಿ ಹುಟ್ಟಾ ಕ್ರಿಮಿನಲ್ ಕುಟುಂಬ. ಇಂಥವರ ಕಣ್ಣು ತಮ್ಮ ಮೇಲೆ ಬಿದ್ದಿದೆಯೆಂದರೆ ಅದು ಸೈತಾನನನ್ನು ಮನೆಗೆ ಕರಕೊಂಡಂತೆ ಎಂದು ಇಡೀ ಬೆಟ್ಟಳ್ಳಿ ಖಾಂದಾನ್ ರೌಡಿ ಆರಿಫ್ ವಿರುದ್ಧ ಯುದ್ಧಕ್ಕೆ ಅಣಿಯಾಗಿದೆ. ಕೆ.ಆರ್. ಮಾರುಕಟ್ಟೆಯ ಇನ್ಸ್‌ಪೆಕ್ಟರ್ ಬಾಬು ನರೋನರಿಗೆ ಮಗಳ ಕಿಡ್ನಾಪ್ ಬಗ್ಗೆ ದೂರು ಕೊಟ್ಟಿದ್ದಾರೆ.

ಅಲ್ಲಿಗೆ ಧೂರ್ತ ಅಪ್ಪ ಫಾರೂಕ್ ಮತ್ತು ತಮ್ಮ ಆರಿಫ್ ಲೆಕ್ಕಾಚಾರವೇ ಉಲ್ಟಾ ಹೊಡೆದಿದೆ. ಬಾಬು ನರೋನ ಹೈದರಾಬಾದ್ ಝಾಲಾಡುತ್ತಿದ್ದಂತೆ ಉಮರ್ ನಿರಾಳನ್ನು ಬೆಂಗಳೂರಿನ ಗಾರ್ವೇ ಬಾವಿ ಪಾಳ್ಯಕ್ಕೆ ಸಾಗಿಸಿಬಿಟ್ಟಿದ್ದ. ಅದರ ವಾಸನೆ ಹಿಡಿದು ನರೋನ ಉಮರ್‌ನನ್ನು ಎಳೆತಂದು ರುಬ್ಬಿ ಜೈಲಿಗೆ ಹಾಕಿದ್ದಾರೆ. ಬಾಲಕಿ ನಿಷಾಳನ್ನು ಆಕೆಯ ಪೋಷಕರಿಗೊಪ್ಪಿಸಿದ್ದಾರೆ. ಅಲ್ಲಿಗೆ ಗೋರಿಪಾಳ್ಯದ ಮರ್ಯಾದಸ್ಥ ಮುಸ್ಲಿಂ ಮನೆತನವೊಂದಕ್ಕೆ ಒದಗಿದ ಆಪತ್ತು ಕರಗಿ ಹೋಗಿದೆ.

ಆದರೆ ಗೋರಿಪಾಳ್ಯದ ನಿರ್ಗತಿಕ ಮುಸ್ಲಿಂ ಯುವತಿಯರ ಗತಿ?


-ರಾ. ಸೋಮನಾಥ್

ಹಗಲು ಗೂಬೆ ಕಡೆಗೂ ಕಣ್ ಮಿಟುಕಿಸಿತಂತಲ್ಲಾ!

ಇತ್ತೀಚೆಗೆ ಕುಮಾರಸ್ವಾಮಿ ಆಡಳಿತ ಥೇಟ್ ಗುಂಡೂರಾಯನ ಶೈಲಿಯನ್ನು ಯಥಾವತ್ ಅಳವಡಿಸಿಕೊಂಡಂತಿದೆಯೆಂದು 'ಗುಂ'ನ ಮಾಜಿ ಅಭಿಮಾನಿಗಳ ಅಭಿಪ್ರಾಯವಾಗಿದೆಯಲ್ಲಾ. 'ಗುಂ' ಕೂಡ ಗೋಕಾಕ್ ಚಳವಳಿಯ ಸಾಧಕ ಬಾಧಕಗಳನ್ನು ಚಳವಳಿಗಾರರಿಂದಲೇ ಕೇಳಿ, ಕರ್ನಾಟಕದ ಮೂಲೆಮೂಲೆಯಿಂದ ಅತ್ತ ಪಿಟೀಲು ಪುಟ್ಟಪ್ಪನಿಂದ ಹಿಡಿದು ಇತ್ತ ಚಂಪನವರೆಗೂ ಕರೆಸಿ ಬೆಳಿಗ್ಗೆಯಿಂದ ಸಂಜೆವರೆಗೂ ಭಾಷಣ ಮಾಡಿಸಿ, ಕಡೆಗೂ ಗೋಕಾಕ್ ವರದಿಯನ್ನು ಕಸದಬುಟ್ಟಿಗೆ ಎಸೆದಿದ್ದರು. ಕುಮಾರಣ್ಣನೂ ಕೂಡ ಆತ್ಮಹತ್ಯಾತ್ಮಕ ದಾರಿಯಲ್ಲಿರುವ ರೈತರ ವಾರಸುದಾರರನ್ನು ಕರೆಸಿ, ಅವರ ಅಹವಾಲು ಕೇಳುವ ಮುನ್ನ ತಾವೂ ಕೂಡ ಐತಿಹಾಸಿಕ ಭಾಷಣ ಮಾಡಿದರಂತಲ್ಲಾ, ಆ ಭಾಷಣವೆಂದರೆ "ಏನು ಇವತ್ತು ರೈತರು ಬೆಳೆ ಸಾಲವನ್ನು ತೀರಿಸೋಕ್ಕಾಗದೆ ಆತ್ಮಹತ್ಯೆ ಮಾಡಿಕೊಂಡವ್ರೆ ಅನ್ನೋ ಅಭಿಪ್ರಾಯ ಏನಿದೆ ಆ ಬೆಳೆಸಾಲವನ್ನು ತೀರಸಕ್ಕಾಗದೆ ರೈತರು ಆತ್ಮಹತ್ಯೆಗೆ ತೊಡಗಿದ್ದಾರೆ ಅನ್ನೋದು ಕೇವಲ ಕೃಷಿ ಸಾಲಬಾಧೆ ತಾಳದೆ ಆತ್ಮಹತ್ಯೆಗೆ ಶರಣಾಗಿದ್ದಾರೆ ರೈತರೂ ಅನ್ನೋ ಅಭಿಪ್ರಾಯ ಏನು ನಮ್ಮಲ್ಲಿ ಮೂಡಿದೆ ಅಂತಹ ಅಭಿಪ್ರಾಯ ಇವತ್ತಿನ ದಿವಸದಲ್ಲಿ ಜನಸಾಮಾನ್ಯರಲ್ಲೂ ಮೂಡೋದಿಕ್ಕೆ ಕಾರಣ ಏನು ಎಂಬತಕ್ಕಂತ ವಿಚಾರವನ್ನು ತೊಡೆದು ಹಾಕೋದಕ್ಕೆ ಈ ಸಭೆ ಮಾಡ್ತಯಿರೊ ಸಂದರ್ಭದಲ್ಲಿ" ಎಂದು ಕುಮಾರಣ್ಣ ಭಾಷಣ ಮಾಡುತ್ತಿರುವಾಗ ಧಾರವಾಡದಿಂದ ಬಂದಿದ್ದ ರೈತನೊಬ್ಬ "ಮಗ ಏನೇಳಾಕೆ ಅಂತ ಹ್ವಂಟಾನಿಪಾ?" ಎಂದು ಉದ್ಗರಿಸಿದನಂತಲ್ಲಾ, ಥೂತ್ತೇರಿ!

* * * * * * * *

"ಹಳ್ಳಿಗೆ ಹೋಗಿ ಮಲಗು, ಅವರಿಂದ ಅರ್ಜಿ ತೆಗೆದುಕೊ, ಆತ್ಮಹತ್ಯೆ ರೈತರನ್ನು ಕರೆದು ಮಾತನಾಡಿಸು, ಇತ್ತ ನಾನು ಮಾಡುವುದನ್ನು ಮಾಡುತ್ತೇನೆ" ಎಂದು ಮಗನಿಗೆ ತಾಕೀತು ಮಾಡಿ ಪುಂಖಾನುಪುಂಖವಾಗಿ ಕಾರ್ಯಕ್ರಮ ಕೊಡುತ್ತಿದ್ದ ದೇವು, ತಮ್ಮ ನಿಗೂಢ ಬುಟ್ಟಿಯಿಂದ ಒಳಮೀಸಲೆಂಬ ಕೆರೆಹಾವು ತೆಗೆದು ಪುಂಗಿ ಊದತೊಡಗಿದ್ದಾರಂತಲ್ಲಾ. ಇದರಿಂದ ಅಷ್ಟೇನು ಹೆದರದ ಸದಾನಂದ ಗೌಡ "ಇಂತಹ ಕ್ಯಾರೆಗೊಡ್ಡ ಹಾವಿಗೆ ನಾವು ಹೆದರುವುದಿಲ್ಲ. ದೇವೇಗೌಡರು ಎಷ್ಟಾದರೂ ಪುಂಗಿ ಊದಲಿ, ಅದು ಹೆಡೆ ಬಿಚ್ಚಿ ಕಡಿಯುವುದಿಲ್ಲ" ಎಂದರಂತಲ್ಲಾ. ಈ ಕೆರೆ ಹಾವಿಗೆ ಹೆದರಿ ಹೋದ ಎಡೂರಪ್ಪ "ಆಯ್ತು, ನೀವೇಳಿದಂತೆ ಒಳಮೀಸಲಾತಿ ಜಾರಿಯಾಗಲಿ. ಇದರಿಂದ ನನ್ನ ಯಾವ ಕುಟುಂಬಕ್ಕೂ ಕಿಂಚಿತ್ತೂ ತೊಂದರೆಯಾಗುವುದಿಲ್ಲ" ಎಂದರಂತಲ್ಲಾ, ಇತ್ತ ಸಿದ್ಧರಾಮಯ್ಯ "ಕುಡ್ಲೂ ನಿಮ್ಮ ಕೈಲೇ ಅದೆ. ಹಣ್ಣು ನಿಮ್ಮ ಕೈಲಿದೆ. ಕುಯ್ಕುದು ಬುಟ್ಟು ಕಣಿ ಕೇಳ್ತಿರಲ್ರೀ" ಎಂದರಂತಲ್ಲಾ, ಥೂತ್ತೇರಿ!!



ಥೂತ್ತೇರಿ

ಯಾಹೂ

* * * * * * * *

ಅಧಿಕಾರದ ಹಸ್ತಾಂತರದ ಬಗ್ಗೆ ದೇವೇಗೌಡರಿಂದ ಯಾವ ಆಶ್ವಾಸನೆ ಬಂದರೂ ಎಡೂರಪ್ಪನಿಗೆ ನಂಬಿಕೆ ಬರದೆ ಮುಖದ ಕಳೆಯೇ ಹೊರಟು ಹೋಗಿದೆಯಂತಲ್ಲಾ. ಉಗ್ರಕೋಪಿಯಾದ ಎಡೂರಪ್ಪ ಹಿಂದೊಮ್ಮೆ ಚೆಡ್ಡಿಗಳ ಚೋಣಚಿ ಕೆಲಸ ಅನಂತವಾಗಿ ನಡೆದು ಇನ್ನು ಸಾಧ್ಯವಿಲ್ಲವೆಂದು ಬಿಜೆಪಿಯನ್ನೇ ಹರಾಜು ಹಾಕಲು ಹೊರಟುಬಿಟ್ಟಿದ್ದರಂತಲ್ಲಾ. ಚೆಡ್ಡಿ ಹಾಕಿ, ಲಾಟಿ ಬೀಸಿ 'ನಮಸ್ತೇ ಸದಾ ವತ್ಸಲೇ ಬಿಜೆಪಿ ಭೂಮಿ' ಎಂದು ಭೈಟಕ್ ಮಾಡಿದ್ದರೂ ಕೂಡ ಈ ಎಡೂರಪ್ಪ "ಎಂತಹದ್ದಾದರೂ ಖಾತೆ ಕೊಡಿ. ನನ್ನವರನ್ನು ಕಟ್ಟಿಕೊಂಡು ನಿಮ್ಮೆಡೆಗೆ ಬರುತ್ತೇನೆ" ಎಂಬ ಅವಮಾನಕರ ಪ್ರಸಂಗ ಅನಂತ ಕುಮಾರನ ಪಡೆಗೆ ಇನ್ನು ಕಾಡುತ್ತಲಿದೆಯಂತಲ್ಲಾ. ಹೇಗಾದರೂ ಮಾಡಿ ಈ ಎಡೂರ ಮುಖ್ಯಮಂತ್ರಿಯಾಗಿ ಶೋಬಕ್ಕನ ಜೊತೆ ಸೋಬನ ಮಾಡಿಕೊಳ್ಳುವುದನ್ನು ತಡೆಯಬೇಕೆಂದು ಹಟ ತೊಟ್ಟಿವೆಯಂತಲ್ಲಾ. ಈ ಸುದ್ದಿ ಪದ್ಮನಾಭನಗರದ ಹಗಲುಗೂಬೆ ಮನುಷ್ಯನಿಗೆ ತಲುಪಲಾಗಿ ಆತ ಕೂಡಲೇ ಕುರುಬರ ಈಶ್ವರಪ್ಪ, ಶರಣರ ಶೆಟ್ಟರ್‌ಗೆ ಮೊಬೈಲ್‌ನಲ್ಲೇ ಕಣ್ ಸನ್ನೆ ಮಾಡಿದನಂತಲ್ಲಾ. ಅದರ ಮಾರನೆ ದಿನವೇ ಎಡೂರಪ್ಪನಿಗೆ ಆಗದವರ ಸಭೆ ಜರುಗಿತಂತಲ್ಲಾ, ಥೂತ್ತೇರಿ!!!

* * * * * * * *

ನಮ್ಮ ಚೆಡ್ಡಿ ಚತುರರು ಕೋಸಂಬರಿ ಅಗಿಯುತ್ತ ಆಗಾಗ್ಗೆ ಪಾನಕವನ್ನು ಬಾಯಿಗೆ ಬಿಟ್ಟುಕೊಂಡು ಶಿಖಾಮಣಿ ಕುಣಿಸುತ್ತ, ಆವರಣದಲ್ಲಿರುವ ಸಾಬರನ್ನು ಆಡಿಕೊಂಡು, ರಸಗಳಿಗೆ ನಿರ್ಮಿಸಲು ತಯಾರಾಗುತ್ತಿರುವಾಗಲೇ ಆನು ದೇವ ಹೊರಗಿನವನು ಬಂದು ಎಲ್ಲವನ್ನು ಹಾಳು ಮಾಡಿದನಂತಲ್ಲಾ. "ಹನ್ನೆರಡನೇ ಶತಮಾನದಲ್ಲಿ ಬ್ರಾಹ್ಮಣರನ್ನು ಹಾಳು ಮಾಡಿದ್ದ ಬಸವಣ್ಣ ಈಗ ಅವನ ಹುಟ್ಟಿನ ಸಂಗತಿ ನಮ್ಮ ವಿಪ್ರೋತ್ತಮರ ಬೈಬಲ್‌ನಂತಿರುವ ಆವರಣದ ಅನಾವರಣಕ್ಕೆ ತೊಡಕಾಗಿದೆ, ಏನಾದರೂ ಮಾಡಿ ಈ ಹೊರಗಿನವನನ್ನು ಹೊರಗಿಡಬೇಕು" ಎಂದು ಚರ್ಚಿಸುತ್ತಿರುವಾಗಲೇ, ಎರಡು ಸಾವಿರ ಜನ ಹರಿಜನರು ವಿಪ್ರೋತ್ತಮರ' ಆವರಣದೊಳಗಿಂದ ಹೊರಹೋದರಂತಲ್ಲಾ. ಅವರು ಹೋದ ಸುದ್ದಿಯನ್ನು ಖಚಿತವಾಗಿ ತಿಳಿದುಕೊಂಡ ವಿಶ್ವೇಶರ ತೀರ್ಥರೆಂಬ ಸಣ್ಣಸ್ವಾಮಿ, "ದಲಿತರೂ ಕೂಡ ಹಿಂದೂಗಳೇ. ಅವರಿಗೂ ದೇವಸ್ಥಾನದಲ್ಲಿ ಪ್ರವೇಶವಿರಬೇಕು, ದೇವರಿದ್ದಲ್ಲಿಗೆ ಬರುವುದನ್ನು ತಡೆಯಬಾರದು" ಎಂದರಂತಲ್ಲಾ, ಥೂಥೂಥೂತ್ತೇರಿ!!!

-ಯಾಹೂ

ಪರಿಸರ ಶಿವರಾಮ್ ತಲೆಮರೆಸಿಕೊಂಡಿದ್ದಾರೆಯೇ?

ಕುಮಾರ್ ಬುರಡಿಕಟ್ಟಿ

ರಾಜ್ಯಪ್ರಶಸ್ತಿ ವಿಜೇತ ಭದ್ರಾವತಿಯ ಪರಿಸರ ಶಿವರಾಮ್ ಮಹಿಳೆಯೊಬ್ಬಳಿಗೆ ಲೈಂಗಿಕ ಕಿರುಕುಳ ಕೊಟ್ಟು, ಅವಳ ಮಗುವನ್ನು ಕಿಡ್ನಾಪ್ ಮಾಡಿಕೊಂಡು ತಲೆಮರೆಸಿಕೊಂಡಿದ್ದಾರೆ ಎಂಬ ಗುಮಾನಿಯೊಂದನ್ನು ಕೈಗಾರಿಕಾ ನಗರ ಭದ್ರಾವತಿಯಲ್ಲಿ ಹರಿಬಿಡಲಾಗಿದೆ. ಈ ಗುಮಾನಿಗಳ ಹಿಂದೆ ಶಿವರಾಮ್‌ಗೆ ಆಗದ ವರ ವ್ಯವಸ್ಥಿತ ಜಾಲವೊಂದು ಕೆಲಸ ಮಾಡುತ್ತಿರುವುದು ಪ್ರಾಯಶಃ ನಗರದ ಬಹುತೇಕರಿಗೆ ಗೊತ್ತಿರದ ವಿಚಾರ ವೇನಲ್ಲ. ಏಕೆಂದರೆ ಶಿವರಾಮ್ ತಾವು ಹೊರತರುತ್ತಿದ್ದ "ಪರಿಸರ" ಎಂಬ ಪತ್ರಿಕೆಯಲ್ಲಿ ಅನೇಕ ಭ್ರಷ್ಟಾಚಾರಿಗಳ ವಿರುದ್ಧ ಖಾರವಾಗಿ ಬರೆದು ಅವರನ್ನು ಬಯಲಿಗೆಳೆದಿದ್ದರು. ಅಂತಹ ಭ್ರಷ್ಟಾಚಾರಿಗಳೆಲ್ಲರೂ ಬಹುದಿನಗಳಿಂದ ಶಿವರಾಮ್ ಮೇಲೆ ಕತ್ತಿ ಮಸೆಯುತ್ತಲೇ ಇದ್ದರು. ವಾಸ್ತವದಲ್ಲಿ ಶಿವರಾಮ್ ವಿರುದ್ಧ ಏನಾದರೊಂದು ವಿಚಾರ ಸಿಗಲಿ ಎಂದು ಕಾಯುತ್ತಿದ್ದರು.

ಈಗ ಶಿವರಾಮ್ ತನ್ನ ತೋಟದಲ್ಲಿ ಕೆಲಸಕ್ಕಿದ್ದ ವಿಠ್ಠಲ್ ಮತ್ತು ರುಕ್ಮಿಣಿ ಎಂಬ ದಂಪತಿಗಳಿಗೆ ಕಿರುಕುಳ ಕೊಟ್ಟು, ವಿಠ್ಠಲನನ್ನು ಮನೆಯಿಂದ ಓಡಿಸಿ, ಅವನ ಹೆಂಡತಿ ರುಕ್ಮಿಣಿಯನ್ನು ಲೈಂಗಿಕವಾಗಿ ಹಿಂಸಿಸಿ, ಕೊನೆಗೆ ಅವಳನ್ನೂ ಮನೆಯಿಂದ ಓಡಿಸಿ ವಿಠ್ಠಲ್ ಮತ್ತು ರುಕ್ಮಿಣಿಯ ಎಂಟು ವರ್ಷದ ಮಗ ಮಂಜುನಾಥ್‌ನನ್ನು ಕಿಡ್ನಾಪ್ ಮಾಡಿದ್ದಾರೆ ಎಂದು ರುಕ್ಮಿಣಿಯಿಂದ ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಲಾಗಿದೆ. ಇದರ ಬೆನ್ನಹಿಂದೆಯೇ ಅವರು ತಲೆ ಮರೆಸಿಕೊಂಡಿದ್ದಾರೆಂಬ ಗಾಳಿಸುದ್ದಿಯನ್ನೂ ಹರಿಬಿಡಲಾಗಿದೆ.

ಆದರೆ, ಈ ಗಾಳಿಸುದ್ದಿಗೆ ಸವಾಲೆಂಬಂತೆ ಪರಿಸರ ಶಿವರಾಮ್ ಭದ್ರಾವತಿಯಲ್ಲಿಯೇ ಎಲ್ಲರ ಮುಂದೆಯೇ ಓಡಾಡಿಕೊಂಡಿದ್ದಾರೆ. ಹಾಗಾಗಿ ಇಂಥ ಊಹಾಪೋಹಗಳನ್ನು ಹರಡಿದವರ ಉದ್ದೇಶ ನೆಲಕಚ್ಚಿದಂತಾಗಿದೆ. ಹೀಗಿದ್ದರೂ, ಒಟ್ಟಾರೆ ಘಟನೆಯ ಬಗೆಗಿನ ಒಂದು ವಸ್ತುನಿಷ್ಠ ಚಿತ್ರಣವನ್ನು ಅರಿತುಕೊಳ್ಳುವುದು ಇಲ್ಲಿ ಉಚಿತವೆನಿಸುತ್ತದೆ.

ಶಿವರಾಮ್ ಏನು ಹೇಳುತ್ತಾರೆ?

ಒಟ್ಟಾರೆ ಘಟನೆಯ ಬಗ್ಗೆ ಪರಿಸರ ಶಿವರಾಮ್ ಹೇಳುವ ಕಥೆಯು ರುಕ್ಮಿಣಿ ಕೊಟ್ಟಿರುವ ಕಂಪ್ಲೇಂಟ್‌ಗೆ ಸಂಪೂರ್ಣ ವಿರುದ್ಧವಾಗಿದೆ. ಅವರ ಪ್ರಕಾರ ರುಕ್ಮಿಣಿ ಮತ್ತು ವಿಠ್ಠಲರ ಮಗುವನ್ನು ತಾವು ಕಿಡ್ನಾಪ್ ಮಾಡಿಲ್ಲ, ಬದಲಾಗಿ ಅವರಿಬ್ಬರೂ ಸೇರಿ ತಮಗೆ ದತ್ತು ಕೊಟ್ಟಿದ್ದಾರೆ. ಶಿವರಾಮ್ ಪ್ರಕಾರ ಒಟ್ಟಾರೆ ಘಟನೆ ಹೀಗಿದೆ:

1996-97ರ ಸುಮಾರಿನಲ್ಲಿ ಬೆಳಗಾಮ್ ಜಿಲ್ಲೆಯ ಅಥಣಿ ಹಳ್ಳಿಯೊಂದರಿಂದ ವಿಠ್ಠಲ್ ಎಂಬುವವನು ಕೆಲಸವನ್ನರಸುತ್ತಾ ಶಿವಮೊಗ್ಗಕ್ಕೆ ಬಂದ. ಆಗ ಅವನಿಗೆ ಸುಮಾರು 27 ವರ್ಷ ವಯಸ್ಸು. ಶಿವಮೊಗ್ಗಕ್ಕೆ ಬಂದವನೇ ಸೀದಾ ಸಹ್ಯಾದ್ರಿ ಕಾಲೇಜು ಕ್ಯಾಂಟೀನ್‌ನಲ್ಲಿ ಕೆಲಸಕ್ಕೆ ಸೇರಿಕೊಂಡ. ಆಗ ಕುವೆಂಪು ವಿಶ್ವವಿದ್ಯಾಲಯದಲ್ಲಿ ಕಟ್ಟಡಗಳ ಕೊರತೆಯಿಂದಾಗಿ ಉರ್ದು, ಸಂಸ್ಕೃತ ಮತ್ತು ಹಿಂದಿ ವಿಭಾಗಗಳನ್ನು ಸಹ್ಯಾದ್ರಿ ಕಾಲೇಜಿನಲ್ಲಿಯೇ ನಡೆಸಲಾಗುತ್ತಿತ್ತು. ಈ ವಿಭಾಗವೊಂದರಲ್ಲಿ ದ್ವಿತೀಯ ದರ್ಜೆಯ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದ ಚಂದ್ರಕಲಾ ಎಂಬುವವರು ವಿಠ್ಠಲನಿಗೆ ಪರಿಚಯವಾದರು. ವಾಸ್ತವದಲ್ಲಿ ಈ ಚಂದ್ರಕಲಾ ಪರಿಸರ ಶಿವರಾಮ್‌ನ ತೀರಾ ಹತ್ತಿರದ ಸಂಬಂಧಿ. ಕೆಲದಿನಗಳಾದ ಮೇಲೆ ವಿಠ್ಠಲ್ ಚಂದ್ರಕಲಾ ಹತ್ತಿರ ಬಂದು "ನನಗೆ ವ್ಯವಸಾಯ ಸಂಬಂಧಿ ಕೆಲಸದಲ್ಲಿ ಆಸಕ್ತಿ, ಈ ಹೋಟೆಲ್ ಕೆಲಸ ಬೇಡ, ಎಲ್ಲಾದರೂ ನನಗೊಂದು ತೋಟದ ಕೆಲಸ ಕೊಡಿಸಿ" ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತಿದ್ದ.

ಪರಿಸರ ಶಿವರಾಮ್‌ಗೆ ಕುವೆಂಪು ವಿಶ್ವವಿದ್ಯಾಲಯದ ಸಮೀಪ ಇರುವ ಹುಣಸೆಕಟ್ಟೆ ಜಂಕ್ಷನ್‌ನಲ್ಲಿ ಸುಮಾರು 6 ಎಕರೆ ತೋಟವಿದೆ. ಚಂದ್ರಕಲಾರವರು ಶಿವರಾಮ್ ಹತ್ತಿರ ಮಾತನಾಡಿ ವಿಠ್ಠಲ್‌ಗೆ ಶಿವರಾಮ್ ತೋಟದಲ್ಲಿಯೇ ಒಂದು ಕೆಲಸ ಕೊಡಿಸಿದರು. ಹೀಗೆ ಶುರುವಾಯಿತು ಶಿವರಾಮ್ ಮತ್ತು ವಿಠ್ಠಲ್‌ರವರ ಸಂಬಂಧ.


ತೋಟದಲ್ಲಿ ಕೆಲಸ ಮಾಡುತ್ತಾ ವಿಠ್ಠಲ್ ಒಬ್ಬ ಕೆಲಸದಾಳಾಗಿ ಮಾತ್ರ ಉಳಿಯದೇ ಶಿವರಾಮ್ ಕುಟುಂಬದ ಸದಸ್ಯನೆನ್ನುವಷ್ಟರ ಮಟ್ಟಿಗೆ ಹತ್ತಿರದವನಾದ. ಹೀಗೆ ಸುಮಾರು ನಾಲ್ಕು ವರ್ಷಗಳಾದ ಮೇಲೆ ವಿಠ್ಠಲ್ "ನಾನೂ ಮನುಷ್ಯನಂತೆ ಹೆಂಡತಿ ಮಕ್ಕಳೊಂದಿಗೆ ಬದುಕಬೇಕು, ನನಗೂ ಒಂದು ಮದುವೆ ಮಾಡಿ" ಎಂದು ಶಿವರಾಮ್‌ನಲ್ಲಿ ವಿನಂತಿಸಲಾರಂಭಿಸಿದ. ಮೊದ ಮೊದಲು ಶಿವರಾಮ್ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ ಎಂಬ ಕಾರಣಕ್ಕೆ ವಿಠ್ಠಲ್ ಮೂರು ತಿಂಗಳು ಮನೆಬಿಟ್ಟು ಹೋಗಿಬಿಟ್ಟಿದ್ದ. ಮತ್ತೆ ಹೇಗೋ ವಾಪಾಸ್ಸು ಬಂದಾಗ ಶಿವರಾಮ್ ಒಂದಿಷ್ಟು ಮುತುವರ್ಜಿ ವಹಿಸಿ ಭದ್ರಾವತಿಯ ಉಜ್ಜನೀಪುರ ಬಡಾವಣೆಯಲ್ಲಿ ರುಕ್ಮಿಣಿ ಎಂಬ ಹುಡುಗಿಯನ್ನು ಗೊತ್ತು ಮಾಡಿ, ಧರ್ಮಸ್ಥಳದಲ್ಲಿ ತಾವೇ ಮುಂದೆ ನಿಂತು ಅವರಿಬ್ಬರಿಗೆ ಸೆಪ್ಟಂಬರ್ 11, 2000ದಂದು ಮದುವೆ ಮಾಡಿಸಿದರು.

ಮನೆಯ ಮಗನಂತೆಯೇ ಆಗಿಹೋಗಿದ್ದ ವಿಠ್ಠಲ್‌ನ ಮದುವೆಯ ಖರ್ಚುವೆಚ್ಚಗಳನ್ನೆಲ್ಲಾ ಶಿವರಾಮ್‌ರವರೇ ಭರಿಸಿದರು. ಅಲ್ಲಿಯವರೆಗೂ ಶಿವರಾಮ್ ಮನೆಯಲ್ಲಿಯೇ ಇದ್ದ ವಿಠ್ಠಲನಿಗೆ ಮದುವೆಯ ನಂತರ ಸುಮಾರು 70 ಸಾವಿರ ರೂಪಾಯಿ ಖರ್ಚು ಮಾಡಿ ತೋಟದಲ್ಲಿಯೇ ಒಂದು ಪ್ರತ್ಯೇಕ ಮನೆಯನ್ನು ಕಟ್ಟಿಸಿಕೊಟ್ಟರು ಶಿವರಾಮ್. ನಂತರ ವಿಠಲ್ ಮತ್ತು ರುಕ್ಮಿಣಿ ದಂಪತಿಗಳಿಗೆ ಒಂದು ಗಂಡು ಮಗುವಾಯಿತು. ಆದರೆ ವಿವಿಧ ಕಾರಣಗಳಿಂದಾಗಿ ವಿಠಲ ಮತ್ತು ರುಕ್ಮಿಣಿಯ ನಡುವೆ ಮನಸ್ತಾಪಗಳು ಏರ್ಪಟ್ಟು ಪ್ರತಿನಿತ್ಯ ಜಗಳಗಳು ನಡೆಯುತ್ತಿದ್ದವು. ಇವರಿಬ್ಬರ ನಡುವಿನ ಜಗಳ ವಾಸ್ತವದಲ್ಲಿ ಮಗುವಿನ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡಲಾರಂಭಿಸಿತು.

ಹೀಗಾಗಿ ಒಂದು ದಿನ ವಿಠ್ಠಲ ಮತ್ತು ರುಕ್ಮಿಣಿ ಇಬ್ಬರೂ ಸೇರಿ ಮಗುವನ್ನು ಶಿವರಾಮ್‌ಗೆ ದತ್ತು ಕೊಡಲು ನಿರ್ಧರಿಸಿದರು. ಮಗುವಿನ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಶಿವರಾಮ್ ಕೂಡ ಇದನ್ನು ಸಂತೋಷದಿಂದಲೇ ಒಪ್ಪಿಕೊಂಡರು. ಆಗ ಮಗುವಿಗೆ 9 ತಿಂಗಳು. ಹೀಗೆ ದತ್ತು ಕೊಡುವಾಗ ಜುಲೈ 25, 2002ರಂದು ಒಂದು ಬಿಳಿಹಾಳೆಯ ಮೇಲೆ ದತ್ತು ಪತ್ರವನ್ನು ಬರೆಸಿಕೊಂಡು ಅವರಿಬ್ಬರ ಸಹಿಯನ್ನೂ ಹಾಕಿಸಿಕೊಂಡರು. ಆದರೆ ಗಂಡ-ಹೆಂಡತಿಯರಿಬ್ಬರೂ ಸ್ವಂತ ಒಪ್ಪಿಗೆಯಿಂದ ಮಗುವನ್ನು ದತ್ತು ಕೊಟ್ಟಿರುವಾಗ ಅದನ್ನು ರಿಜಿಸ್ಟರ್ಡ್ ಮಾಡಿಸುವ ಅಗತ್ಯ ಶಿವರಾಮ್‌ಗೆ ಕಾಣಲಿಲ್ಲ. ಹಾಗಾಗಿ ರಿಜಿಸ್ಟರ್ಡ್ ಮಾಡಿಸುವ ಗೋಜಿಗೆ ಅವರು ಹೋಗಲೇ ಇಲ್ಲ. ಇವತ್ತು ಅದೇ ಇವರಿಗೆ ಮುಳುವಾಗಿ ನಿಂತಿದೆ.

ದತ್ತು ಪಡೆದ ನಂತರ ಶಿವರಾಮ್ ಮಗುವನ್ನು ಚೆನ್ನಾಗಿಯೇ ಸಾಕಿ ಬೆಳೆಸಿದರು. ಮುಂದೆ ಶಾಲೆಗೂ ಕೂಡ ಸೇರಿಸಿದರು. ಈ ನಡುವೆ ವಿಠ್ಠಲ್ ಮತ್ತು ರುಕ್ಮಿಣಿ ಮಧ್ಯದ ಜಗಳ ತಾರಕಕ್ಕೇರಿ ವಿಠ್ಠಲ್ ಮೇ 1, 2003ರಲ್ಲಿ ಮನೆಬಿಟ್ಟು ಹೋಗಿಯೇ ಬಿಟ್ಟ. ವಿಠ್ಠಲ್ ಹೊರಟುಹೋದ ಮೇಲೆ ರುಕ್ಮಿಣಿ ಬೇರೆಬೇರೆಯವರೊಂದಿಗೆ ಸುತ್ತಾಡಲಾರಂಭಿಸಿದಳು. ಅವಳಿಗೆ ಶಿವರಾಮ್ ಬುದ್ಧಿಹೇಳಿದ್ದಕ್ಕಾಗಿ ಕೋಪಗೊಂಡು ಅವಳೂ ಶಿವರಾಮ್ ಮನೆಬಿಟ್ಟು ತಾಯಿ ಮನೆ ಸೇರಿಕೊಂಡಳು. ಆದರೆ ಆಗಾಗ ಶಿವರಾಮ್ ಮನೆಗೆ ಬಂದು ಮಗುವಿನ ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಿದ್ದಳು. ಮಗುವಿನ ಬರ್ತ್‌ಡೆಯನ್ನಂತೂ ಎಲ್ಲರೂ ಒಟ್ಟಾಗಿಯೇ ಸಂತೋಷದಿಂದ ಆಚರಿಸುತ್ತಿದ್ದರು. ಹೀಗೆ ಮೂರು ವರ್ಷಗಳು ಕಳೆದವು.

ಪರಿಸರ ಶಿವರಾಮ್ ತನ್ನ ಪತ್ರಿಕೆಯಲ್ಲಿ ಬರೆದು ಬಯಲಿಗೆಳೆದ ಎಲ್ಲ ಭ್ರಷ್ಟರು ರುಕ್ಮಿಣಿಯ ಬಳಿಗೆ ಹೋಗಿ, ಅವಳಿಗೆ ಹಣದ ಆಮಿಷ ತೋರಿಸಿ ಅವಳನ್ನು ಶಿವರಾಮ್ ವಿರುದ್ಧ ಎತ್ತಿಕಟ್ಟಿದರು. ತೀರಾ ಬಡತನದಲ್ಲಿ ಬದುಕುತ್ತಿದ್ದ ಆಕೆ ಸಹಜವಾಗಿ ಹಣದ ಆಮಿಷಕ್ಕೆ ಒಳಗಾದಳು.



ಪ್ರಾರಂಭದಲ್ಲಿ ತನ್ನ ಮಗನನ್ನು ವಾಪಸ್ಸು ಕೊಡಬೇಕೆಂದು ಹೇಳಿದಳು. ಆದರೆ ಶಿವರಾಮ್‌ರವರು ಮಗುವನ್ನು ಬೆಳೆಸಿದ ರೀತಿ ಆ ಮಗುವನ್ನು ಸಾಕಲು ಆಕೆಯಲ್ಲಿ ಆರ್ಥಿಕ ಶಕ್ತಿ ಇರಲಿಲ್ಲ. ಇದರ ಬಗ್ಗೆ ಶಿವರಾಮ್ ಆಕೆಯನ್ನು ಕೇಳಿದಾಗ "ಆತನನ್ನು ಮಾರಿ ದುಡ್ಡು ಪಡೆಯುತ್ತೇನೆ, ಅದನ್ನು ಕಟ್ಟಿಕೊಂಡು ನಿಮಗೇನಾಗಬೇಕು. ನನ್ನ ಮಗನನ್ನು ಕೊಡಿ" ಎಂದು ಹೇಳಿದಳು.

ಅಕಸ್ಮಾತ್ ಆಕೆ ಹಾಗೆ ಮಾಡಿದರೆ ತಾವು ಪ್ರೀತಿಯಿಂದ ಬೆಳೆಸಿದ ಮಗುವಿನ ಭವಿಷ್ಯ ನಾಶವಾಗುತ್ತದೆ ಎಂದು ಹೆದರಿದ ಶಿವರಾಮ್ ಅದಕ್ಕೆ ಒಪ್ಪಲಿಲ್ಲ. ಆಗ ರುಕ್ಮಿಣಿ ಇನ್ನೊಂದು ವರಾತೆ ತೆಗೆದಳು. ಮಗನ ಬದಲಾಗಿ ಎರಡು ಲಕ್ಷ ರೂಪಾಯಿಗಳನ್ನು ಕೊಡಿ ಎಂದು ಒತ್ತಾಯಿಸಲಾರಂಭಿಸಿದಳು. ಆದರೆ ಅವಳು ಹೀಗೆ ಹೇಳುತ್ತಿರುವುದರ ಹಿಂದೆ ದುಷ್ಟರ ಒಂದು ಜಾಲವೇ ಇದೆ ಎಂದು ಅರಿತ ಶಿವರಾಮ್ ಮಗುವನ್ನಾಗಲಿ, ಹಣವನ್ನಾಗಲಿ ಕೊಡಲು ನಿರಾಕರಿಸಿದರು.

ಆಗ ರೂಪ ಪಡೆದದ್ದೇ ರುಕ್ಮಿಣಿಯ ದೂರು. ಅದರ ಪ್ರಕಾರ: ಶಿವರಾಮ್ ತನಗೆ ಕಿರುಕುಳ ನೀಡಿದ್ದಾರೆಂದೂ, ತನ್ನನ್ನು ಮತ್ತು ತನ್ನ ಗಂಡ ವಿಠ್ಠಲನ್ನು ಜೀತದಾಳಾಗಿ ಇಟ್ಟುಕೊಂಡಿದ್ದರೆಂದೂ, ಕೊನೆಗೆ ವಿಠ್ಠಲನನ್ನು ಬಲವಂತವಾಗಿ ಮನೆಬಿಟ್ಟು ಓಡಿಸಿದರು ಎಂಬುದು.

ಇದೆಲ್ಲ ಅವಳ ಹಿಂದಿರುವ ಜನರ ಕಪೋಲಕಲ್ಪಿತ ದೂರುಗಳು ಎಂಬುದು ಶಿವರಾಮ್ ವಾದ. ಇದು ಶಿವರಾಮ್ ಹೇಳುವ ಮಾತು.

ರುಕ್ಮಿಣಿ ಏನೆನ್ನುತ್ತಾಳೆ?

ಆದರೆ ರುಕ್ಮಿಣಿ ಶಿವರಾಮ್ ಹೇಳುವುದನ್ನು ಸಾರಾಸಗಟಾಗಿ ಅಲ್ಲಗಳೆದು ತನ್ನದೇ ಆದ ಭಿನ್ನ ಕಥೆಯನ್ನು ಹೇಳುತ್ತಾಳೆ. ಅವಳ ಪ್ರಕಾರ, ಏಳು ವರ್ಷಗಳ ಹಿಂದೆ ಶಿವರಾಮ್ ಮತ್ತು ಚಂದ್ರಕಲಾ ಇಬ್ಬರೂ ತಮ್ಮ ಭದ್ರಾವತಿಯ ಉಜ್ಜನೀಪುರದ ರುಕ್ಮಿಣಿ ಮನೆಗೆ ಬಂದು ವಿಠ್ಠಲ ಎಂಬುವವನನ್ನು ತೋರಿಸಿ, ಅವನು ಶಿವರಾಮ್‌ನ ಚಿಕ್ಕಪ್ಪನ ಮಗ ಎಂದು ನಂಬಿಸಿ ಮದುವೆ ಮಾಡಿಸಿದರು. ನಂತರದ ದಿನಗಳಲ್ಲಿ ವಿಠ್ಠಲ ತನ್ನ ಜಾತಿಯವನಲ್ಲ ಹಾಗೂ ಶಿವರಾಮ್‌ನ ಸಂಬಂಧಿ ಅಲ್ಲ ಎಂಬುದು ಗೊತ್ತಾಗಿ ಪ್ರಶ್ನಿಸಿದಾಗ "ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಿಸು" ಎಂಬ ಹಿತನುಡಿಯಂತೆ ಮಾಡಿರುವುದಾಗಿ ಶಿವರಾಮ್ ಹೇಳಿದ್ದಾರೆ. ಅಲ್ಲದೇ ತನಗೆ ಜೀವಬೆದರಿಕೆಯನ್ನೂ ಶಿವರಾಮ್ ಹಾಕಿದ್ದಾರೆ. ಅವರ ತೋಟದಲ್ಲಿ ಗಂಡ-ಹೆಂಡಿರಿಬ್ಬರನ್ನೂ ಜೀತದಾಳುಗಳನ್ನಾಗಿ ಮಾಡಿಟ್ಟುಕೊಳ್ಳಲಾಯಿತು. ನಂತರ ವಿಠ್ಠಲ ಮತ್ತು ರುಕ್ಮಿಣಿಯ ನಡುವೆ ವಿರಸವುಂಟು ಮಾಡಿ ಪರಸ್ಪರ ಜಗಳವಾಡುವಂತೆ ಮಾಡಿದ್ದೂ ಶಿವರಾಮ್‌ನೆ. ಜೊತೆಗೆ ಗಂಡ ವಿಠ್ಠಲ ತೋಟದ ಕೆಲಸಕ್ಕೆ ಹೋದಾಗ ಶಿವರಾಮ್ ರುಕ್ಮಿಣಿಗೆ ಲೈಂಗಿಕ ಕಿರುಕುಳ ಕೂಡ ನೀಡುತ್ತಿದ್ದ. ನಂತರ ಏಪ್ರಿಲ್ 2007ರಂದು ತನ್ನ ಮಗ ಮಂಜುನಾಥ್‌ನನ್ನು ರುಕ್ಮಿಣಿಯಿಂದ ಕಿತ್ತುಕೊಂಡ ಶಿವರಾಮ್ ಅವಳನ್ನು ಮನೆಯಿಂದ ಹೊರಹಾಕಿದ್ದಾರೆ. - ಇದು ರುಕ್ಮಿಣಿ ಹೇಳುವ ಕಥೆ.

ಈ ಕಥೆಯನ್ನು ರುಕ್ಮಿಣಿ ಭದ್ರಾವತಿಯಾದ್ಯಂತ ಮಾತ್ರವಲ್ಲ ವಿವಿಧ ಪತ್ರಿಕೆ ಮತ್ತು ಟಿ.ವಿ. ಚಾನಲ್‌ಗಳ ಮೂಲಕವೂ ಪ್ರಚಾರ ಮಾಡುತ್ತಿದ್ದಾಳೆ. ಈಕೆಗೆ ಪತ್ರಿಕೆ ಮತ್ತು ಟಿ.ವಿ.ಗಳ ಸಂಪರ್ಕಗಳನ್ನು ಕೊಟ್ಟು ಅದಕ್ಕಾಗಿ ವ್ಯವಸ್ಥೆ ಮಾಡುತ್ತಿರುವವರು ಮಾತ್ರ ಹಿಂದೆ ನಿಂತುಕೊಂಡೇ ಕೆಲಸ ಮಾಡುತ್ತಿದ್ದಾರೆ.

ಆದರೆ ಇತ್ತೀಚಿನ ತನಕ ಈ ವಿಷಯವನ್ನು ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳದ ಶಿವರಾಮ್ ಪರಿಸ್ಥಿತಿ ಎಲ್ಲೆ ಮೀರುತ್ತಿರುವುದನ್ನು ಗಮನಿಸಿ ತಕ್ಷಣವೇ ಜಾಗೃತಗೊಂಡು ಮೇ 29ರಂದು ಭದ್ರಾವತಿಯ ಜೆಎಮ್‌ಎಫ್‌ಸಿ ನ್ಯಾಯಾಲಯದಲ್ಲಿ ಸಿವಿಲ್ ಮೊಕದ್ದಮೆಯನ್ನು ಸಲ್ಲಿಸಿದರು. ಅಂದೇ ಆ ಮೊಕದ್ದಮೆಯು ದಾಖಲಾಯಿತು. (CR. No.: 665/07; O.S. No.: 105/2007). ಸದ್ಯಕ್ಕೆ ಈ ವಿವಾದವು ನ್ಯಾಯಾಲಯದಲ್ಲಿದೆ.

ಯಾವಾಗ ಶಿವರಾಮ್ ನ್ಯಾಯಾಲಯದ ಮೊರೆ ಹೋದರೋ ತಕ್ಷಣ ರುಕ್ಮಿಣಿ ಮತ್ತಾಕೆಯ ಹಿಂದಿರುವ ಗ್ಯಾಂಗ್ ರಂಗೋಲಿ ಕೆಳಗೆ ನುಸುಳುವ ಪ್ರಯತ್ನ ಪ್ರಾರಂಭಿಸಿದರು. ತಡಮಾಡದೇ, ಅವರು ರುಕ್ಮಿಣಿ ಕಡೆಯಿಂದ ಸವಿಸ್ತಾರವಾದ ಒಂದು ಕಂಪ್ಲೇಂಟ್‌ನ್ನು ಇದೇ ಜೂನ್ 2ರಂದು ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಿಸಿದರು. ಪೊಲೀಸ್‌ನವರು ಮೊಕದ್ದಮೆ ನ್ಯಾಯಾಲಯದಲ್ಲಿದ್ದರೂ ಈ ಕಂಪ್ಲೇಂಟ್‌ನ್ನು ಸ್ವೀಕರಿಸಿ ಶಿವರಾಮ್ ಮೇಲೆ ಕೇಸು ದಾಖಲಿಸಿದ್ದಾರೆ. (ಠಾಣಾ ಸಿಆರ್ ನಂ. 102/07, ಕಲಂ: 506, 324, 354, 342, 361, R/W, ವಿಥ್ 34 ಐಪಿಸಿ).

ಇಷ್ಟಕ್ಕೆ ಸುಮ್ಮನಿರದ ರುಕ್ಮಿಣಿ ಅಂಡ್ ಗ್ಯಾಂಗ್ ಮತ್ತೊಂದು ವರಸೆಯನ್ನು ಪ್ರಾರಂಭಿಸಿ ಶಿವರಾಮ್ ತಲೆಮರೆಸಿಕೊಂಡಿದ್ದಾರೆಂದು ಹುಯಿಲೆಬ್ಬಿಸಲಾರಂಭಿಸಿದರು. ವಾಸ್ತವದಲ್ಲಿ ಈ ಸಮಸ್ಯೆ ಬಗೆಹರಿಯದೇ ಹಾಗೆಯೇ ಮುಂದುವರಿದಷ್ಟು ರುಕ್ಮಿಣಿಯ ಹಿಂದಿರುವ ಪುಢಾರಿಗಳಿಗೆ ಸಂತೋಷ. ಏಕೆಂದರೆ ಇದರಿಂದ ಒಂದೆಡೆ ಶಿವರಾಮ್‌ನನ್ನು ಬಗ್ಗುಬಡಿದರೆ ಇನ್ನೊಂದೆಡೆ ಅವರಿಂದ ಒಂದಿಷ್ಟು ಹಣವನ್ನೂ ಕಕ್ಕಿಸಬಹುದು. ಹಾಗಾಗಿ, ಆ ಪುಢಾರಿಗಳ್ಯಾರೂ ಮುಂದೆ ಬರದೆ ಚಾಣಾಕ್ಷತನದಿಂದ ಕೇವಲ ರುಕ್ಮಿಣಿಯನ್ನು ಮಾತ್ರ ಮುಂದೆ ಬಿಡುತ್ತಿದ್ದಾರೆ.

ಇಲ್ಲಿ ನಡೆಯುತ್ತಿರುವ ಇನ್ನೊಂದು ಅವಿವೇಕವನ್ನು ಗಮನಿಸಬೇಕು. ಮಗು ಯಾರಿಗೆ ಸೇರಬೇಕು? ನಿಜಕ್ಕೂ ಶಿವರಾಮ್ ರುಕ್ಮಿಣಿ ಮತ್ತು ವಿಠ್ಠಲರನ್ನು ಜೀತದಾಳಾಗಿ ಇಟ್ಟುಕೊಂಡಿದ್ದರೆ? ಶಿವರಾಮ್ ನಿಜಕ್ಕೂ ರುಕ್ಮಿಣಿಗೆ ಲೈಂಗಿಕ ಕಿರುಕುಳ ನೀಡಿದ್ದರೆ? ಮುಂತಾದ ಪ್ರಶ್ನೆಗಳಿಗೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುವ ಮೂಲಕ ದೊರಕಬೇಕಾಗಿದೆ.

ಏಕೆಂದರೆ ಶಿವರಾಮ್ ಹಾಕಿದ ಮೊಕದ್ದಮೆ ಹಾಗೂ ರುಕ್ಮಿಣಿ ಕೊಟ್ಟ ಕಂಪ್ಲೇಂಟ್ ಎರಡೂ ಈಗ ನ್ಯಾಯಾಲಯದಲ್ಲಿವೆ. ಹೀಗಿರುವಾಗ ನ್ಯಾಯಾಲಯದಿಂದ ತೀರ್ಪು ಬರುವ ತನಕವೂ ಕಾಯದೇ ಈ ರೀತಿ ಅರ್ಥವಿಲ್ಲದ ಬೀದಿಜಗಳ ಕಾಯುವುದು ತರವಲ್ಲ ಮಾತ್ರವಲ್ಲ ಅದು ನ್ಯಾಯಾಲಯಕ್ಕೆ ಎಸಗುವ ಅಪಚಾರ ಕೂಡ. ■



ಮಂಜುನಾಥನ ಹುಟ್ಟುಹಬ್ಬದಂದು ಚಂದ್ರಕಲಾ ಮತ್ತು ರುಕ್ಮಿಣಿ

ನನ್ನ ಹೆಂಡತಿಗೆ ನಾನು ನಾಲ್ಕು ಮಾತು ಹೇಳಿದರೆ, ಆಕೆ ನನಗೆ ನಾಲ್ಕು ಪ್ಯಾರಾಗಳನ್ನೇ ಹೇಳುತ್ತಾಳೆ -ಅನಾಮಿಕ

ಕೊಂದವನು ಬಿದ್ದ ಗೆದ್ದವನು ಸತ್ತ!

ರಿವೇಂಜ್ ಕಿಲ್ಲಿಂಗ್ಸ್ 34

ರಾ. ಸೋಮನಾಥ್

ಪೊಲೀಸರ ಗುಂಡಿಗೆ ಬಲಿಯಾದ ಶಿವಮೊಗ್ಗ ನಾಗ ಮತ್ತು ತಮಿಳು ಕುಮಾರ ಇಬ್ಬರೂ ಕೊರಂಗು ಸುನೀಲನ ವಿರೋಧಿ ಪಡೆಯಲ್ಲಿದ್ದವರು. ಅಲ್ಲಿಗೆ ಕೊರಂಗು ಮೇಲೆ ದಾಳಿ ಮಾಡಿ ಆತನ ಬಂಟ ದೀಪುವನ್ನು ಕೊಂದು ಹಾಕಿದ ಹೆಬ್ಬೆಟ್ಟು ಮಂಜನ ಆರ್ಭಟಕ್ಕೊಂದು ಬ್ರೇಕ್ ಬಿತ್ತೆ? ಅಥವಾ ಅವರಿಬ್ಬರನ್ನು ಕೊಂದು ಪಾತಕ ಲೋಕಕ್ಕೊಂದು ಎಚ್ಚರಿಕೆ ಕೊಡುವುದು ಪೊಲೀಸರ ಉದ್ದೇಶವಾಗಿತ್ತೆ? ಜೆಡಿಎಸ್ ಸರ್ಕಾರ ಬರುತ್ತಿದ್ದಂತೆ ಆ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದ ಮುಲಾಮು, ಕಾಮಾಕ್ಷಿಪಾಳ್ಯದ ಬಸವ, ಕಡಬಗೆರೆ ಪಾಯ್ಸನ್ ರಾಮು, ನೆಲಮಂಗಲದ ಚಿತ್ತನಗೆರೆ ಸೀನ ಇತ್ಯಾದಿಗಳ ಹಾವಳಿಯನ್ನು ಇಡೀ ಪೊಲೀಸ್ ವ್ಯವಸ್ಥೆ ನಿಷ್ಕ್ರಿಯವಾಗಿ ಬೆಂಬಲಿಸುತ್ತಿದೆ ಎಂಬ ಆರೋಪವನ್ನು ಇವರಿಬ್ಬರನ್ನು ಎನ್‌ಕೌಂಟರ್ ಮಾಡುವುದರ ಮೂಲಕ ಪೊಲೀಸರು ಕೈತೊಳೆದು ಕೊಂಡರೆ?



ಅರಸಯ್ಯ

ಇದೆಲ್ಲಕ್ಕೂ ಒಂದೇ ಉತ್ತರ 'ಹೌದು'! ಆವತ್ತಿನ ಪರಿಸ್ಥಿತಿಯೇ ಹಾಗಿತ್ತು. ಮಚ್ಚನ ಕೊಲೆ, ಸೂರಿ-ಟೋನಿ ಜೋಡಿ ಕೊಲೆ, ಜವ ಗೊಂಡನಹಳ್ಳಿ ಡಾಬಾ ಮೇಲಿನ ದಾಳಿ ಇತ್ಯಾದಿಗಳೆಲ್ಲ ಒಂದರ ಹಿಂದೊಂದು ನಡೆದುಬಿಟ್ಟವು. ಅದೇ ಹೊತ್ತಿಗೆ ವಿವೇಕ್ ನಗರದ ರೌಡಿ ಪಳನಿಯನ್ನು ಡಿಡಿ ರವಿಯ ಗ್ಯಾಂಗ್ ಆಸ್ಪತ್ರೆಗೇ ನುಗ್ಗಿ ಕೊಚ್ಚಿ ಹಾಕಿತ್ತು. ಕತ್ರಿಗುಪ್ಪೆಯಲ್ಲಿ ಬಳ್ಳನ ಗ್ಯಾಂಗ್ ಟ್ಯಾಕ್ಟರ್ ರಾಮನನ್ನು ಕೊಂದಾಗಿತ್ತು. ಅದೇ ಕತ್ರಿಗುಪ್ಪೆಯ ಮತ್ತೊಬ್ಬ ಪಾತಕಿ ಲಿಂಗ ಇಟ್ಟಮಡುವಿಗೆ ನುಗ್ಗಿ ಜಗ್ಗನ ಹುಡುಗನನ್ನು ಕೊಂದರೆ, ಲಿಂಗನ ಶಿಷ್ಯನೊಬ್ಬನನ್ನು ಜಗ್ಗನ ಹುಡುಗರು ಮುಗಿಸಿದ್ದರು.

ಈ ಎಲ್ಲ ಘಟನೆಗಳಿಂದಾಗಿ ಪೊಲೀಸ್ ಕಮೀಷನರ್ ನೀಲಂ ಅಚ್ಯುತರಾವ್ ದಿಕ್ಕು ತೋಚದಂತಾದರು. ಹಾಗಂತ ಸಮಸ್ಯೆಗೆ ಏನಾದರೂ ಪರಿಹಾರ ಯೋಚಿಸ ಬೇಕಲ್ಲ? ತಮಾಷೆಯೆಂದರೆ ಇಡೀ ಬೆಂಗಳೂರಿನ ಪೊಲೀಸ್ ವ್ಯವಸ್ಥೆಯೇ ಅಸ್ತವ್ಯಸ್ತವಾಗಿತ್ತು. ಒಬ್ಬೊಬ್ಬ ಡಿಸಿಪಿಯದೂ ಒಂದೊಂದು ದಾರಿ. ಸಿಸಿಬಿಗೆ ರವಿಕಾಂತೇಗೌಡರು ಡಿಸಿಪಿ ನಿಜ. ಆದರೆ ಅವರ ಅಧೀನರಾದ ಎಸಿಪಿ ಬಿ.ಕೆ. ಶಿವರಾಂಗೆ ಅಧಿಕಾರವೇ ಇಲ್ಲ. ಜಂಟಿ ಕಮೀಷನರ್ ಬಿಪಿನ್ ಗೋಪಾಲಕೃಷ್ಣ ಹೇಳಿಕೇಳಿ ನಾರ್ತ್ ಇಂಡಿಯನ್. ತೀರ ರಿಸ್ಕ್ ತೆಗೆದುಕೊಂಡು ನುಗ್ಗುವುದಿಲ್ಲ. ಅವರಿಗೆ ಪಶ್ಚಿಮ ವಲಯದ ಡಿಸಿಪಿ ಶರತ್‌ಚಂದ್ರರದು ಪಕ್ಕಾ ಸಪೋರ್ಟು. ಆದರೆ ಇವರಿಬ್ಬರೂ ಕಮೀಷನರ್ ನೀಲಂ ಅಚ್ಯುತರಾವ್ ಆಣತಿಗಿಂತಲೂ ದೇವೇಗೌಡರ ಕುಟುಂಬ ಪರಮ ನಿಷ್ಠ ಇಂಟಲಿಜೆನ್ಸ್ ಐಜಿ ಕಿಶೋರ್ ಚಂದ್ರರ ಮಾತಿಗೇ ಹೆಚ್ಚು ಬೆಲೆ ಕೊಡುತ್ತಾರೆ.




ಅ…ಕ್ ಕುಮಾರ್

ಇನ್ನು ಸೆಂಟ್ರಲ್ ಡಿಸಿಪಿ ಬಿ.ಎನ್. ಶ್ರೀನಿವಾಸರೆಡ್ಡಿ ಕೂಡ ದೇವೇಗೌಡರ ಮನೆ ಮಗನಂಥವರೆ. ಪೂರ್ವದ ಡಿಸಿಪಿ ಬಿ.ಕೆ. ಸಿಂಗ್, ಸೌತ್ ಈಸ್ಟ್ ಡಿಸಿಪಿ ಸೌಮೇಂದು ಮುಖರ್ಜಿ, ಉತ್ತರ ವಲಯದ ಡಿಸಿಪಿ ಅಲೋಕ್ ಕುಮಾರ್ ಇತ್ಯಾದಿಗಳು ಎಷ್ಟು ಪ್ರಮಾಣಿಕರೋ ಅಷ್ಟೇ ನಿರುಪದ್ರವಿಗಳು. ಇಂಥ ನಾಮಕಾವಸ್ತೆಯ ಐಪಿಎಸ್‌ಗಳ ಮಧ್ಯೆ ಅಡಿಷನಲ್ ಕಮೀಷನರ್ ಗೋಪಾಲ್ ಹೊಸೂರ್ ನಿಜಕ್ಕೂ ತಾಕತ್ತುಳ್ಳ ಅಧಿಕಾರಿಯಾದರೂ ಅವರಿಗೆ ಪೊಲೀಸು ಮಂತ್ರಿ ಎಂ.ಪಿ. ಪ್ರಕಾಶ್ ಸಾಹೇಬರ ಕೃಪೆಯಿದ್ದರಷ್ಟೇ ಉಳಿಯಲು ಸಾಧ್ಯ ಎಂಬಂಥ ದುರ್ಗತಿ.

ಇಂಥ ಅವ್ಯವಸ್ಥೆಯ, ಪರಸ್ಪರ ಹೊಂದಾಣಿಕೆಯಿಲ್ಲದ, ಯಾರ ಮಾತನ್ನು ಯಾರೂ ಕೇಳದ; ಅರಾಜಕ ಪೊಲೀಸ್ ವ್ಯವಸ್ಥೆಯನ್ನು ಸಹಜವಾಗೇ ದೇವೇಗೌಡರ ಕುಟುಂಬದ ನಿಷ್ಠ ಐಪಿಎಸ್ ಕಿಶೋರ್‌ಚಂದ್ರ ತಮ್ಮ ಕಂಟ್ರೋಲಿಗೆ ತೆಗೆದುಕೊಂಡರು. ಕಿಶೋರ್‌ಚಂದ್ರರ ನೆಚ್ಚಿನ ಬಂಟ ಎಸಿಪಿ ದಿವಾಕರ್ ನಿಯಂತ್ರಣಕ್ಕೆ ಬೆಂಗಳೂರಿನ ಬಹುತೇಕ ಪೊಲೀಸ್ ಠಾಣೆಗಳು ಒಳಪಟ್ಟವು. ಆಯಾ ಪೊಲೀಸ್ ಠಾಣೆಗಳಿಗೆ ಬಂದ ಇನ್ಸ್‌ಪೆಕ್ಟರ್‌ಗಳೆಲ್ಲ ಬಹುತೇಕ ಹೊರಗಿನವರು. ಅವರಿಗೆ ಬೆಂಗಳೂರಿನ ಪಾತಕಲೋಕದ ಬಗ್ಗೆ ತಿಳಿವಳಿಕೆ ಕಮ್ಮಿ. ಇನ್ನು ಗ್ಯಾಂಗ್‌ವಾರ್ ನಿಲ್ಲುವುದಾದರೂ ಹೇಗೆ?

ನೆಲಮಂಗಲದಲ್ಲಿ ಸರಣಿ ಕೊಲೆಗಳನ್ನು ಮಾಡಿಕೊಂಡೇ ಬಂದ ಚಿತ್ತನಗೆರೆ ಸೀನ ಹೇಳಿಕೇಳಿ ಪಕ್ಕಾ ಜೆಡಿಎಸ್ ಕಾರ್ಯಕರ್ತ. ಪ್ರಾರಂಭದಲ್ಲಿ ಓರ್ವ ಕಾಂಗ್ರೆಸ್ ಕಾರ್ಯಕರ್ತರನ್ನು ಕೊಂದ ಪೊಲೀಸರು ಹಿಡಿಯಲೇ ಇಲ್ಲ. ಹಾಗೇ ತಲೆ ಮರೆಸಿಕೊಂಡಿದ್ದವನು ಆದಾಗಿ ಒಂದೂವರೆ ವರ್ಷಕ್ಕೆ ಸರಿಯಾಗಿ ವಕೀಲ ದೇವರಾಜ್ ಮತ್ತು ಇನ್ನೊಬ್ಬ ಕಾಂಗ್ರೆಸ್ ಕಾರ್ಯಕರ್ತರನ್ನು ಒಟ್ಟೊಟ್ಟಿಗೇ ಕೊಂದು ಹಾಕಿದ. ಇಷ್ಟಾದ ಮೇಲೂ ಪೊಲೀಸರು ಆತನನ್ನು ಬಂಧಿಸಬೇಕಿತ್ತು. ಸರಿಸುಮಾರು ಮೂರು ಸರಣಿ ಹತ್ಯಾಕಾಂಡಗಳನ್ನು ಮಾಡಿಯೂ ಕಳೆದ ಐದು ವರ್ಷಗಳಿಂದ ಆತನನ್ನು ಹಿಡಿಯಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ ಎಂದರೆ ಏನರ್ಥ?


ಹಾಗೆ ಪೊಲೀಸ್ ನಿಷ್ಕ್ರಿಯತೆಯ ಲಾಭ ಪಡೆದ ಚಿತ್ತನಗೆರೆ ಸೀನ ಈಗ ನೆಲಮಂಗಲದ ಪ್ರಭಾವಿ ಕಾಂಗ್ರೆಸ್ ನಾಯಕ ಬಿನ್ನಮಂಗಲ ಕೃಷ್ಣಪ್ಪನನ್ನು ಕೊಂದ ನಂತರವೇ ತಾನು ಪೊಲೀಸ್‌ಗೆ ಸರೆಂಡರ್ ಆಗೋದು ಎಂದು ಬಹಿರಂಗವಾಗಿ ಹೇಳಿಕೆ ಕೊಟ್ಟಿದ್ದಾನೆ. ಮುಂದೊಮ್ಮೆ ನೆಲಮಂಗಲಕ್ಕೆ ಎಮ್ಮೆಲ್ಲೆ ಕ್ಯಾಂಡಿಡೇಟ್ ಆಗಲು ಯತ್ನಿಸುತ್ತಿರುವ ಮತ್ತೊಬ್ಬ ಜೆಡಿಎಸ್ ನಾಯಕ ಯಡಾಳು ದೇವಿಗೆ ಹಂತಕ ಚಿತ್ತನಗೆರೆ ಸೀನ ಬಾಮೈದ. ಬಿನ್ನಮಂಗಲ ಕೃಷ್ಣಪ್ಪನನ್ನು ಮುಗಿಸಿಬಿಟ್ಟರೆ ಇಡೀ ನೆಲಮಂಗಲ ಜೆಡಿಎಸ್ ಪಾಲಾಗಿಬಿಡುತ್ತದೆ ಎಂಬ ದುರಾಶೆ ಅಲ್ಲಿನ ಜೆಡಿಎಸ್ ಪಾತಕಿಗಳಿಗೆ.




ಕಪಾಲಿ ಆನಂದ

ಹೋಗಲಿ ತೀರ ಇತ್ತೀಚೆಗೆ ಕೊಲೆಯಾದ ಜೆ.ಪಿ. ನಗರದ ಜಲ್ಲಿ ವೆಂಕಟೇಶ್ ತಾನೇ ಯಾರು? ಆತನೂ ಪಕ್ಕಾ ಕಾಂಗ್ರೆಸ್ ನಾಯಕನೆ. ಆತನನ್ನು ಕೊಂದ ಅಲ್ಯೂಮಿನಿಯಂ ಬಾಬು ಜಯನಗರ ಜೆಡಿಎಸ್ ಅಧ್ಯಕ್ಷ ಮಹ್ಮದ್ ರಿಜ್ವಾನ್ ಎಂಬಾತನ ಚೇಲಾ. ಇದೆಲ್ಲಕ್ಕೂ ಮುನ್ನ ಹಾಸ್‌ಮ್ಯಾಟ್ ಆಸ್ಪತ್ರೆಗೇ ನುಗ್ಗಿ ವಿವೇಕನಗರದ ಪಳನಿಯನ್ನು ಕೊಂದರಲ್ಲ; ಆತ ಹೇಳಿಕೇಳಿ ಶಾಂತಿನಗರದ ಕಾಂಗ್ರೆಸ್ ನಾಯಕ ಎ. ಶಂಕರ್ ಬೆಂಬಲಿಗ.


ಇಲ್ಲಿ ಕೊಲ್ಲುವ ಬಹುತೇಕರು ಜೆಡಿಎಸ್ ಪಾಳಯದ ರೌಡಿಗಳೆ. ಕೊಲ್ಲಲ್ಪಟ್ಟವರಲ್ಲಿ ಕಾಂಗ್ರೆಸ್ ರೌಡಿಗಳೇ ಜಾಸ್ತಿ. ಬಹುಶಃ ಮಾರ್ಕೆಟ್ ದೇವಿಯಂಥವರು ಬೆಳೆಸಿದ ಕಾಂಗ್ರೆಸ್ ರೌಡಿಗಳ ಹಾವಳಿ ಈಗ ಅವರಿಗೇ ಉಲ್ಟಾ ಹೊಡೆಯುತ್ತಿದೆಯೆ?



ಮಾರ್ಕೆಟ್ ದೇವಿ




ಸದ್ಯ ಚಾಮರಾಜಪೇಟೆಯ ಮತ್ತೊಬ್ಬ ಕಾಂಗ್ರೆಸ್ ನಾಯಕ ನರಸಿಂಹಮೂರ್ತಿ ಉರ್ಫ್ ಪೂಣಿ ಎಂಬ ಮಾರ್ಕೆಟ್ ದೇವಿಯ ಬಂಟನನ್ನು ಶತಗತಾಯ ಮುಗಿಸಿ ಹಾಕ್ತೀನಿ ಎಂದು ಬಹಿರಂಗವಾಗಿ ಪರೇಡು ಮಾಡುತ್ತಿರುವವನು ಮೆಜೆಸ್ಟಿಕ್ ಪಾತಕಿ ಕಪಾಲಿ ಆನಂದ. ಹಿಂದೊಮ್ಮೆ ಚಿತ್ರ ನಿರ್ದೇಶಕ ಎಸ್. ನಾರಾಯಣ ಮನೆಗೆ ನುಗ್ಗಿ ಹಾವಳಿ ಮಾಡಿದ್ದ. ವಿಜಯನಗರಕ್ಕೆ ದುರ್ಗಯ್ಯ ಇನ್ಸ್‌ಪೆಕ್ಟರ್ ಆಗಿದ್ದಾಗ ಡಕಾಯಿತಿಗೆ ಹೊಂಚು ಹಾಕುತ್ತಿರುವಾಗಲೇ ಕಪಾಲಿ ಮತ್ತು ಆತನ ಬಂಟರನ್ನು ಅರ್ಧ ಡಜನ್ ಮಚ್ಚು ಲಾಂಗುಗಳ ಸಮೇತ ಹಿಡಿದು ಜೈಲಿಗೆ ಹಾಕಿದ್ದರು.



ಕೊಲೆಯಾದ ಜಲ್ಲಿ ವೆಂಕಟೇಶ

ಇಲ್ಲಿಗೆ ಎರಡು ತಿಂಗಳ ಹಿಂದೆ ಜೈಲಿನಿಂದ ಹೊರಬಿದ್ದ ಕಪಾಲಿ ಈಗ ತಾನೂ ಜೆಡಿಎಸ್ ನಾಯಕನೆಂದು ಪೋಜು ಕೊಡುತ್ತಿದ್ದಾನೆ. ಸ್ವಭಾವತಃ ಚಾಮರಾಜಪೇಟೆ ಶಾಸಕ ಜಮೀರ್ ಇಂಥ ಪರೋಡಿಗಳನ್ನು ಯಾವತ್ತಿಗೂ ಹತ್ತಿರಕ್ಕೆ ಬಿಟ್ಟುಕೊಳ್ಳುವವರಲ್ಲ. ಆದರೆ ಕಪಾಲಿಗೆ ಜಮೀರ್ ಫೋಟೋ ಬಿಟ್ಟರೆ ಬೇರೆ ಗತಿಯಿಲ್ಲ. ಚಾಮರಾಜ ಪೇಟೆ ಸುತ್ತಮುತ್ತ ಅಗಲಗಲದ ವಿನೈಲ್ ಬೋರ್ಡುಗಳನ್ನು ಹಾಕಿಸಿ ತಾನೂ ಜೆಡಿಎಸ್ ರೌಡಿ ಎಂದು ಟಾಂಟಾಂ ಮಾಡುತ್ತಿದ್ದಾನೆ. ದೇವಿಯ ಪರಮಾಪ್ತ ಪೂಣಿಯನ್ನು ಕೊಂದೇ ಹಾಕ್ತೀನಿ ಎಂದು ರೋಲ್‌ಕಾಲ್ ಆರಂಭಿಸಿದ್ದಾನೆ. ಹಾಗೇ ಹೇಳಿಕೊಂಡು ರಾಬರಿಗಿಳಿದಾಗ ಪೊಲೀಸರಿಗೆ ತಾನು ಜೆಡಿಎಸ್ ಅಂತ ನಂಬಿಸಬಹುದಲ್ಲ. ಆಗ ಅಷ್ಟಿಷ್ಟು ಲಾತಾಗಳಾದರೂ ತಪ್ಪುತ್ತದಲ್ಲ! ಇದು ಬೆಂಗಳೂರಿನ ಹಾಲೀ ಟ್ರೆಂಡು.

ಜೆಡಿಎಸ್ ಸರ್ಕಾರವಿರುವ ತನಕ ಪಾತಕಿಗಳು ಅವರ ನೆರಳಿಗೆ ಬರುತ್ತಾರೆ. ಬಿಜೆಪಿಯ ಹರೀಶನಂಥ ಕ್ರಿಮಿನಲ್‌ಗಳು ಪೋರ್ಕಿಗಳ ಹಿಂದು ಕಟ್ಟಿಕೊಂಡು ಮಸೀದಿಗೆ ನುಗ್ಗುತ್ತಾರೆ. ಅದೇ ಕಾಂಗ್ರೆಸ್ ಸರ್ಕಾರ ಬಂತೆಂದರೆ ಈಗ ತೆಪ್ಪಗಿರುವ ಮಾರ್ಕೆಟ್ ದೇವಿಯ ರಕ್ಕಸ ಸೇನೆ ಕೇಕೆ ಹಾಕುತ್ತದೆ.



ಗೋಪಾಲ್ ಬಿ. ಹೊಸೂರ್

ವಾಸ್ತವ ಏನು ಗೊತ್ತೆ? ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿಗಳೆಲ್ಲವೂ ಪ್ರಸ್ತುತ ಗ್ಯಾಂಗ್‌ವಾರ್‌ನಲ್ಲಿ ಚಳಿ ಕಾಯಿಸಿಕೊಳ್ಳುತ್ತಿವೆ. ಮಾರ್ಕೆಟ್ ದೇವಿಯಂಥವನು ಬಹಿರಂಗವಾಗಿ ರೌಡಿ ಸುನೀಲನ ಹೆಸರಲ್ಲಿ ಧಮಕಿ ಹಾಕುತ್ತಾನೆ. ವಸೂಲಿ ಮಾಡುತ್ತಾನೆ. ಚನ್ನಿಗಪ್ಪನ ಮಗ ಗೌರಿಶಂಕ್ರ, ಮಾಗಡಿ ಬಾಲಕೃಷ್ಣ, ಸಾರಿಗೆ ಮಂತ್ರಿ ಚಲುವರಾಯಸ್ವಾಮಿ, ಬಿಜೆಪಿಯ ಮಾರ್ವಾಡಿ ಎಮ್ಮೆಲ್ಲೇ ನಿರ್ಮಲ್ ಸುರಾನಾ, ಚಿಕ್ಕಪೇಟೆ ಶಾಸಕ ಪಿ.ಸಿ. ಮೋಹನ್, ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ನಾಯ್ಡು; ಹೀಗೆ ಪ್ರತಿಯೊಬ್ಬ ಲ್ಯಾಂಡ್ ಡೀಲರ್ ರಾಜಕಾರಣಿಗೂ ಅಂಡರ್‌ವರ್ಲ್ಡ್ ಒಲೆಯಲ್ಲೇ ಅನ್ನ ಬೇಯಿಸಿಕೊಳ್ಳಬೇಕು.

ಹೀಗೆ ಮಾಗಡಿ ಬಾಲಕೃಷ್ಣರ ಲ್ಯಾಂಡ್ ಡೀಲಿಗೆ ಬಳಕೆಯಾಗಿ ಜಿದ್ದಿಗೆ ಬಿದ್ದು ಮಚ್ಚ ರೌಡಿಯಾದ. ಯಾವತ್ತು ಬಾಲು ಉಲ್ಟಾ ಹೊಡೆದರೋ ದೀಕೇಶಿಯನ್ನು ನೆಚ್ಚಿಕೊಂಡ. ಅಲ್ಲಿಗೆ ಪೊಲೀಸ್ ಕೆಂಗಣ್ಣು ಮಚ್ಚನ ಮೇಲೆ ನಾಟಿಬಿಟ್ಟಿತ್ತು. ಅನ್ಯಾಯವಾಗಿ ಕೊಲೆಯಾದ. ಆತನ ಶಿಷ್ಯರೆಲ್ಲ ಸದ್ಯ ಜೈಲು ಪಾಲಾಗಿದ್ದಾರೆ. ಕೊಲ್ಲಿಸಿದ ಮುಲಾಮು ಭೂಗತನಾಗಿದ್ದಾನೆ. ಆತನೇ ನಿಂತು ಬೆಳೆಸಿದ ರಾಮು-ಲಕ್ಷ್ಮಣರಂಥ ಹಂತಕರು ಈಗ ತಮ್ಮದೇ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಳ್ಳುವಷ್ಟು ಆರ್ಥಿಕವಾಗಿ ಸದೃಢವಾಗಿ ಬಿಟ್ಟಿದ್ದಾರೆ. ಲ್ಯಾಂಡ್ ದೀಲು ರೌಡಿಗಳ ಪಾಲಿಗೆ ಅಕ್ಷಯ ಪಾತ್ರೆಯಿದ್ದಂತೆ. ಇಲ್ಲಿ ಖಂಡ-ಮಾಂಸಗಳೆಲ್ಲ ಪುಢಾರಿ ಪೊಲೀಸರ ಪಾಲಾದರೆ ಮೂಳೆ ಕಡಿಯಲು ಬಳಕೆಯಾಗುವವನು ಪಾತಕಿ.

ಹೀಗೇ ಶುರುವಾದ ಜಿದ್ದಾಜಿದ್ದಿಯೇ ಈಗ ಇಡೀ ಬೆಂಗಳೂರನ್ನು ವ್ಯಾಪಿಸಿಬಿಟ್ಟಿದೆ. ಕೊರಂಗು-ಸುನೀಲರದು ಒಂದು ಸಿಂಡಿಕೇಟಾದರೆ ಕಡಬಗೆರೆ ಪಾಯ್ಸನ್ ರಾಮು ಮತ್ತು ಮುಲಾಮನದು ಅದರ ಕಡುವೈರಿ ಪಡೆ. ಹೆಬ್ಬೆಟ್ಟು ಮಂಜನ ತಂಡಕ್ಕೆ ಕೊರಂಗು ವಿರುದ್ಧ ಸುಪಾರಿ ಕೊಟ್ಟವನು ಮುಲಾಮು. ಮುಲಾಮುನಿಗಿಂತಲೂ ಶಿವಮೊಗ್ಗ ನಾಗನನ್ನು ನಂಬಿಕೊಂಡು ಹೆಬ್ಬೆಟ್ ಮಂಜ ಜವಗೊಂಡನಹಳ್ಳಿ ಡಾಬಾಕ್ಕೆ ನುಗ್ಗಿ ರಕ್ತ ಹರಿಸಿದ್ದ. ಆದರೆ ಶಿವಮೊಗ್ಗ ನಾಗನೇ ನಿಕಾಲಿಯಾಗಿ ಹೋದ. ಮಚ್ಚನ ಕೊಲೆಯ ಪ್ರತೀಕಾರವನ್ನು ಆತನ ಶಿಷ್ಯ ಕೋತಿರಾಮನೇ ನಿಭಾಯಿಸುತ್ತಿದ್ದ. ಅದಕ್ಕೆ ಮೂಗು ತೂರಿಸಿದ ತಪ್ಪಿಗೆ ಕೊರಂಗು ಕೈ ಲ್ಯಾಪ್ಸ್ ಮಾಡಿಕೊಂಡ. ಕೊರಂಗು ಹಂಗಿಗೆ ಬಿದ್ದು ಕೆಂಗೇರಿಯಲ್ಲಿ ಟೋನಿ-ಸೂರಿಯನ್ನು ಕೊಂದವನು ಪೆದ್ದಗುಂಡ. ಆತನಿಗೆ ಬಂದ ಲಾಭವಾದರೂ ಏನು? ಇನ್ಸ್‌ಪೆಕ್ಟರ್ ಉಮೇಶ್ ಕೈಯಲ್ಲಿ ಹೇಗೋ ಪ್ರಾಣ ಉಳಿಸಿಕೊಂಡನಾದರೂ ಆತನ ಕಾಲು ಲ್ಯಾಪ್ಸಾಯಿತು. ಇನ್ನು ಓಡುವಂತಿಲ್ಲ. ನೆಟ್ಟಗೆ ನಿಲ್ಲಲಿಕ್ಕೂ ಆಗದು!

ಇತ್ತ ಗಾಯತ್ರಿನಗರದ ಜಗ್ಗಿಯ ಕತೆ ಇನ್ನೂ ದಾರುಣ. ಯಾವುದೋ ಹಮ್ಮಿಗೆ ಬಿದ್ದು ಲಕ್ಕಿಯನ್ನು ತಡವಿಕೊಂಡ. ಅದಕ್ಕೆ ಜಗ್ಗಿಯ ತಮ್ಮ ಪ್ರಸಾದಿಯೇ ಬಲಿಯಾದ. ಪ್ರಸಾದಿಯನ್ನು ಕೊಂದ ಜಿದ್ದಿಗೆ ಲಕ್ಕಿ ಅಥವಾ ಕ್ಯಾಪ್ಟನ್ ರಾಜರು ಜಗ್ಗನ ಗುರಿಯಾಗಬೇಕಿತ್ತು. ಅವರ ಸಿಗದೇ ಹೋದಾಗ ಜಗ್ಗಿಯ ಶಿಷ್ಯ ಪೂರಿಶಿವನ ಗ್ಯಾಂಗು ಡಿಂಗಿ ಕೃಷ್ಣನನ್ನು ಕತ್ತರಿಸಿ ಹಾಕಿತು. ಅದಕ್ಕೆ ಜೈಲಲ್ಲಿ ಕೂತೇ ಪೂರಿಶಿವ ಇನ್ನೇನು ಮೀಸೆ ತಿರುವಬೇಕೆನ್ನುವಷ್ಟರಲ್ಲಿ ಆತನ ಅಣ್ಣ ಲೊಡ್ಡೆ ಲೋಕಿಯನ್ನು ಲಕ್ಕಿ ಶಿಷ್ಯರು ಕೊಚ್ಚಿ ಹಾಕಿದ್ದಾರೆಂಬ ಸುದ್ದಿ ಬಂತು!

ಇದೇ ಜಗ್ಗಿ ಸಿಂಡಿಕೇಟಿನ ಮತ್ತೊಂದು ಆಧಾರಸ್ತಂಭ ಅಂತಿದ್ದರೆ ಅದು ಬನಶಂಕರಿ ಅರಸಯ್ಯ. ಮೊದಲು ಅನ್ಯಾಯವಾಗಿ ಸತೀಶನನ್ನು ಕೊಂದ. ಆನಂತರ ರಂಗನಾಥನ ತಲೆ ತೆಗೆದ. ಈ ಎರಡೂ ಹತ್ಯೆಗಳ ಫಲ ಅದೆಷ್ಟು ದಾರುಣವಾಗಿತ್ತೆಂದರೆ ನಿಷ್ಪಾಪಿ ಅರಸಯ್ಯನ ತಮ್ಮ ಸಿದ್ಲಿಂಗನನ್ನು ರಂಗನಾಥನ ಶಿಷ್ಯರು ಕೊಂದು ಬಿಟ್ಟರು. ಹಾಗೇ ರಂಗನಾಥನ ಶಿಷ್ಯರ ಬೆನ್ನಿಗೆ ಆವತ್ತು ನಿಂತಿದ್ದ ಜಲ್ಲಿ ವೆಂಕಟೇಶ ಒಂದಾನೊಂದು ಕಾಲಕ್ಕೆ ಅರಸಯ್ಯನ ಜೊತೆಗಿದ್ದವನೆ. ಅರಸಯ್ಯನ ತಮ್ಮನ ಕತೆ ಮುಗಿಸಿದ ಪಾಪದಲ್ಲಿ ಆವತ್ತು ಜಲ್ಲಿ ವೆಂಕಟೇಶನ ಜೊತೆಗಿದ್ದವನು ಅಲ್ಯುಮಿನಿಯಂ ಬಾಬು. ಅರಸಯ್ಯನಿಗೆ ಏನನ್ನು ಜಲ್ಲಿ ಮಾಡಿದನೋ ಅದನ್ನೇ ಅಲ್ಯೂಮಿನಿಯಂ ಬಾಬು, ಜಲ್ಲಿ ವೆಂಕಟೇಶ್‌ನಿಗೆ ಮಾಡಿದ್ದಾನೆ!

ಇವತ್ತು ಅರಸಯ್ಯ ವಿಜಯದ ನಗೆ ನಕ್ಕಿರಬಹುದು. ಆದರೆ ಜಲ್ಲಿಯ ತಮ್ಮ ಬಿಡುತ್ತಾನಾ? ಯಾರನ್ನು ಕೊಂದ ಯಾರಾದರೂ ಏನನ್ನು ಸಾಧಿಸಿದ್ದಾರೆ?

ಇಲ್ಲಿ ಕೊಂದವನು ನಗುತ್ತಾನೆ. ನಕ್ಕ ತಪ್ಪಿಗೆ ತಪ್ಪದೇ ಅಳುತ್ತಾನೆ. ಅದು ನೈಸರ್ಗಿಕ ನ್ಯಾಯ. ಇದು ಜೈಲಲ್ಲಿ ಕೂತು ಸ್ಕೆಚ್ ಹಾಕುವವರಿಗೆ, ಅವರ ಹಂಗಿಗೆ ಬಿದ್ದು ಕೊಲೆಯಾಗಿ ಹೋಗುವ ಪಡ್ಡೆ ಹುಡುಗರಿಗೆ, ಅಂಥವರ ಮೂಲಕ ಏನನ್ನಾದರೂ ಸಾಧಿಸಬಹುದೆನ್ನುವ ಹುಂಬ ರೌಡಿಗಳಿಗೆ ಏಕೆ ಅರ್ಥವಾಗುತ್ತಿಲ್ಲ?

ಜೈಲಲ್ಲಿ ಕೂತೇ ಆಂಜನಪ್ಪ ಗಾರ್ಡನ್ನಿನ ಹಂತಕ ಗುಪ್ಪ ದಲಿತ ನಾಯಕ ಬಾಬುವನ್ನು ಕೊಲ್ಲಿಸಿದ. ಅದರ ಫಲ ಉಣ್ಣುವ ಮೊದಲೇ ಆತನ ಅಣ್ಣ ಗಣೇಶ ಹೆಣವಾದ. ಇನ್ನು ಗುಪ್ಪ ರಿವೇಂಜ್ ತೆಗೆದುಕೊಳ್ಳಬೇಕಿದ್ದರೆ ಅದು ಸ್ನೇಂದವ ಚಾಮುರಾಜನ ಮೇಲೆ! ಆದರೆ ಚಾಮನೇ ಜೆಡಿಎಸ್‌ನ ಮತ್ತೊಬ್ಬ ನಾಯಕನ ಗೆಟಪ್ಪಿನಲ್ಲಿದ್ದಾನೆ. ಪ್ರತಿ ಪುಢಾರಿಗೂ ರೌಡಿಗಳು ಬೇಕು. ಪಾತಕಿಗೆ ಇಂಥ ನಾಯಕನ ನೆರಳು ಬೇಕು. ಲ್ಯಾಂಡೇ ಬೊಕ್ಕಸ. ಜೈಲೇ ವಿಶ್ವವಿದ್ಯಾಲಯ. ಪೊಲೀಸರು ಸೂತ್ರಧಾರರು ಪರಸ್ಪರ ಕೊಂದುಕೊಳ್ಳುವ ಆವಕ್ಕೆ ಕೊನೆಯೇ ಇಲ್ಲವೆ?

-ಮುಗಿಯಿತು


ನಾನು ಭಯೋತ್ಪಾದನೆ ಬಗ್ಗೆ ಹೆದರುವುದಿಲ್ಲ. ಏಕೆಂದರೆ ನಾನು ಎರಡು ವರ್ಷ ಮದುವೆ ಆಗಿದ್ದೆ-ಸ್ಯಾಮ್ ಕಿನಿಸನ್

ಮೈಲಾರಿ ಮಹಾತ್ಮೆ

ಬೆಂಗಳೂರು ವಿಶ್ವವಿದ್ಯಾಲಯ ಕೊನೆಗೂ ರಿಪೇರಿಯಾಗುವ ಲಕ್ಷಣಗಳು ಕಾಣುತ್ತಿವೆ. ಖ್ಯಾತ ಶಿಕ್ಷಣ ತಜ್ಞ, ತನ್ನ ಸ್ವಂತ ಚತುರತೆ ಹಾಗೂ ಖರ್ಚಿನಿಂದ ಪಿಎಚ್‌ಡಿ ಸಂಪಾದಿಸಿದ್ದ ಧೀರ ಡಾ. ಬಿ.ಸಿ. ಮೈಲಾರಪ್ಪನ ಮೇಲೆ ಶಿಸ್ತುಕ್ರಮ ಜರುಗುವ ಸಾಧ್ಯತೆಗಳು ಕಾಣಿಸುತ್ತಿವೆ. ವಿವಿಯ ಸಿಂಡಿಕೇಟಿನ ಸದಸ್ಯರಾದ ಎ.ಪಿ. ರಂಗನಾಥ್, ಪೂರ್ಣಿಮ, ಆರ್. ಚೇತನಾ, ಡಾ. ಅಯ್ಯಪ್ಪ, ಪ್ರೊ. ಮಾದಯ್ಯ ಹಾಗೂ ಜಯಲಕ್ಷ್ಮೀದೇವಿರವರೆಲ್ಲಾ ಈಗ ಬೆಂ.ವಿ.ವಿ.ಯ ದೂರ ಶಿಕ್ಷಣ ಕೇಂದ್ರದ ನಿರ್ದೇಶಕ ಡಾ. ಮೈಲಾರಪ್ಪನ ವಿರುದ್ಧ ನೇರವಾಗಿ ಕುಲಪತಿ ಹಾಗೂ ರಾಜ್ಯಪಾಲ ಟಿ.ಎನ್. ಚತುರ್ವೇದಿಯವರಿಗೆ ಲಿಖಿತ ದೂರು ನೀಡಿ ಬಂದಿದ್ದಾರೆ. ಮೈಲಾರಪ್ಪನ ದುರಾಡಳಿತ, ವಿದೇಶಗಳಲ್ಲಿ ಸ್ಟಡಿ ಸೆಂಟರ್ ಸ್ಥಾಪಿಸುವಲ್ಲಿ ಕಂಡುಬಂದಿರುವ ಅರಾಜಕತೆ ಹಾಗೂ ವಿ.ವಿ. ನಿಯಮಾವಳಿಗಳನ್ನು ಉಲ್ಲಂಘಿಸಿರುವ ಬಗ್ಗೆ ರಾಶಿರಾಶಿ ದೂರು ಈಗ ರಾಜ್ಯಪಾಲರ ಟೇಬಲ್ ಮೇಲಿದೆ. ಚತುರ್ವೇದಿಯವರೇನಾದರೂ ಈಗ ಕಣ್ಣು ತೆರೆದರೋ ಅಲ್ಲಿಗೆ ಮೈಲಾರಪ್ಪನ ಒಂದು ದಶಕಕಾಲದ ಅಟ್ಟಹಾಸಕ್ಕೆ ತೆರೆ ಬಿತ್ತೂಂತಲೇ ಅರ್ಥ. ಅಷ್ಟೇ ಅಲ್ಲ, ಈ ದೂರ ಶಿಕ್ಷಣ ತಜ್ಞ ಬೆಂಗಳೂರು ವಿ.ವಿ.ಯಿಂದ ದೂರವಾದರೆ ವಿ.ವಿ.ಯ ಅನಾರೋಗ್ಯಕ್ಕೆ ಒಂದು ಮೇಜರ್ ಸರ್ಜರಿ ಆದಂತೆ ಎಂದು ಸಿಂಡಿಕೇಟ್ ಮೆಂಬರ್‌ಗಳು ಭಾವಿಸಿದ್ದಾರೆ. ಸರ್ಜನ್ ಚತುರ್ವೇದಿಯ ತೀರ್ಮಾನ ಏನೆಂಬುದು ಗೊತ್ತಾಗುವುದೂ ಹತ್ತಿರದಲ್ಲೇ ಇದೆ.

ಮೈಲಾರಿಯ ರೈಲು

ಈ ಮೈಲಾರಪ್ಪ ದೂರ ಶಿಕ್ಷಣ ಕೇಂದ್ರದ ನಿರ್ದೇಶಕನಾಗಿ ಬಂದ ಹೊಸತರಲ್ಲೇ 2005-06 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಬೆಂಗಳೂರು ವಿ.ವಿ. ವತಿಯಿಂದ ಭಾರತ ಹಾಗೂ ಇನ್ನಿತರ ದಕ್ಷಿಣ ಏಷ್ಯಾ ದೇಶಗಳಲ್ಲಿ 27 ಸ್ಟಡಿ ಸೆಂಟರ್‌ಗಳನ್ನು ಸ್ಥಾಪಿಸುವ ಕೆಲಸಕ್ಕೆ ಚಾಲನೆ ನೀಡಲಾಗಿತ್ತು. ಇದೊಂದು ರೀತಿ ಪಾಲುದಾರಿಕೆ ವ್ಯವಹಾರವಿದ್ದಂತೆ. ಬೇರೆಲ್ಲೋ ಇರುವ ವಿದ್ಯಾಕಾಂಕ್ಷಿಗಳು ಬೆಂಗಳೂರು ವಿ.ವಿ.ಯ ದೂರ ಶಿಕ್ಷಣ ಕೋರ್ಸ್‌ಗೆ ಸೇರಿ ನಂತರ ತಮಗೆ ಹತ್ತಿರದ ಸ್ಟಡಿ ಸೆಂಟರಿನಲ್ಲೇ ಪರೀಕ್ಷೆ ಬರೆದು ಡಿಗ್ರಿ ಪಡೆದುಕೊಳ್ಳುವಂಥ ವ್ಯವಸ್ಥೆ ಇದು. ಕೊನೆಗೆ ಉಪಸಮಿತಿ ಶಿಫಾರಸ್ಸಿನಂತೆ ಅಳೆದುಸುರಿದೂ 21 ಸೆಂಟರ್‌ಗಳಿಗೆ ಅದೇ ಸಾಲಿನಲ್ಲೇ ಅನುಮತಿಯೂ ಸಿಕ್ಕಿತ್ತು. ದುಬೈ, ಮಸ್ಕತ್‌ಗಳಲ್ಲೂ ಯಾರ್‍ಯಾರೋ ಉದ್ಭವ ಪುರುಷರು ಬೆಂ.ವಿ.ವಿ. ಶಾಖೆಯ ಅಂಗಡಿ ತೆರೆದು ಶಿಕ್ಷಣ ವ್ಯಾಪಾರಕ್ಕೆ ತಯಾರಾದರು. ಆದರೆ ಕರ್ನಾಟಕದ 5 ಸ್ಥಳಗಳಲ್ಲಿ ಹಾಗೂ ಶ್ರೀಲಂಕಾದ ಕೊಲಂಬೋನಲ್ಲಿ ಸ್ಟಡಿ ಸೆಂಟರ್ ಸ್ಥಾಪನೆಗೆ ಸಿಂಡಿಕೇಟ್ ಒಪ್ಪಿರಲಿಲ್ಲ. ಅಲ್ಲೆಲ್ಲಾ ಮೂಲಭೂತ ಸೌಕರ್ಯ, ಸೆಂಟರ್ ನಡೆಸುವವರ ಅರ್ಹತೆಗಳು ದೃಢಪಟ್ಟಿರದಿದ್ದ ಕಾರಣ ಅವನ್ನು ಪೆಂಡಿಂಗ್ ಇಡಲಾಗಿತ್ತು.


ಪ್ರೊ. ಮಾದಯ್ಯ


ಇಂಥ ಸಂದರ್ಭಗಳಲ್ಲಿ ಯಾವುದೇ ವಿ.ವಿ. ಬಹಳ ಎಚ್ಚರದಿಂದ ತನ್ನ ಪಾರ್ಟನರ್‌ಗಳನ್ನು ಆರಿಸಬೇಕಾಗುತ್ತದೆ. ಏಕೆಂದರೆ ಮುಂದೆ ಇವೇ ಸ್ಟಡಿ ಸೆಂಟರ್‌ಗಳೇ ಪರೀಕ್ಷಾ ಕೇಂದ್ರಗಳೂ ಆಗುತ್ತವೆ. ಅಕಸ್ಮಾತ್ ಯಾರಾದರೂ ಖದೀಮರ ಕೈಗೆ ಇಂಥ ಸೆಂಟರ್‌ಗಳು ಸಿಕ್ಕಿಬಿಟ್ಟರೆ ಮಾಸ್ ಕಾಪಿ, ಮಾರ್ಕ್ಸ್‌ಕಾರ್ಡ್ ಹಗರಣ, ಪಾಸು-ಫೇಲು ಡೀಲುಗಳೆಲ್ಲಾ ಶುರು ಆಗಬಹುದಲ್ಲ! ಇದೇ ಮೈಲಾರಪ್ಪನ ನೇತೃತ್ವದಲ್ಲಿ ಬೆಂಗಳೂರಿನ ಜೆ.ಸಿ. ರಸ್ತೆಯ ಪರೀಕ್ಷಾ ಕೇಂದ್ರದಲ್ಲಿ ಮಾಸ್ ಕಾಪಿ ನಡೆಯುತ್ತಿದ್ದುದನ್ನು ಇತ್ತೀಚೆಗೆ Tv 9 ನ ವರದಿಗಾರರು ಪತ್ತೆಹಚ್ಚಿದ್ದು ನಿಮಗೂ ಗೊತ್ತಿರಬಹುದು.

ಹೀಗೆ 2005-06 ರಲ್ಲಿ ಒಪ್ಪಿಗೆ ಸಿಕ್ಕಿರದಿದ್ದ ಒಟ್ಟು 6 ಸ್ಟಡಿ ಸೆಂಟರುಗಳ ಡೀಲ್ ಅನ್ನು ಈ ಬಾರಿ ಫೈನಲ್ ಮಾಡಲು ಡಾ. ಮೈಲಾರಪ್ಪನವರು ಸಜ್ಜಾದರು. ಕರ್ನಾಟಕದ 5 ಅರ್ಜಿದಾರರು ಹಾಗೂ ಕೊಲಂಬೋದ ಸೆಂಟರಿಗೂ ಹೋಗಿ ಬಂದಿದ್ದೇನೆ, ಅಲ್ಲಿ ಎಲ್ಲಾ ಸೌಲಭ್ಯಗಳಿವೆ ಈಗ ಅನುಮತಿ ನೀಡಬಹುದು ಎಂದೂ ಷರಾ ಬರೆದು ಬಿಟ್ಟರು ಮೈಲಾರಿ. ಆದರೆ ಈತ ರೈಲು ಬಿಡುತ್ತಿದ್ದಾನೆಯೇ ವಿನಃ ಕೊಲಂಬೊಗೆ ಹೋಗಿರಲಿಕ್ಕಿಲ್ಲ ಎಂಬ ಅನುಮಾನ ಸಿಂಡಿಕೇಟಿಗೆ ಬಂತು. ತಾರೀಖು 7.4.2007 ರಂದು ನಡೆದ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂತು, ನಂತರ ಮತ್ತೆ 2.5.2007, 9.6.2007 ರಲ್ಲೂ ಉಪಸಮಿತಿಯು ಕೊಲಂಬೋ ಭೇಟಿ ಬಗ್ಗೆ ವಿವರ ಕೇಳಲಾಯಿತಾದರೂ ಮೈಲಾರಪ್ಪನಾಗಲಿ ಅಥವಾ


ರಂಗನಾಥ್

ಉಪಸಮಿತಿಯ ಅಧ್ಯಕ್ಷ ಬಿಜೆಪಿ ಶಾಸಕ ಕೆ. ನರಹರಿಯಾಗಲೀ ಒಂದಕ್ಷರದ ಸಮಜಾಯಿಷಿಯನ್ನು ನೀಡಲಿಲ್ಲ. ಇದರರ್ಥ ಏನು ಎಂಬುದೇ ರಂಗನಾಥ್ ಮತ್ತಿತರ ಐದು ಸಿಂಡಿಕೇಟ್ ಸದಸ್ಯರ ಪ್ರಶ್ನೆ.


ಮೈಲಾರಪ್ಪನ ತಂಡ ಕೊಲಂಬೊಗೆ ಹೋಗಿದ್ದೇ ನಿಜವಾಗಿದ್ದರೆ ಅದಕ್ಕೆ ವಿವಿಯ ಅನುಮತಿ ಪಡೆಯಲಾಗಿದೆಯಾ? ಟ್ರಿಪ್ ಪ್ಲಾನ್, ಖರ್ಚುವೆಚ್ಚಗಳ ವಿವರ, ವೀಸಾ ವಿವರ, ಯಾವಾಗ ಪ್ರವಾಸ ಮಾಡಿ ಸ್ಥಳ ತನಿಖೆ ಮಾಡಿದ್ದಾರೆಂಬ ವಿವರ ಕೊಡಿ ಅಂತಾ ಕೇಳಿದರೆ ಮೈಲಾರಿ ಬಂಗಾರದ ಪಂಜರ ಪಿಚ್ಚರಿನ ಮೈಲಾರಿ ತರ 'ಬೆ ಬ್ಬೆ ಬ್ಬೆ' ಅನ್ನುತ್ತಿದ್ದೆಯೇ ವಿನಃ ಬೇರೆ ಮಾತಾಡುತ್ತಿಲ್ಲ. ಹಾಗಾಗಿ ಸಿಂಡಿಕೇಟಿನ 62 ನೇ ಮಾಸಿಕ ಸಭೆಯು ಮೈಲಾರಪ್ಪನಿಗೆ ಈಗ ಶೋಕಾಸ್ ನೋಟೀಸ್ ಕೊಟ್ಟಿದೆ. ತಮಾಷೆ ಏನೆಂದರೆ ಮೊನ್ನೆ ಮೀಡಿಯಾಗಳೆದುರು ಮೀಸೆ ತಿರುಗಿಸುವನಂತೆ ಪ್ರತಿಕ್ರಿಯೆ ನೀಡಿರುವ ಮೈಲಾರಪ್ಪ "ನನಗೆ ಯಾವುದೇ ಶೋಕಾಸ್ ನೋಟೀಸ್ ಬಂದಿಲ್ಲ, ಕಾರಣ ಕೇಳಿ ನೋಟೀಸ್ ಬಂದಿದ್ದೆ ಅಷ್ಟೆ" ಎಂದುಬಿಟ್ಟ. ಇನ್ನೂ ಮಜಾ ಏನೆಂದರೆ ವರದಿಗಾರನೊಬ್ಬ 'ನಿಮ್ಮ ವಿರುದ್ಧ ಆರೋಪಗಳ ಬಗ್ಗೆ ಎ.ಜೆ. ಸದಾಶಿವ ತನಿಖೆ ನಡೆಸುತ್ತಿದ್ದಾರಲ್ಲಾ?' ಅಂತಾ ಕೇಳಿದ್ದಕ್ಕೆ again ಶಿಕ್ಷಣ ತಜ್ಞರಾದ ಮೈ...ರವರು 'ಅದು ತನಿಖೆ ಅಲ್ಲ, ವಿಚಾರಣೆ ಅಷ್ಟೆ' ಎಂದು ಆ ದಡ್ಡ ಪತ್ರಕರ್ತನಿಗೆ ವಿವರಿಸಿ ತಮ್ಮ ಭಾಷಾ ಪ್ರೌಢಿಮೆ ತೋರಿಸಿದ್ದಾರೆ. ಈಗ ತನ್ನ ಮೇಲೆ ನಾನಾ ಆರೋಪಗಳು ಹಾರಾಡಲು ಶುರುವಾದೇಟಿಗೆ 'ದಲಿತನ ವಿರುದ್ಧ ಮೇಲ್ಜಾತಿಗಳ ಪಿತೂರಿ' ಎಂದು ಚೀರಿಕೊಳ್ಳುತ್ತಿದ್ದಾನೆ. ಜೊತೆಗೆ ಕರ್ನಾಟಕ ಮುಕ್ತ ವಿ.ವಿ. ಯ ವಿ.ಸಿ. ಆಗಬೇಕೆಂಬ ಇರಾದೆಯೂ ಈತನಿಗಿತ್ತು, ಈ ಗಲಾಟೆಯಿಂದ ಅವಕಾಶ ತಪ್ಪಿಬಿಡಬಹುದೆಂಬ ಆತಂಕ ಮೈಲಾರಿಯದು. ಮಸ್ತಿತಿ ಏನೆಂದರೆ ಮೈಲಾರಪ್ಪನವರ ಮೇಲಿರುವ ಆರೋಪಗಳು ಜಾತಿ ನೆಲೆಗೆ ಸಂಬಂಧಿಸಿದ್ದಲ್ಲ, ಬದಲಾಗಿ ವಿಶ್ವವಿದ್ಯಾನಿಲಯದ ನಿಯಮಗಳು, ವಿಧಿವಿಧಾನಗಳಿಗೆ ಮತ್ತದನ್ನು ಮೈಲಾರಪ್ಪ ಉಲ್ಲಂಘಿಸಿದ್ದಾನೆಂಬುದಕ್ಕೆ ಸಂಬಂಧಿಸಿದ್ದು. ವಿ.ವಿ. ಸಿಂಡಿಕೇಟ್‌ನ ಸೂಚನೆ ಇಲ್ಲದಿದ್ದಾಗಲೂ ಮೈಲಾರಪ್ಪ, ಕೆ. ನರಹರಿ ಹಾಗೂ ಚಂದ್ರಣ್ಣ ಈ ಮೂವರಿದ್ದ ಉಪಸಮಿತಿಯು ಕರ್ನಾಟಕದ 5 ಹಾಗೂ ಕೊಲಂಬೋದ ಒಂದು ಸ್ಟಡಿ ಸೆಂಟರ್‌ನ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಅನುಮೋದನೆ ನೀಡುವಂತೆ ಶಿಫಾರಸ್ಸು ಮಾಡಿರುವುದೇ ಒಂದು ನಿಯಮಬಾಹಿರ ಕ್ರಮವಾಗಿವೆ.


ಸೂಟ್ ಮೈಲಾರಿ

ವಿ.ವಿ. ಸಿಂಡಿಕೇಟ್ ಸಭೆ ಈ ಬಗ್ಗೆ ಸ್ಪಷ್ಟನೆ ನೀಡುವಂತೆ ನೋಟೀಸ್ ಕೊಟ್ಟಿರುವುದು ಸರಿಯಾಗೇ ಇದೆ.

'ಗವರ್ನರ್ ಯಾರಲೇ' ಅಂದ.

ಮೂಲತಃ ಕೋಲಾರದ ಮಾಲೂರಿನವನಾದ ಮೈಲಾರಪ್ಪ ಈಗ್ಗೆ 20 ವರ್ಷಗಳ ಹಿಂದೆ ಬೆಂಗಳೂರು ವಿ.ವಿ.ಗೆ ರಿಸರ್ಚ್ ಅಸಿಸ್ಟೆಂಟಾಗಿ ಬಂದು ಸೇರಿಕೊಂಡಿದ್ದ. ಆಮೇಲೆ ಈತ ಡಾ. ಮೈಲಾರಪ್ಪ ಆಗಲು ಹೋಗಿ ತನ್ನ Phd ಥೀಸಿಸ್ ಅನ್ನೇ ಹೋಲ್‌ಸೇಲಾಗಿ ಬೇರೊಬ್ಬರ ಪುಸ್ತಕದಿಂದ ಕದ್ದಿದ್ದನೆಂಬ ವಿಚಾರ ಗುಲ್ಲಾಯಿತು. ಆ ಬಗ್ಗೆ ಒಂದು ತನಿಖೆಯೂ ಆಗಿ ಆರೋಪ ಸುಳ್ಳು ಎಂದು ತಿಪ್ಪೆ ಸಾರಿಸಲಾಯಿತು. ಆಗ ಮಾಜಿ ಸಂಸದ ಡಾ. ವೆಂಕಟಗಿರಿಗೌಡರು ರಾಜ್ಯಪಾಲರಿಗೆ ಮೈಲುದ್ದದ ದೂರು ನೀಡಿದ್ದರಾದರೂ ಮೈ..... ಬಚಾವಾಯಿತು. ಆಮೇಲೆ ವಿ.ವಿ.ಯ ಸೋಷಿಯಾಲಜಿ ವಿಭಾಗದಲ್ಲಿ ಅವಧಿಗೆ ಮೊದಲೇ ಪ್ರೊಫೆಸರ್‍ಆಗಿ ಪ್ರಮೋಷನ್ ಪಡೆದ ಮೈಲಾರಪ್ಪ ಆಗಿನ ವಿಸಿ ತಿಮ್ಮಪ್ಪನಿಗೆ ಏನೋ ಮೋಡಿ ಹಾಕಿ ದೂರ ಶಿಕ್ಷಣ ವಿಭಾಗದ ಡೈರೆಕ್ಟರ್ ಆಗಿಬಿಟ್ಟ. ಅದಕ್ಕೂ ಮುನ್ನ ಪಟ್ಟಣಗೆರೆ ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿಯಾಗಿ ಬಂದು ಅಲ್ಲಿ ಹಗರಣಗಳಾಗಿ, ನಿಲ್ಲಲಾಗದೆ ವಿ.ವಿ.ಗೆ ವಾಪಸ್ ಹೋಗಿದ್ದ.


ಪ್ರೊ. ಅಯ್ಯಪ್ಪ

ಹಾಗೆ ಮತ್ತೆ ವಿವಿಗೆ ಬಂದು ದೂರ ಶಿಕ್ಷಣ ನಿರ್ದೇಶಕನಾದ ಮೇಲೆ ಮೈಲಾರಪ್ಪನ ಆರ್ಭಟ ಜಾಸ್ತಿಯಾಗಿ ಹೋಯಿತು. ಹೀಗೆ ಒಮ್ಮೆ ಏನೇನೊ ಮಾತಾಡುತ್ತಾ "ಆ ಗವರ್ನರ್ ಯಾವನ್ರಿ ನನ್ ಕೇಳೋಕೆ" ಎಂತಲೂ ಉದ್ಧಟತನದ ಮಾತಾಡಿಬಿಟ್ಟಿದ್ದ ಅವೆಲ್ಲಾ ಟಿವಿ/ಪತ್ರಿಕೆಗಳಲ್ಲೂ ಬಂತು. ತಕ್ಷಣ ಹುಷಾರಾದ ಮೈ.... ನಾನು ಹಾಗಂದೇ ಇಲ್ಲ ಎಂದ. ತೀರಾ ಮೊನ್ನೆ ನಗರದ ಜೆ.ಸಿ. ರಸ್ತೆಯ ಪರೀಕ್ಷಾ ಕೇಂದ್ರದಲ್ಲಿ ಮಾಸ್ ಕಾಪಿ ನಡೆಯುತ್ತಿದ್ದದ್ದನ್ನು Tv ಚಾನಲ್ 9 ತೋರಿಸಿತು. ಇವೆಲ್ಲಾ ಮೈಲಾರಪ್ಪನವರ ಕೃಪೆ ವಿವಿಯ ಪರೀಕ್ಷಾ ಪ್ರಕ್ರಿಯೆ, ತನಿಖಾ ಸ್ಕ್ವಾಡ್ ಹಾಗೂ ಮೌಲ್ಯಮಾಪನಗಳಲ್ಲೂ ತಲೆಹಾಕುವ ಮೈಲಾರಪ್ಪ ಕೆಲ ಬಾರಿ ಟೆಂಪರರಿ ಮೇಷ್ಟ್ರುಗಳನ್ನು ಇಂತಹ ಕೆಲಸಕ್ಕೆ ಹಚ್ಚಿ ನಿಯಮಗಳನ್ನು ಉಲ್ಲಂಘಿಸಿದ್ದಾನೆ.


ಲಲಿತಾ

ರಂಗನಾಥ್ ಹಾಗೂ ಇನ್ನಿತರ ಸಿಂಡಿಕೇಟ್ ಸದಸ್ಯರು ಈಗ ಕೇಳುತ್ತಿರುವ ಪ್ರಶ್ನೆಗೆ ಗಹನತೆ ಇದೆ. ರಾಜ್ಯಪಾಲ ಚತುರ್ವೇದಿಯವರು ಈಗಲಾದರೂ ಎಚ್ಚರಗೊಳ್ಳಬೇಕಷ್ಟೇ.

–ಈಶ

ಮೈಲಾರಪ್ಪನ ಆಸ್ತಿ ಎಷ್ಟು ಕೋಟಿ?

ಈ ಮೈಲಾರಪ್ಪ ದಮನಿತ ವರ್ಗಗಳ ಹಿನ್ನೆಲೆಯಿಂದ ಬಂದಿರುವ ವ್ಯಕ್ತಿ, ಅಂತವರು ಮೇಲುಜಾತಿಗಳ ಕೆಲವರು ಮಾಡುವಂತೆ ಪಾಳೇಗಾರಿಕೆ, ದರ್ಪ, ಅಹಂಗಳಿಂದ ಹೊರತಾದ ಸರಳತೆ, ಸಜ್ಜನಿಕೆಯ ವ್ಯಕ್ತಿತ್ವ ರೂಪಿಸಿಕೊಂಡಿದ್ದರೆ ಚೆನ್ನಾಗಿತ್ತು, ಆದರೆ ಈತನ ಅಧಿಕಾರ ಬಲ ಜಾಸ್ತಿಯಾದಷ್ಟೂ ಅಹಂ ಹಾಗೂ ದರ್ಪ ಬೆಳೆಯಿತೇ ವಿನಃ ಪ್ರಬುದ್ಧತೆ, ವಿನಯ ಬೆಳೆಯಲಿಲ್ಲ. ನೀವು ನಂಬುತ್ತೀರೋ ಇಲ್ಲವೋ ಸೆಂಟ್ರಲ್ ಕಾಲೇಜ್ ಕ್ಯಾಂಪಸ್ಸಿಗೆ ನೀವೊಮ್ಮೆ ಹೋಗಿ ನೋಡಿ. ಅಲ್ಲಿರುವ ಮೈಲಾರಪ್ಪನ ಆಫೀಸ್‌ಗೆ ಕಾಲಿಡುವ ಮುನ್ನ ಪ್ರತಿಯೊಬ್ಬರು ಚಪ್ಪಲಿ ಹೊರಗೆ ಬಿಟ್ಟೇ ಒಳಹೋಗಬೇಕು. ದಲಿತ ವಿದ್ಯಾರ್ಥಿಗಳಂತೂ ಇದನ್ನು ತೀರಾ ಭಯ ಭಕ್ತಿಯಿಂದ ಆಚರಿಸುತ್ತಿದ್ದಾರೆ.

ವಿಷು ಈ ಮೈಲಾರಪ್ಪ ತನ್ನನ್ನು ತಾನೇ ದೇವರೂಂತ ನಂಬಿಕೊಂಡಿದ್ದಾನಾ ಅಂತ!

ಮೈಲಾರಪ್ಪನಿಗೆ ನಾಗಶೆಟ್ಟಿಹಳ್ಳಿಯಲ್ಲಿ ಕೋಟಿ ರೂಪಾಯಿ ಬೆಲೆ ಬಾಳುವಂತಹ ಭಾರಿ ಮನೆ ಇದೆ. ಇನ್ನು ಹಲವು ಕೋಟಿಗೆ ತೂಗುವಂತಹ ಆಸ್ತಿ ವ್ಯವಹಾರಗಳೂ ಇವೆ ಎನ್ನಲಾಗುತ್ತಿದೆ. ಇವೆಲ್ಲಾ ಎಲ್ಲಿಂದ ಹೇಗೆ ಬಂತೆಂಬ ಬಗ್ಗೆ ಈಗಲಾದರೂ ತನಿಖೆಯಾಗಬೇಕಿದೆ.

ಬೆಂಗಳೂರು ವಿ.ವಿ. ವೈರಸ್‌ಗಳು

ಪಾಠ ಮಾಡದೆ ಬರೀ ಓತ್ಲಾ ಹೊಡಕಂಡು ತಿರುಗುತ್ತಾ ಸಂಬಳ ಎಣಿಸಿಕೊಳ್ಳುವವರು, ಪರೀಕ್ಷೆ, ಮಾರ್ಕ್ಸ್‌ಕಾರ್ಡುಗಳ, ಡೀಲು ಕುದುರಿಸುವವರು, ಜಾತಿ ಲಾಬಿ, ಹುದ್ದೆಗಾಗಿ ಲಾಬಿ ಮಾಡುವ ವೀರರು ಇಂತಹ ಗಂಟುಕಳ್ಳರೆಲ್ಲಾ ಸೇರಿಕೊಂಡಿರುವ ಸಂತೆಯಾಗಿರುವ ಬೆಂಗಳೂರು ವಿ.ವಿ.ಗೆ ಇವತ್ತಿನ ಶೈಕ್ಷಣಿಕ ಮಾರ್ಕೆಟ್‌ನಲ್ಲಿ ಬೆಲೆ ಇಲ್ಲ. ಗಂಭೀರ ವಿದ್ಯಾರ್ಥಿಯೊಬ್ಬರು ಉನ್ನತ ಅಧ್ಯಯನಕ್ಕಾಗಿ ಇಲ್ಲಿಗೆ ಬರಲು ಇಷ್ಟಪಡುವುದಿಲ್ಲ. ಬೆಂಗಳೂರು ವಿವಿಯ ಡಿಗ್ರಿ ಹಾಗೂ ಮಾಸ್ಟರ್ ಡಿಗ್ರಿಗಳಿಗೆ ಬೆಲೆ ಕೊಂಚ ಕಮ್ಮಿಯೆ. ಇಲ್ಲಿನ ಆಡಳಿತ ಎಷ್ಟು ಅಧ್ವಾನವಾಗಿದೆಯೆಂದರೆ ಸಂಜಯ ವೀರಸಿಂಗ್ ಎಂಬ ಐಪಿಎಸ್ ಅಂದರೆ ಪೊಲೀಸ್ ಆಫೀಸರ್ ಕೆಲಕಾಲ ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜಿನ (UVCE) ಪ್ರಿನ್ಸಿಪಾಲನಾಗಿದ್ದ. ಆ ಹುದ್ದೆಯಲ್ಲಿರಲು ಸಂಜಯ್‌ಗೆ ಯಾವ ಅರ್ಹತೆಗಳೂ ಇರಲಿಲ್ಲ. ಕೊನೆಗೆ ಈಗ ಡಾ. ವೇಣುಗೋಪಾಲ್ ಆ ಜಾಗಕ್ಕೆ ಬಂದಿದ್ದಾರೆ. TAPQ ನಿಂದ UVCE ಗೆ ಬಂದಿರುವ 17 ಕೋಟಿ ರೂಪಾಯಿ ಅನುದಾನದ ಮೇಲೆ ಕಣ್ಣುಹಾಕಿದ ಕೆಲ ಘಡವಗಳಿಗೆ ಪ್ರಿನ್ಸಿಪಾಲ್ ಕುರ್ಚಿಯ ಮಹತ್ವ ಗೊತ್ತಾಗಿತ್ತೆಂದು ಕಾಣುತ್ತದೆ. ಇದೇ ಮೈಲಾರಪ್ಪ ದೂರ ಶಿಕ್ಷಣ ಕೇಂದ್ರಕ್ಕೆಂದು ಕಂಪ್ಯೂಟರ್ ಖರೀದಿಸಲು 14 ಲಕ್ಷ ರೂ. ಪಡೆದು ಇನ್ನೂ ಪೂರ್ತಿ ಲೆಕ್ಕ ಕೊಟ್ಟಿಲ್ಲ.

ಇನ್ನು ಬೋಧನೆ ವಿಷಯಕ್ಕೆ ಬಂದರೆ ಅದೊಂದು ಅಧ್ವಾನಗಳ ಆಗರವೇ ಸೈ.

ಎಕನಾಮಿಕ್ಸ್ ವಿಭಾಗದಲ್ಲಿ ಅಸಲಿಗೆ ತರಗತಿಗಳೇ ನಡೆಯುತ್ತಿಲ್ಲ, ಎಚ್‌ಓಡಿ ರಂಗಸ್ವಾಮಿ ಆ ಬಗ್ಗೆ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಇನ್ನು ಸೋಷಿಯಾಲಜಿಯಲ್ಲಂತೂ ನಿತ್ಯ ಕದನ, ಪಿತೂರಿಗಳದ್ದೇ ಕಾರುಬಾರು, ಅಲ್ಲಿರುವ 'ಕರ್ನಾಟಕದ ಮಾಯಾವತಿ ನಾನೇ' ಎಂದು ಭ್ರಮಿಸಿಕೊಂಡಿರುವ ಒಬ್ಬರು, ನಿರಾಸಕ್ತರೊಬ್ಬರು, ಇನ್ನೇನು ನಿವೃತ್ತರಾಗಲಿರುವವರು ಹೀಗೆ ಎಲ್ಲಾ ಸೇರಿ ಇಡೀ ವಿಭಾಗವೇ ಬೋಧನಾ ಸ್ಫೂರ್ತಿ ಕಳೆದುಕೊಂಡಿದೆ.

ಪಿ.ಜಿ. ಸೆಂಟರುಗಳದ್ದೂ ಇದೇ ಗೋಳು. ಕೋಲಾರದ ಪಿ.ಜಿ. ಸೆಂಟರ್‌ನಲ್ಲಿ ನಂಜೇಗೌಡನೆಂಬಾತ ಕೋ ಆರ್ಡಿನೇಟರ್ ಆಗಿ ಹಾಸ್ಟೆಲ್ ಮತ್ತಿತರ ವ್ಯವಹಾರದಲ್ಲಿ ಗುಳುಂ ವಿದ್ಯಾ ಪಾರಂಗತನಾಗಿ ಬಿಟ್ಟಿದ್ದಾನೆ.

ಇವರ್‍ಯಾರಿಗೂ ಹೇಳುವವರು, ಕೇಳುವವರು ಯಾರೂ ಇದ್ದಂತಿಲ್ಲ. ಇಲ್ಲವೂ ಇಲ್ಲ ಬಿಡಿ.


ಇನ್ನು ವಿವಿಯ ವಿದ್ಯಾರ್ಥಿಗಳ ಬಗ್ಗೆ ಹೇಳಬೇಕೆಂದರೆ ಇವರಂತಹ ಹೇತ್ಲಾಂಡಿಗಳು ಬೇರೆಲ್ಲೂ ಇದ್ದಂತಿಲ್ಲ. ಪಾಠ ನಡೆಯಲಿ ನಡೆಯದಿರಲಿ, ಪರೀಕ್ಷಾ ಅಕ್ರಮಗಳೇ ಜರುಗಲಿ, ಭ್ರಷ್ಟಾಚಾರ ಕಂಡುಬರಲಿ... ಊಹುಂ ಯಾವುದೂ ಇವರ ಮನಸ್ಸಿಗೆ ತಾಗುವುದಿಲ್ಲ. ಇನ್ನು ರಾಜಕೀಯ ಸಿದ್ಧಾಂತ, ತತ್ವ, ಸಾಮಾಜಿಕ ಹೋರಾಟಗಳ ಮಾತಂತೂ ದೂರವೇ ಉಳಿಯಿತು ಬಿಡಿ.

ನನ್ನ ಎರಡು ಹೆಂಡತಿಯರೂ ನನಗೆ ದುರಾದೃಷ್ಟ ತಂದರು. ಮೊದಲನೆಯವಳು ನನ್ನನ್ನು ತೊರೆದರೆ, ಎರಡನೆಯವಳು ನನ್ನೊಂದಿಗೇ ಇದ್ದಳು-ಪ್ಯಾಟ್ರಿಕ್ ಮುರ್ರೆ

ರಜನಿಗೆ ಇಂಗ್ಲಿಷ್ ಹುಡುಗಿಯ ಬಿಳಿ ಚರ್ಮ!







ಸಾವಂತ್ರಿ

'ಶಿವಾಜಿ'ಗೆ ಕನ್ನಡದ 3.5 ಕೋಟಿ ರೂ!

ಇತ್ತೀಚೆಗೆ ಕನ್ನಡ ಚಿತ್ರರಂಗದಲ್ಲಿ ಯಶಸ್ಸು ಕಂಡ 'ಮುಂಗಾರು ಮಳೆ' ಮತ್ತು 'ದುನಿಯಾ' ಚಿತ್ರಗಳ ವಿತರಣಾ ಹಕ್ಕುಗಳನ್ನು ಕೊಂಡುಕೊಳ್ಳಲು ಯಾವ ಕನ್ನಡಿಗನೂ ಮುಂದೆ ಬಂದಿರಲಿಲ್ಲ. ಕೊನೆಗೆ ಆ ಚಿತ್ರಗಳ ನಿರ್ಮಾಪಕರೇ ಗಟ್ಟಿ ಮನಸ್ಸು ಮಾಡಿ ತಮ್ಮ ಚಿತ್ರಗಳು ಬಿಡುಗಡೆ ಕಾಣುವಂತೆ ಮಾಡಿದ್ದರು. ಹಾಗೆ ಮಾಡಿದ್ದರಿಂದ ದೊಡ್ಡ ಲಾಭವನ್ನೂ ಕಂಡರು, ಬಿಡಿ.

ಇದನ್ನು ಯಾಕೆ ಇಲ್ಲಿ ಹೇಳಲಾಗಿದೆ ಎಂದರೆ ತಮಿಳು ಸಿನಿಮಾ 'ಶಿವಾಜಿ'ಯ ವಿತರಣಾ ಹಕ್ಕುಗಳನ್ನು ಪಡೆಯಲು ಗಾಂಧಿನಗರದ ಜನ ಮಾತ್ರವಲ್ಲ, ಇತರೆ ರಂಗಗಳ ಘಟಾನು ಘಟಿಗಳೆಲ್ಲ ತಾಮುಂದು, ನಾಮುಂದು ಎಂದೇ ಪೈಪೋಟಿ ನಡೆಸಿದ್ದರು. ಅವರಲ್ಲಿ ರಿಯಲ್ ಎಸ್ಟೇಟ್ ಕುಳಗಳು, ಸಾರಾಯಿ ಕಿಂಗ್‌ಗಳು, ದೋನಂಬರ್‌ನ ದಗಲಬಾಜಿಗಳೂ ಇದ್ದರು.

ಹೀಗೆ ಪೈಪೋಟಿ ನಡೆಸಿದವರಲ್ಲಿ, ತಾನ್ನೋರ್ವ ಕನ್ನಡ ಕುವರನೆಂದು ಪೋಸು ಕೊಡುತ್ತಲೇ ಬೇರೆ ಭಾಷೆಗಳ ಚಿತ್ರಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸುವ ಪ್ರವೀಣ ಎಸ್. ನಾರಾಯಣ್ ಪ್ರಮುಖ. ಹೇಳಿಕೇಳಿ ಈತ ಗಳಿಸಿರುವ ಖ್ಯಾತಿ ರೀಮೇಕ್‌ಗಳಿಂದ, ಪಡೆದಿರುವ ಹಣ ಪರಭಾಷಾ ಚಿತ್ರಗಳ ವಿತರಣಾ ಹಕ್ಕುಗಳಿಂದ! ಇನ್ನು ಈತನಿಂದ ಇನ್ನೇನನ್ನು ನಿರೀಕ್ಷಿಸಲಾಗುತ್ತದೆ ಹೇಳಿ? ನಾರಾಯಣನ ಜೊತೆಗೆ ಪೈಪೋಟಿ ನಡೆಸಿದವರೆಂದರೆ ನಿರ್ಮಾಪಕರುಗಳಾದ ರಾಕ್‌ಲೈನ್ ವೆಂಕಟೇಶ್, ಎಸ್.ಎ. ಗೋವಿಂದರಾಜು, 'ವಿಷ್ಣು ಸೇನಾ'ದ ಗೋವಿಂದು ಮತ್ತು ಇತರರು.

ಈ ಮಧ್ಯೆ ರಜನಿಕಾಂತ್‌ರವರ ಆಪ್ತಮಿತ್ರ, ಮಂಡ್ಯದ ಗಂಡು ಅಂಬರೀಷ್‌ಗೆ ಇದರ ಹಕ್ಕುಗಳು ಸಿಗಬಹುದು ಎಂಬ ಮಾತು ಒಂದು ಕಡೆಯಿಂದ ಕೇಳಿಬಂದಿದ್ದರೆ, ಒಂದಾನೊಂದು ಕಾಲದಲ್ಲಿ ರಜನಿ ಜೊತೆ ನಟಿಸಿದ್ದ ಲೀಲಾವತಿಯವರಿಗೇ ಸಿಗುತ್ತದೆ ಎಂಬ ಸುದ್ದಿ ಮತ್ತೊಂದು ಕಡೆಯಿಂದಲೂ ಕೇಳಿಬಂದಿತ್ತು.



ಆದರೆ ಯಾವ ಸದ್ದುಗದ್ದಲವಿಲ್ಲದೆ, "ನಾನೂ ಒಂದು ಕೈ ನೋಡಿದರಾಯಿತು" ಎಂದು ಪ್ರಯತ್ನಿಸಿದವರು ಲಿಕ್ಕರ್ ಧಣಿ ಹರಿಖೋಡೆ. ಅದಕ್ಕೆ ಅವರು ದಾಳವಾಗಿ ಉಪಯೋಗಿಸಿದ್ದು ಏನನ್ನು ಗೊತ್ತೇ? ರಜನಿಕಾಂತ್ ಅಲಿಯಾಸ್ ಶಿವಾಜಿರಾವ್ ಗಾಯಕ್ವಾಡ್ ಹೇಗೆ ಮರಾಠಿ ಮೂಲದವರೋ, ಹಾಗೆಯೇ ಖೋಡೆಗಳೂ ಕೂಡಾ ಮರಾಠಿಗರೇ! ಆದರೆ ಎಸ್‌ಎಸ್‌ಕೆ ಸಂಘಟನೆಯ ಕಾರ್ಯದರ್ಶಿಯೂ ಆಗಿರುವ ಖೋಡೆಗೆ ಲಾಟರಿ ಹೊಡೆಯಲಿಲ್ಲ, ಅಷ್ಟೇ!

ಕೊನೆಗೂ 'ಶಿವಾಜಿ'ಯ ಕರ್ನಾಟಕದ ಹಕ್ಕುಗಳನ್ನು ಪಡೆಯುವಲ್ಲಿ ಯಶಸ್ವಿಯಾದವರು ಗಂಗರಾಜು. ಇವರು ಮೊದಲಿನಿಂದಲೂ ರಜನಿಕಾಂತರ ಎಲ್ಲ ಸಿನಿಮಾಗಳನ್ನು ವಿತರಿಸುತ್ತಾ ಬಂದಿರುವವರು. ಅಷ್ಟೇ ಅಲ್ಲ, ರಜನಿಕಾಂತರ 'ಬಾಬಾ' ಸಿನಿಮಾ ತೋಪೆದ್ದಾಗ, ನಷ್ಟ ಅನುಭವಿಸಿದವರೂ ಕೂಡ. ಆದರೆ ಆಗ ರಜನಿಕಾಂತರೇ ಗಂಗರಾಜುಗೆ ಅರವತ್ತು ಲಕ್ಷ ರೂಪಾಯಿಗಳನ್ನು ನೀಡಿ ನಷ್ಟವನ್ನು ಭರಿಸಿದ್ದರಲ್ಲದೆ, ಅನಂತರ ಬಿಡುಗಡೆಯಾದ 'ಚಂದ್ರಮುಖಿ' ಚಿತ್ರದ ಹಕ್ಕುಗಳನ್ನು ನೀಡಿ ಲಾಭ ತರಿಸಿದ್ದರು.

ಈಗ 'ಶಿವಾಜಿ'ಯ ಕರ್ನಾಟಕದ ಹಕ್ಕುಗಳನ್ನು ಬರೋಬ್ಬರಿ ಮೂರೂವರೆ ಕೋಟಿಗಳಿಗೆ ಗಂಗರಾಜು ಖರೀದಿಸಿದ್ದಾರಾದರೂ, ಅವರು ಅದಕ್ಕಿಂತಲೂ ಹೆಚ್ಚು ಲಾಭ ಕಾಣುವುದು ಗ್ಯಾರಂಟಿಯಾಗಿದೆ!





ರಜನಿ ಬಿಳಿ ಆಗಿದ್ದು ಹೇಗೆ?

ಸೂಪರ್ ಸ್ಟಾರ್ ರಜನಿಕಾಂತ್‌ರವರ ಮೈಬಣ್ಣ ಕಪ್ಪು ಎಂಬುದು ಎಲ್ಲರಿಗೂ ಗೊತ್ತು. ಆದರೆ ಅವರು 'ಶಿವಾಜಿ' ಚಿತ್ರದ ಒಂದು ಹಾಡಲ್ಲಿ ಬೆಳ್ಳಗೆ ಕಾಣಿಸುವುದರ ಹಿಂದಿನ ಮರ್ಮವೇನು?

ಇಂಥದ್ದೊಂದು ಕುತೂಹಲಕರ ಪ್ರಶ್ನೆಗೆ ಕೆಲವರು ಮೇಕಪ್ ಪ್ರಭಾವ ಎಂದು ಲೆಕ್ಕ ಹಾಕಿದರೆ, ಇನ್ನೂ ಹಲವರು "ರಜನಿ ಮುಖಕ್ಕೆ ಅದೇನೋ ಟ್ರೀಟ್‌ಮೆಂಟ್ ಕೊಡಿಸಿ ಬೆಳ್ಳಗಾಗಿಸಿದ್ದಾರಂತೆ" ಎಂದೆಲ್ಲ ಊಹಿಸಿದರು.

ಆದರೆ ವಾಸ್ತವ ಬೇರೆಯದೇ ಆಗಿತ್ತು.

ಜನರ ಇಂತಹ ಊಹಾಪೋಹ ಚರ್ಚೆಗಳಿಗೆ ತೆರೆ ಎಳೆಯಲೆಂದೇ ಮೊನ್ನೆ 'ಶಿವಾಜಿ' ಚಿತ್ರದ ನಿರ್ದೇಶಕ ಶಂಕರ್ ಮತ್ತು ಛಾಯಾಗ್ರಾಹಕ ಕೆ.ವಿ. ಆನಂದ್ ಉತ್ತರ ನೀಡಿದರು. ಅವರು ಹೇಳಿದ್ದೇನೆಂದರೆ, ಆ ಹಾಡಿನಲ್ಲಿ ರಜನಿಕಾಂತರನ್ನು 'ವೆಳ್ಳೈ ತಮಿಳನ್' (ವಿದೇಶಿ ತಮಿಳಿಗ)ನಂತೆ ಕಾಣಿಸಲು ಒಂದು ವರ್ಷ ಶ್ರಮ ಪಡಬೇಕಾಯಿತಂತೆ.

ಕಳೆದ ವರ್ಷ ಮೇ ತಿಂಗಳಲ್ಲೇ ಈ ಹಾಡಿನ ಚಿತ್ರೀಕರಣವನ್ನು ಸ್ಪೇನ್ ದೇಶದಲ್ಲಿ ಮಾಡಲಾಯಿತು. ಅದಕ್ಕೂ ಮುನ್ನವೇ ಆ ಹಾಡಿನಲ್ಲಿ ರಜನಿಕಾಂತರನ್ನು ಬೆಳ್ಳಗೆ ಕಾಣಿಸುವ ಜವಾಬ್ದಾರಿಯನ್ನು 'ಇಂಡಿಯನ್ ಆರ್ಟ್ಸ್' ಎಂಬ ಸಂಸ್ಥೆಗೆ ನೀಡಲಾಗಿತ್ತು. ಇದರ ಚಿತ್ರೀಕರಣದ ಮುನ್ನವೇ 'ಚಂದ್ರಮುಖಿ' ಚಿತ್ರದ ದೃಶ್ಯಗಳನ್ನು ಅಭ್ಯಸಿಸಿದ್ದ ಇಂಡಿಯನ್ ಆರ್ಟ್ಸ್ ಸಂಸ್ಥೆಯ ತಜ್ಞರು ರಜನಿಕಾಂತ್ ಹೊರಾಂಗಣ ಮತ್ತು ಒಳಾಂಗಣ ದೃಶ್ಯಗಳಲ್ಲಿ ಹೇಗೆ ಕಾಣಿಸುತ್ತಾರೆಂದು ಕಂಪ್ಯೂಟರ್‌ನಲ್ಲಿ ಸೆರೆ ಹಿಡಿದಿದ್ದರು!

ಆಗ ಅವರು 'ಶಿವಾಜಿ' ನಿರ್ದೇಶಕ ಶಂಕರ್‌ಗೆ ಒಂದು ಸಲಹೆಯನ್ನು ನೀಡಿದರು. ಅದೇನೆಂದರೆ 'ಶಿವಾಜಿ'ಯ ಈ ಒಂದು ಹಾಡಿಗೆ ರಜನಿ ನೃತ್ಯ ಮಾಡುವಂತೆಯೇ, ಅವರ ಜಾಗದಲ್ಲಿ ಅವರಂತೆಯೇ ಬಿಳಿ ಚರ್ಮದ ಹುಡುಗಿಯೊಬ್ಬಳು ನೃತ್ಯ ಮಾಡುವುದನ್ನು ಚಿತ್ರೀಕರಿಸಬೇಕೆಂಬುದು.

ಅದಕ್ಕೆಂದು ಇಂಗ್ಲೆಂಡಿನಿಂದ ಚಿತ್ರೀಕರಣದಲ್ಲಿ ಭಾಗವಹಿಸಲು ಬಂದಿದ್ದ ಓರ್ವ ನೃತ್ಯಗಾರ್ತಿಯನ್ನು ಆಯ್ಕೆ ಮಾಡಲಾಯಿತು. ಆನಂತರ ರಜನಿ ಮತ್ತು ರಜನಿಯಂತೆಯೇ ಡ್ಯಾನ್ಸ್ ಮಾಡಿದ್ದ ಆ ಬಿಳಿ ಹುಡುಗಿಯ ದೃಶ್ಯಗಳನ್ನು ಚೆನ್ನೈಗೆ ರವಾನಿಸಿದರು. 'ಕಂಪ್ಯೂಟರ್ ಜೆನೆರೇಟೆಡ್ ಇಮೇಜರಿ' ಎಂಬ ತಂತ್ರಜ್ಞಾನವನ್ನು ಬಳಸಿದ ಇಂಡಿಯನ್ ಆರ್ಟ್ಸ್‌ರವರು ಆಕೆಯ ಬಿಳಿಯ ಮೈ ಚರ್ಮವನ್ನು ಇಂಚಿಂಚಾಗಿ ರಜನಿ ದೇಹಕ್ಕೆ ಕಂಪ್ಯೂಟರ್‌ನಲ್ಲಿ ಅಳವಡಿಸಿದರು.

ಅಂದಹಾಗೆ, ಆ ಹಾಡಿನಲ್ಲಿ ಒಟ್ಟು ಆರು ಸಾವಿರ ಫ್ರೇಮ್‌ಗಳಿವೆ. ಅಂದರೆ ಆ ಆರು ಸಾವಿರ ಫ್ರೇಮ್‌ಗಳಲ್ಲಿ ರಜನಿಯ ದೇಹದ ಬಣ್ಣವನ್ನು ಬೆಳಕು-ನೆರಳು ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಬದಲಾಯಿಸುವುದು ತಮಾಷೆಯ ಮಾತಲ್ಲ, ಹಾಗೆ ಮಾಡುವುದಕ್ಕೆ ಸರಿಯಾಗಿ 365 (ಅಂದರೆ ಒಂದು ವರ್ಷ) ದಿನಗಳ ಕಾಲ ತಂತ್ರಜ್ಞರು ಶ್ರಮಿಸಿದ್ದಾರೆ.

ಕನ್ನಡನಾಡಿನ ಕಪ್ಪು ಕುವರ ರಜನಿ ಅಲಿಯಾಸ್ ಶಿವಾಜಿ ಬೆಳ್ಳಗಾದ ಪರಿ ಇದು.



ಅಂದಹಾಗೆ, 'ಶಿವಾಜಿ' ಎಂಬ ಇಡೀ ಚಿತ್ರದಲ್ಲಿ ಕನಿಷ್ಠ ಅರ್ಧ ಗಂಟೆಯ ಕಂಪ್ಯೂಟರ್ ಗ್ರಾಫಿಕ್‌ಗಳಿವೆ. ಅವುಗಳೊಂದಿಗೆ ರಜನಿಯವರ ಜನಪ್ರಿಯವಾದ ಸ್ಟೈಲ್, ಮ್ಯಾನರಿಸಂ, ಗಿಮಿಕ್, ಡೈಲಾಗ್ ಡೆಲಿವರಿಗಳಿವೆ. ಅದರೊಂದಿಗೆ ದೇವಲೋಕದಿಂದ ಇಳಿದು ಬಂದಿರುವವಳಂತೆ ಕಾಣುವ ನಾಯಕಿ ಶ್ರೇಯಾ, ಪೀಟರ್ ಹೇಯ್ನ್‌ರವರ ಅದ್ಭುತ ಆಕ್ಷನ್ ದೃಶ್ಯಗಳ ಸಂಯೋಜನೆ, ಶಂಕರ್‌ರವರ ಚಮತ್ಕಾರಿಕ ನಿರ್ದೇಶನ, ಎವಿಎಂರವರು ಸುರಿದಿರುವ 80 ಕೋಟಿ ರೂಪಾಯಿಗಳ ಅದ್ಧೂರಿತನ, ಎಲ್ಲವೂ ಇದೆ. ಇಷ್ಟೆಲ್ಲ ಇದ್ದ ಮೇಲೆ ಪ್ರೇಕ್ಷಕರಿಗೆ ಪೈಸಾ ವಸೂಲು ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚು ಸಂತೋಷ ಸಿಗುತ್ತದೆ!

ಗಣ್ಯರ ನೂಕು ನುಗ್ಗಲು


'ಶಿವಾಜಿ' ಎಂತಹ ಹೈಪ್ ಸೃಷ್ಟಿಸಿದೆ ಎಂದರೆ ಸಾಮಾನ್ಯ ಜನರಿರಲಿ, ಹಲವಾರು ಭಾಷೆಯ ಸ್ಟಾರ್‌ಗಳು, ವಿವಿಧ ಪಕ್ಷಗಳ ನಾಯಕರೂ ಅದನ್ನು ನೋಡಲು ಹಾತೊರೆಯುತ್ತಿದ್ದಾರೆ. ಅದಕ್ಕಿಂತಲೂ ವಿಚಿತ್ರವೆಂದರೆ ಹಿಂದೆಲ್ಲಾ ತಮಿಳುನಾಡಿನ ಪ್ರಬಲ ರಾಜಕಾರಣಿಗಳು ಜನಪ್ರಿಯರಾದ ರಜನಿಕಾಂತರು ರಾಜಕಾರಣಕ್ಕೆ ಇಳಿದರೆ ತಮ್ಮ ಗತಿ ಏನೆಂದು ಚಿಂತಿಸುತ್ತಿದ್ದರು. ಆದರೆ ಈಗ ಅಂತಹ ಅಪಾಯವಿಲ್ಲವೆಂಬ ನಿರ್ಧಾರಕ್ಕೆ ಬಂದು ಪೈಪೋಟಿಯ ಮೇಲೆ ರಜನಿಯವರ 'ಶಿವಾಜಿ'ಯನ್ನು ಮೆಚ್ಚುತ್ತಿದ್ದಾರೆ!

ತಮಿಳುನಾಡಿನ ಹಾಲಿ ಮ[...] ಮಂತ್ರಿ ಮತ್ತು ಡಿಎಂಕೆ ಪಕ್ಷದ ಸ[...] ಎಂ. ಕರುಣಾನಿಧಿ ಎಂದಿಗೂ [...] 'ದೊಡ್ಡ ವೀಡು' ಮತ್ತು 'ಚಿನ್ನವಿ[...] ಗಳನ್ನು ಪ್ರತ್ಯೇಕವಾಗಿಯೇ ಇಟ್ಟ[...] ಅಂಥವರು ಮೊನ್ನೆ 'ಶಿವಾಜಿ'ಯ [...] ಯರ್ ಶೋಗೆ ತಮ್ಮ ಎರಡನೇ [...] ಮೂರನೇ ಮಡದಿಯರೊಂದಿಗೆ ([...] ಪ್ರಥಮ ಹೆಂಡತಿ ತೀರಿಕೊಂಡಿ[...] ಮತ್ತು ಅವರಿಬ್ಬರಿಗೆ ಜನಿಸಿದ [...] ಳೊಂದಿಗೆ, ಹಾಗೂ ಆಯಾ [...] ಮಕ್ಕಳೊಂದಿಗೆ... ಅಂದರೆ ತಮ್ಮ [...] ಪರಿವಾರದೊಂದಿಗೆ ಹಾಜರಾಗಿ[...] ಹಾಗೆಯೇ ಇನ್ನೊಂದು ಶೋಗೆ ಹಾಜರಾದ [...] ಪರಮವೈರಿ, ಎಐಎಡಿಎಂಕೆಯ ಏಕೈಕ ನಾಯಕಿ [...] ಲಲಿತಾ ಕೂಡ ಬಂದು ಚಿತ್ರವನ್ನು ವೀಕ್ಷಿಸಿ ಆನಂದಿಸಿ[...]

ಇನ್ನು ನಮ್ಮ ಕನ್ನಡ ಚಿತ್ರರಂಗದವರು ಹಿಂದಿ[...] ಸಾಧ್ಯವೇ? ಈಗಾಗಲೇ ಚಿತ್ರಮಂದಿರಗಳಲ್ಲಿ [...] ನೂಕುನುಗ್ಗಲು ಇರುವಾಗ ಅದನ್ನು ಅಲ್ಲಿ ನೋಡು[...] ಅಸಾಧ್ಯ ಎಂದು ಸ್ಯಾಂಡಲ್‌ವುಡ್‌ನ ಗಣ್ಯಾತಿಗ[...] ಗೊತ್ತು. ಆದ್ದರಿಂದಲೇ ಅವರು 'ಶಿವಾಜಿ'ಯ [...] ಗಂಗರಾಜುಗೆ ಹೇಳಿ ಚಿತ್ರದ ವಿಶೇಷ ಶೋಗಳು ಏ[...] ವಂತೆ ನೋಡಿಕೊಂಡರು. ಮೊದಲನೆಯದಾಗಿ [...] ಕುಟುಂಬದ ಎಲ್ಲರೂ ರಜನಿಯ ಅಭಿಮಾನಿಗಳಾ[...] ಅವರೆಲ್ಲರಿಗೂ ಒಂದು ಪ್ರತ್ಯೇಕ ಶೋ ಅನ್ನು ಗಂಗ[...] ಏರ್ಪಡಿಸಿದರು. ಆನಂತರ, ರಜನಿಯ ಮಿತ್ರ ಅಂಬ[...] ರವರಿಗೆ ಮತ್ತೊಂದು ಶೋ. ಅದಾದ ನಂತರ ಪ[...] ರಿಗೆಂದು ಇನ್ನೊಂದು ಶೋ!

ಈ ಯಾವ ಶೋಗಳಿಗೂ ಆಹ್ವಾನ ಪಡೆ[...] ಯಿದ್ದವರು ಮಾತ್ರ ನಟಿಕೆ ಮುರಿಯುತ್ತಾ [...] ದುರಾದೃಷ್ಟವನ್ನು ಶಪಿಸುತ್ತಿದ್ದಾರೆ!

ತಮಿಳಿನಲ್ಲಿ ಸೋತ ರಜನಿ ಅಳಿಯನ 'ಜೋಗಿ'



ಪ್ರೇಮ್ ನಿರ್ದೇಶನದ 'ಜೋಗಿ' ಸಿನಿಮಾ ಹಿಟ್ ಆದ ಕೂಡಲೇ, "ಅದನ್ನು ರಜನಿಕಾಂತ್ ನೋಡಿ ಆನಂದಿಸಿದರು. ಅದನ್ನು ತಮಿಳಿಗೆ ರೀಮೇಕ್ ಮಾಡಿದರೆ ತಾನೇ ಅದರಲ್ಲಿ ನಟಿಸುತ್ತೇನೆ ಅಂದರು" ಎಂದೆಲ್ಲ ಪ್ರೇಮ್ ಡಂಗುರ ಬಾರಿಸಿದ್ದರು.

ಆದರೆ ಅದು ತಮಿಳಿಗೆ ರೀಮೇಕ್ ಆಗಿದ್ದಾಗಲಿ, ರಜನಿ ಅದರಲ್ಲಿ ನಟಿಸದೇ ಇದ್ದದ್ದರ ಬಗ್ಗೆಯಾಗಲಿ, ತಮಿಳಿನಲ್ಲಿ ಅದು ಹೀನಾಯವಾಗಿ ಸೋತಿದ್ದಾಗಲಿ.... ಇದ್ಯಾವುದರ ಬಗ್ಗೆಯೂ ಪ್ರೇಮ್ ಎಲ್ಲೂ ಚಕಾರವೆತ್ತಲಿಲ್ಲ.

ಯಾಕೆಂದರೆ ತಮಿಳಿನ 'ಜೋಗಿ' ಆವೃತ್ತಿಯಲ್ಲಿ ರಜನಿ ಬದಲಾಗಿ ಅವರ ಅಳಿಯ ಧನುಷ್ ನಟಿಸಿದ್ದ. ಆದರೆ 'ಜೋಗಿ'ಗಿಂತ ಉತ್ತಮ ಸಿನಿಮಾಗಳನ್ನು ಕಂಡಿರುವ ತಮಿಳರು ಅದನ್ನು ಸಾರಾಸಗಟು ತಿರಸ್ಕರಿಸಿದ್ದರು. ಈ ಸುದ್ದಿ ಗೊತ್ತಾದರೆ ತನ್ನ ತಾರಾಮೌಲ್ಯಕ್ಕೆ ಎಲ್ಲಿ ಧಕ್ಕೆಯಾಗುತ್ತದೊ ಎಂದು ಆತಂಕಗೊಂಡ ಪ್ರೇಮ್ "ನಾನು ರಜನಿಕಾಂತ್‌ರವರಿಗಾಗಿ[...] ಚಿತ್ರಕತೆಯನ್ನು ತಯಾರಿಸುತ್ತೇನೆ. ಆಗ ಅವರೇ ಅದರಲ್ಲಿ ನಟಿಸಲಿದ್ದಾರೆ" ಎಂದು ಇನ್ನೊಂದು ಸುದ್ದಿಯನ್ನು ತೇಲಿಬಿ[...]

ಈಗ ನೋಡಿದರೆ ಪ್ರೇಮ್ ನಿರ್ದೇಶಿಸುತ್ತಿರುವ ನಾಯಕ ನಟನಾಗಿ ಆರಂಗೇಟ್ರಂ ಮಾಡುತ್ತಿರುವ 'ಪ್ರೀತಿ ಏ[...] ಭೂಮಿ ಮೇಲಿದೆ' ಎಂಬ ಚಿತ್ರವೇ ಅವರೇಕಾಯಿ ಹುಳದ ವೇಗದಲ್ಲಿ ತಯಾರಾಗುತ್ತಿದ್ದರೆ, ರಜನಿಕಾಂತ್ ನಟಿಸಿ[...] 'ಶಿವಾಜಿ' ಜಗತ್ತಿನ ಹಲವಾರು ಕಡೆ ವಿಜಯದ ಪತಾಕೆ ಹಾರಿಸುತ್ತಿದೆ.

ಎಲ್ಲಿ ಪ್ರೇಮ್‌ನ ಸುರ್‌ಸುರ್ ಬತ್ತಿ... ಎಲ್ಲಿ ರಜನಿಕಾಂತರ ರಾಕೆಟ್ಟು?!

ಮದುವೆ ಆಗುವ ಮುನ್ನ ನಾನು ಏನನ್ನು ಮಾಡುತ್ತಿದ್ದೆ? ನನಗೆ ಬೇಕಾದ್ದನ್ನೆಲ್ಲ ಮಾಡುತ್ತಿದ್ದೆ-ಹೆನ್ನಿ ಯಂಗ್‌ಮ್ಯಾನ್



ನೇಣಿಗೆ ಕೊರಳೊಡ್ಡಿದ ನೇಗಿಲಯೋಗಿ

ಪ್ರತ್ಯಕ್ಷ ವರದಿ

ಮಂಡ್ಯ ಜಿಲ್ಲೆಯ ರೈತ ಆತ್ಮಹತ್ಯೆಗಳ ಸ್ತಬ್ಧ ಚಿತ್ರಗಳು

ಕಳೆದ ಆರು ತಿಂಗಳಲ್ಲಿ ಈ ನಾಡಿನ ಸಂಪದ್ಭರಿತ ಜಿಲ್ಲೆಯಾದ ಮಂಡ್ಯದಲ್ಲಿ 12 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬೀದರಿನಲ್ಲಿ 54 ಮಂದಿ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮತ್ತೊಂದು ಕಡೆ ಮುಖ್ಯಮಂತ್ರಿಗಳ ಸಂವಾದದ ನಾಟಕ, ಸಾಲಮನ್ನಾ ಎಂಬ ಪುಗಸಟ್ಟೆ ಭರವಸೆಗಳ ನಾಟಕ ಮುಂದುವರೆದಿದೆ. ಈ ದೇಶದ ಬೆನ್ನೆಲುಬಾದ ರೈತನ ಬೆನ್ನೆಲುಬನ್ನು ಮುರಿಯುತ್ತಿರುವುದೇ? ಇದನ್ನು ಅರ್ಥಮಾಡಿಕೊಳ್ಳಲು 'ಲಂಕೇಶ್' ಬಳಗದ ಸ್ನೇಹಿತರು ಮಾಡಿದ ಪ್ರಯತ್ನದ ವರದಿ ಇಲ್ಲಿದೆ.....

ಪುಗಸಟ್ಟೆ ಭರವಸೆಗಳು

ಜೂನ್ 14, 2007

ರಾಜ್ಯದಲ್ಲಿ ಯಾವ ರೈತನಾದರೂ ಆತ್ಮಹತ್ಯೆ ಮಾಡಿಕೊಂಡರೆ ತಕ್ಷಣ ಅಧಿಕಾರದಿಂದ ಕೆಳಗಿಳಿಯುವುದಾಗಿ ಮಣ್ಣಿನ ಮೊಮ್ಮಗ ಹಾಗೂ ಕರ್ನಾಟಕದ ಮುಖ್ಯಮಂತ್ರಿ ಕುಮಾರಸ್ವಾಮಿ ಘೋಷಣೆ ಮಾಡಿದರು; ರೈತರ ಸಮಸ್ಯೆಗಳನ್ನು ಬಗೆಹರಿಸಲು ವಿಫಲನಾದರೆ ಅವಧಿಗಿಂತ ಮುಂಚೆಯೆ ಮುಖ್ಯಮಂತ್ರಿ ಸ್ಥಾನ ಬಿಡುವುದಾಗಿ ಹೇಳಿಕೆ ಯೋಜನೆ ರೂಪಿಸುವೆ ಎಂದು ಪೋಜು ನೀಡಿದರು; ಕಂಡಕಂಡಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಅವರ್‍ಯಾರೂ ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಉತ್ಸುಕರಾಗಿಲ್ಲ, ಇದರಿಂದ ರೈತರ ಸಮಸ್ಯೆಗಳನ್ನು ಬಗೆಹರಿಸಲು ಹೊರಟಿರುವ ಏಕೈಕ ವ್ಯಕ್ತಿಯಾದ ತನಗೆ ಅವರ ಸಹಕಾರ ದೊರೆಯುತ್ತಿಲ್ಲ ಎಂದು ದೂರಿದರು; ಹುಬ್ಬಳ್ಳಿಯಲ್ಲಿ ಬರಪರಿಸ್ಥಿತಿಯನ್ನು ಪರಿಶೀಲಿಸಲು ನಿಯೋಜಿಸಿದ್ದ ಒಬ್ಬ ಅಧಿಕಾರಿ ಬೆಳಗಾವಿಯಲ್ಲಿ ಗಾಲ್ಫ್ ಆಡಲು ಹೋಗಿದ್ದ ಉದಾಹರಣೆಯನ್ನೂ ನೀಡಿದರು; ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳಬೇಡಿ ಎಂದೂ, ಬೆಳೆಯನ್ನು









ನೀಡಿದರು; ಯಾವ ರೈತನಿಗಾದರೂ ಗಂಭೀರ ಸಮಸ್ಯೆಗಳಿದ್ದರೆ ನೇರವಾಗಿ ತನ್ನನ್ನು ಭೇಟಿ ಮಾಡುವಂತೆ ರೈತರಿಗೆ ಮನವಿ ಮಾಡಿಕೊಂಡರು; ರೈತರ ಗಂಭೀರ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಅವರೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು; ಖಾಸಗಿ ಸಾಲದಿಂದಾಗಿಯೇ ಬಹುತೇಕ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದರಿಂದ ಅಂತಹ ಬಡ್ಡಿಸಾಲಗಾರರನ್ನು ನಿಯಂತ್ರಿಸಲು ಕಾನೂನು ರೂಪಿಸುವುದಾಗಿ ಆಶ್ವಾಸನೆ ನೀಡಿದರು; ರೈತರ ಮತ್ತು ಕೃಷಿಯ ಸಮಸ್ಯೆಗಳನ್ನು ಬಗೆಹರಿಸಿ ಅಭಿವೃದ್ಧಿಯತ್ತ ಕೊಂಡೊಯ್ಯುವುದಕ್ಕಾಗಿ ಪ್ರತ್ಯೇಕ ಕೃಷಿ ಬಜೆಟ್ ರೂಪಿಸುವ ಸಾಧ್ಯಾಸಾಧ್ಯತೆಗಳ ಬಗ್ಗೆ ಪರಿಶೀಲಿಸಲಾಗುವುದೆಂದು ನಂಬಿಸಿದರು; ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ನಿಗದಿ ಮಾಡುವುದಾಗಿ ಅನ್ನದಾತರಿಗೆ ಮಾತು ಕೊಟ್ಟರು; ಮುಂದಿನ ಎರಡು ವರ್ಷಗಳಲ್ಲಿ ರೈತರ ಪಂಪ್‌ಸೆಟ್‌ಗಳಿಗೆ ಪ್ರತಿದಿನ 10 ಗಂಟೆಗಳ ತಡೆರಹಿತ ವಿದ್ಯುತ್ ಪೂರೈಸುವುದಾಗಿ ವಾಗ್ದಾನ ಮಾಡಿದರು; ಮುಂದಿನ ಮೂರು ವರ್ಷಗಳಲ್ಲಿ ಮನೆರಹಿತ ಎಲ್ಲಾ ರೈತರಿಗೆ ಮನೆಗಳನ್ನು ಕಟ್ಟಿಸಿ ಕರ್ನಾಟಕ [illegible], 'ಗುಡಿಸಲುರಹಿತ ರಾಜ್ಯ'ವನ್ನಾಗಿ [illegible] ಎಂದು ಭಾಷಣ ಮಾಡಿದರು; ಬೆಳೆಸಾಲ ಮತ್ತಷ್ಟು ಪರಿಣಾಮ[illegible] ರೂಪಿಸಲು ಶಕ್ತಿಮೀರಿ [illegible] ಎಂದು ಉತ್ಸಾಹ [illegible]; ಕೆಎಮ್‌ಎಫ್ ಮಾದರಿಯ [illegible] ರೈತರ ಬೆಳೆಗಳನ್ನು ಖರೀದಿಸುವ



ಆಯ್ಕೆ ಮಾಡಿಕೊಳ್ಳುವಲ್ಲಿ ವೈಜ್ಞಾನಿಕವಾಗಿ ಯೋಚಿಸಿರಿ ಎಂದೂ ರೈತರಿಗೆ ಉಪದೇಶ ಕೂಡ ಮಾಡಿದರು. ಆದರೆ ಸಮಸ್ಯೆ ಬಗೆಹರಿಯುವುದು ಪ್ರಧಾನವಾಗಿ ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ ಎಂದು ಸೇರಿಸುವುದನ್ನು ಮಾತ್ರ ಮರೆಯುತ್ತಲಿಲ್ಲ. ಏಕೆಂದರೆ, ಒಂದು ವೇಳೆ ಸಮಸ್ಯೆ ಬಗೆಹರಿಯದೇ ರೈತರ ಆತ್ಮಹತ್ಯೆಗಳು ಮುಂದುವರೆದರೆ ರಾಜ್ಯದ ಹಣಕಾಸು ಪರಿಸ್ಥಿತಿಯೇ ಸರಿಯಿಲ್ಲ, ನಾನೇನು ಮಾಡಲಿ ಎಂದು ನೀಟಾಗಿ ಕೈತೊಳೆದುಕೊಳ್ಳಬಹುದಲ್ಲವೇ?

ಇದು ನಮ್ಮ ಮಣ್ಣಿನ ಮೊಮ್ಮಗ, ಕರ್ನಾಟಕದ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೋದಲ್ಲೆಲ್ಲಾ, ಬಂದಲ್ಲೆಲ್ಲಾ ರೈತರ ಆತ್ಮಹತ್ಯೆಗಳ ಕುರಿತು ಮಾತನಾಡುವ ಮಾತುಗಳು, ನೀಡುವ ಭರವಸೆಗಳು, ಕೊಡುವ ಆಶ್ವಾಸನೆಗಳು, ತೋರುವ ಉತ್ಸಾಹಗಳು, ಕೊರೆಯುವ ಭಾಷಣಗಳು. ಆದರೆ ಕರ್ನಾಟಕದ ಹಳ್ಳಿಗಳಿಗೊಮ್ಮೆ ಹೋಗಿ ಬಂದರೆ ಗ್ರಾಮೀಣ ಲೋಕದ ನರಕಮಯ ಯಾತನೆಯ ಅಸಲಿ ರೂಪ ಕಣ್ಣಿಗೆ ಕಾಣುತ್ತದೆ. ಅಂತೆಯೆ, ನಮ್ಮ ಮಣ್ಣಿನ ಮೊಮ್ಮಗನ ಆಶ್ವಾಸನೆ ಮತ್ತು ಭರವಸೆಗಳ ಅಸಲಿರೂಪದ ದಿಗ್ದರ್ಶನವಾಗುತ್ತದೆ. ಮಂಡ್ಯ ಜಿಲ್ಲೆಯ ನಾಲ್ಕು ಹಳ್ಳಿಗಳಲ್ಲಿ ಇತ್ತೀಚೆಗೆ ನಡೆದ ನಾಲ್ವರು ರೈತರ ಆತ್ಮಹತ್ಯೆಗಳ ಸಂಕ್ಷಿಪ್ತ ಚಿತ್ರಣವನ್ನು ನಿಮ್ಮ ಮುಂದಿಡುತ್ತಿದ್ದೇವೆ. ಮಂಡ್ಯದಂತಹ ಜಿಲ್ಲೆಯಲ್ಲಿಯೇ ಹೀಗಾದರೆ ಇನ್ನು ಸದಾ ಬರಗಾಲದಿಂದ ಕೂಡಿರುವ ಉತ್ತರ ಕರ್ನಾಟಕದ ಜಿಲ್ಲೆಗಳ ಸ್ಥಿತಿ ಏನಾಗಿರಬಹುದೆಂದು ಹಾಗೂ ಮಣ್ಣಿನ ಮೊಮ್ಮಗ ರೈತರಿಗೆ ಕೊಟ್ಟ ಭರವಸೆಗಳು, ವಾಗ್ದಾನಗಳು ಅವರಿಗೆ ತಲುಪಿವೆಯೇ ಎಂದು ನೀವೇ ನಿರ್ಧಾರ ಮಾಡಿ.

1. ವಳಗೆರೆಹಳ್ಳಿ- ಮಾರ್ಚ್ 17 : ಇದೇ ಕಳೆದ ಮಾರ್ಚ್ 17ರಂದು ಈ ಹಳ್ಳಿಯ ಒಬ್ಬ ಸಾಧಾರಣ ರೈತ ತಮ್ಮಣ್ಣ ತನ್ನ ಒಂದು ಎಕರೆ ಹೊಲದಲ್ಲಿರುವ ಹುಣಸೆಮರಕ್ಕೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ. ಪಂಕಜ ಮತ್ತು ಜಲಜ ಎಂಬ ಇಬ್ಬರು ಹೆಣ್ಣುಮಕ್ಕಳನ್ನು ಸಾಕಿಸಲಹುವ ಭಾರ ಈಗ ಹೆಂಡತಿ ಪಾರ್ವತಿ ಮೇಲೆ ಬಿದ್ದಿದೆ. ಪಂಕಜಗೆ 11 ವರ್ಷವಾದರೆ, ಜಲಜಗೆ ಇನ್ನೂ 8ವರ್ಷ. ಅವರಿಬ್ಬರೂ ಊರಿನ ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರೆ. ಪಂಕಜ ತನ್ನ ತಂದೆಯ ಆತ್ಮಹತ್ಯೆಯನ್ನು ಅರ್ಥಮಾಡಿಕೊಳ್ಳುವಷ್ಟು ಪ್ರಬುದ್ಧಳಾಗಿದ್ದರೆ, ಜಲಜಳಿಗೆ ಮಾತ್ರ ಏನಾಯಿತೆಂದು ಗೊತ್ತೇ ಆಗಲಿಲ್ಲ. ಅವಳು ಅಕ್ಕನ ಕೈಹಿಡಿದು ಶಾಲೆಗೆ ಹೋಗುವುದರಲ್ಲಷ್ಟೇ ತಲ್ಲೀನಳಾಗಿದ್ದಳು. ಅವರ ತಾಯಿ ಪಾರ್ವತಿಗೆ ಮಾತ್ರ ಗಂಡ ಹೀಗೆ ಆತ್ಮಹತ್ಯೆ ಮಾಡಿಕೊಳ್ಳಬಹುದೆಂಬ ಸಣ್ಣ ಸುಳಿವೂ ಸಿಕ್ಕಿರಲಿಲ್ಲ.

ಏಕೆಂದರೆ ತಮ್ಮಣ್ಣ ತನ್ನ ಹಣಕಾಸಿನ ಸಮಸ್ಯೆಗಳ ಬಗ್ಗೆ ಹೆಂಡತಿಯ ಹತ್ತಿರ ಎಂದೂ ಮಾತನಾಡಿರಲಿಲ್ಲ. ವಾಸ್ತವದಲ್ಲಿ ತಮ್ಮಣ್ಣನ ಹಣಕಾಸು ಸಮಸ್ಯೆಯ ಬಗ್ಗೆ ಅವನ ಹೆಂಡತಿ ಪಾರ್ವತಿಗಿಂತಲೂ ಅವಳ ಸಂಬಂಧಿ ಕಾಡೇಗೌಡರಿಗೇ ಹೆಚ್ಚು ಗೊತ್ತಿತ್ತು. ನಾನು ಪಾರ್ವತಿಯನ್ನು ಅವಳ ಗಂಡ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿ ನಿರ್ಮಾಣವಾದ ಬಗ್ಗೆ ಕೇಳಲು ಮುಂದಾಗುತ್ತಿದ್ದಂತೆ ಕಾಡೇಗೌಡರೇ ಮುಂದೆ ಬಂದು 'ಅವಳಿಗೇನೂ ಗೊತ್ತಿಲ್ಲ, ನಾನೇ ಹೇಳುವೆ ಬನ್ನಿ' ಎಂದು ತಮ್ಮಣ್ಣ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾರಣವಾಗಿದ್ದ ಹಣಕಾಸಿನ ತೊಂದರೆಯನ್ನು ವಿವರಿಸಿದರು. ತಮ್ಮಣ್ಣ ಸ್ಥಳೀಯ ವ್ಯಕ್ತಿಯೊಬ್ಬನಿಂದ ಒಂದಿಷ್ಟು ಸಾಲ ಮಾಡಿದ್ದ, ಹಣ ವಾಪಾಸ್ಸು ಕೊಡು ಎಂದು ಸಾಲ ಕೊಟ್ಟ ವ್ಯಕ್ತಿ ಮನೆಬಾಗಿಲಿಗೆ ಬಂದು ಎಂದೂ ಕೇಳಿರಲಿಲ್ಲ, ಅಷ್ಟೆ. ಮಾರ್ಚ್ 17ರಂದು 30,000 ರೂಪಾಯಿಗಳನ್ನು ವಾಪಾಸ್ಸು ಕೊಡುವುದಾಗಿ ಆತನಿಗೆ ಭರವಸೆ ಕೂಡ ತಮ್ಮಣ್ಣ ಕೊಟ್ಟಿದ್ದ. ಆದರೆ ಅಷ್ಟು ಹಣವನ್ನು ಅವನಿಂದ ಹೊಂದಿಸಲಾಗಲಿಲ್ಲ. ಆ ದಿನವೇ ಆತ ತನ್ನ ಹೊಲದಲ್ಲಿ ನೇಣಿಗೆ ಕೊರಳೊಡ್ಡಿದ. ಆದರೆ ಈ ಯಾವ ವಿಚಾರವೂ ಅವನ ಹೆಂಡತಿ ಪಾರ್ವತಿಗೆ ಗೊತ್ತೇ ಇರಲಿಲ್ಲ.

ಈಗ ಈತನ ಆತ್ಮಹತ್ಯೆಯ ನಂತರ ಅವನ ಇಬ್ಬರು ಮಕ್ಕಳಿಗೆ ಖಾಯಂ ಠೇವಣಿಯ ರೂಪದಲ್ಲಿ ಸರ್ಕಾರದಿಂದ ಒಂದು ಲಕ್ಷ ರೂಪಾಯಿ ಪರಿಹಾರ ಬಂದಿದೆ. ಆದರೆ, ಈ ಕುಟುಂಬಕ್ಕೆ ತಮ್ಮಣ್ಣ ಮಾಡಿದ ಸಾಲ ಮಾತ್ರ ಹಾಗೆಯೇ ಇದೆ. ಸ್ಟೇಟ್ ಬ್ಯಾಂಕ್‌ನಲ್ಲಿ 35,000 ರೂಪಾಯಿ, ಸಹಕಾರಿ ಬ್ಯಾಂಕಿನಲ್ಲಿ 15,000 ರೂಪಾಯಿ ಹಾಗೂ ಸ್ಥಳೀಯ ಬಡ್ಡಿವ್ಯವಹಾರಸ್ಥರಿಂದ ತೆಗೆದುಕೊಂಡ ಸುಮಾರು 50,000 ರೂಪಾಯಿ. ಹೀಗೆ ಸುಮಾರು ಒಂದು ಲಕ್ಷದಷ್ಟು ಸಾಲ ಇದೆ. ಇದರಲ್ಲಿ ಸ್ಥಳೀಯ ಬಡ್ಡಿವ್ಯವಹಾರಸ್ಥರಲ್ಲಿ ಮಾಡಿದ ಸಾಲಕ್ಕೆ ಪ್ರತಿತಿಂಗಳಿಗೆ ಪ್ರತಿನೂರು ರೂಪಾಯಿಗಳಿಗೆ 4 ರಿಂದ 5 ರೂಪಾಯಿ ಬಡ್ಡಿ ಕಟ್ಟಬೇಕು! ಪರಿಹಾರದ ಹಣ ಫಿಕ್ಸ್ ಡಿಪಾಜಿಟ್ ರೂಪದಲ್ಲಿರುವುದರಿಂದ ಈ ಸಾಲವನ್ನೆಲ್ಲಾ ಹೇಗೆ ತೀರಿಸುವುದು ಎಂಬ ಚಿಂತೆ ಪಾರ್ವತಿಯದು.

2. ಸಾದೊಳಲು- ಜೂನ್ 2, 2007: ಈ ಗ್ರಾಮದ 48 ವರ್ಷ ವಯಸ್ಸಿನ ಬಸವೇಗೌಡ ಜೂನ್ 2ರಂದು ಕ್ರಿಮಿನಾಶಕ ಕುಡಿದು ಆತ್ಮಹತ್ಯೆ ಮಾಡಿಕೊಂಡ. ನಾವಲ್ಲಿಗೆ ಹೋದಾಗ ಆತನ ಕುಟುಂಬ ಅವನ ತಿಥಿಯನ್ನು ಆಗತಾನೆ ಮಾಡಿಮುಗಿಸಿತ್ತು. ಈತನಿಗೆ ಒಟ್ಟು ನಾಲ್ಕು ಲಕ್ಷ ಸಾಲವಿತ್ತು. ಈತ ಮಂಡ್ಯ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ದೊಡ್ಡ ರೈತ ಎಂದೇ ಕರೆಯಬಹುದಾದ ವ್ಯಕ್ತಿ. ಏಕೆಂದರೆ ಮಂಡ್ಯ ಜಿಲ್ಲೆಯ ಸರಾಸರಿ ಭೂಹಿಡುವಳಿ ಒಂದು ಎಕರೆಯಾದರೆ ಈತನಿಗೆ ಏಳು ಎಕರೆ ಜಮೀನಿತ್ತು. ಈತ ಇತ್ತೀಚೆಗೆ ಒಂದು ಎಕರೆ ಜಮೀನನ್ನು ಒಂದು ಲಕ್ಷ ರೂಪಾಯಿಗಳಿಗೆ ಮಾರಿ ಆ ಹಣದಲ್ಲಿ ಒಂದಷ್ಟನ್ನು ಆದಿಚುಂಚನ ಗಿರಿ ನರ್ಸಿಂಗ್ ಕಾಲೇಜಿಗೆ ಡೊನೇಶನ್ ಕೊಟ್ಟು ತನ್ನ ಮಗನಿಗೆ ಸೀಟು ಕೊಡಿಸಿದ್ದ. ಉಳಿದ ಹಣದಲ್ಲಿ ಒಬ್ಬ ಮಗಳ ಮದುವೆಯನ್ನು ಮಾಡಿದ. ಆದರೆ ದುರಂತ ಎಂದರೆ ಮಗ ಆದಿಚುಂಚನಗಿರಿ ಕಾಲೇಜಿನಲ್ಲಿ ರ್‍ಯಾಗಿಂಗ್ ಹಿಂಸೆಯನ್ನು ತಾಳಲಾರದೇ ಓದುವುದನ್ನೇ ನಿಲ್ಲಿಸಿ ವಾಪಾಸ್ಸು ಬಂದುಬಿಟ್ಟ. ರ್‍ಯಾಗಿಂಗ್‌ನಿಂದ ಭಾರಿ ಮಾನಸಿಕ ಆಘಾತಕ್ಕೊಳಗಾದ ಆತ ನಂತರದಲ್ಲಿ ಮೊದಲಿನಂತೆ ಸಹಜಸ್ಥಿತಿಗೆ ಬರಲೇ ಇಲ್ಲ. ಬಸವೇಗೌಡನ ಸಂಬಂಧಿ ಶಿವಪ್ಪ ಎಂಬುವರು, "ಆ ಹುಡುಗ ತಂದೆಯ ಚಿತಾಭಸ್ಮವನ್ನು ಕಾವೇರಿ ನದಿಯಲ್ಲಿ ವಿಸರ್ಜನೆ ಮಾಡಲು ಶ್ರೀರಂಗಪಟ್ಟಣಕ್ಕೆ ಹೋಗಿದ್ದಾನೆ. ಅವನು ಇಲ್ಲಿದ್ದಿದ್ದರೆ ಅವನ ಅಸಹಜ ಸ್ಥಿತಿಯನ್ನು ನೀವೇ ಕಣ್ಣಾರೆ ನೋಡಬಹುದಿತ್ತು" ಎಂದು ಹೇಳಿದ.

ಕಾವೇರಿ ನೀರಾವರಿ ಪ್ರದೇಶದ ಟೇಲ್‌ಎಂಡ್ ಭಾಗವಾದ ಸಾದೊಳಲು ಗ್ರಾಮದಲ್ಲಿ ವ್ಯವಸಾಯಕ್ಕಾಗಿ ಜನರು ಆಶ್ರಯಿಸುವುದು ಕೊಳವೆಬಾವಿ ನೀರನ್ನೇ. ಇದಕ್ಕೆ ಬಸವೇಗೌಡ ಕೂಡ ಹೊರತಲ್ಲ. ಈತ ಕೊರೆಸಿದ ಮೊದಲ ಬೋರ್‌ವೆಲ್ ಫೇಲ್ ಆಯಿತು. ಹಾಗಾಗಿ ಎರಡನೇ

(ಮುಂದಿನ ಪುಟಕ್ಕೆ)



ಕಷ್ಟಪಟ್ಟು ಬೆಳೆದ ಕಬ್ಬಿನ ಬೆಳೆ ರಸ್ತೆಪಾಲಾಗಿರುವುದು

ನೇಣಿಗೆ ಕೊರಳೊಡ್ಡಿದ ನೇಗಿಲಯೋಗಿ

(ಹಿಂದಿನ ಪುಟದಿಂದ)

ಬಾವಿಯನ್ನು ಕೊರೆಸಿದ. ಆದರೆ ದುರಂತ ಎಂದರೆ ಇದರಲ್ಲಿಯೂ ನೀರು ಬರಲೇ ಇಲ್ಲ. ಇವುಗಳಿಗಾಗಿ ಮಾಡಿದ ಸಾಲ ಹೇಗೆ ತೀರಿಸುವುದು ಎಂಬ ಆತಂಕಕ್ಕೊಳಗಾಗಿ ಮತ್ತೊಂದು ಬಾವಿಯನ್ನು ಕೊರೆಸಿ ಅದರಿಂದ ವ್ಯವಸಾಯ ಮಾಡಿ ತೀರಿಸುವ ಯೋಜನೆ ಹಾಕಿದ. ಹೀಗೆ ಮೂರನೇ ಬೋರ್‌ವೆಲ್ ಕೂಡ ಕೊರೆಸಿದ. ಇದರಲ್ಲಿ ಕೇವಲ ಒಂದೂವರೆ ಇಂಚು ನೀರು ಬಂತು. ಈ ಮೂರು ಬೋರ್‌ವೆಲ್ ಕೊರೆಸುವುದಕ್ಕೆ ಆತ ಆಗಲೇ ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದ. ಕೊನೆಯ ಬೋರ್‌ವೆಲ್‌ನಲ್ಲಿ ಬರುವ ಒಂದೂವರೆ ಇಂಚು ನೀರನ್ನೇ ಬಳಸಿ ವ್ಯವಸಾಯ ಮಾಡಲು ಮುಂದಾದ ಬಸವೇಗೌಡನಿಗೆ ಮತ್ತೂ ತೊಂದರೆಗಳು ಕಾದಿದ್ದವು. ಅಸಮರ್ಪಕ ವಿದ್ಯುತ್ ಪೂರೈಕೆ ಮತ್ತು ಹೆಚ್ಚುಕಡಿಮೆಯಾಗುವ ವೋಲ್ಟೇಜ್ ಸಮಸ್ಯೆಯಿಂದ ಬೋರ್‌ವೆಲ್‌ನ ಮೋಟರ್ ಎರಡು ಬಾರಿ ಸುಟ್ಟುಹೋಯಿತು. ಎರಡು ಬಾರಿಯೂ ಅದನ್ನು 8000 ರೂಪಾಯಿ ಖರ್ಚುಮಾಡಿ ರೀವೈಂಡ್ ಮಾಡಿಸಿದ. ಕರೆಂಟ್ ಮತ್ತದೇ ಸಮಸ್ಯೆಯನ್ನು ಸೃಷ್ಟಿಸಿ ಮತ್ತೆ ಮೋಟರ್ ಅನ್ನು ಸುಟ್ಟುಹಾಕಿತು. ಇದಾದ ಎರಡೇ ದಿನಕ್ಕೆ ಬಸವೇಗೌಡ ಆತ್ಮಹತ್ಯೆ ಮಾಡಿಕೊಂಡ. "ಬಸವೇಗೌಡ ತನ್ನ ಹೊಲದಲ್ಲಿ ಬೆಳೆದು ನಿಂತಿದ್ದ ಕಬ್ಬನ್ನು ತೋರಿಸಿ ಸಾಲಕೊಟ್ಟವರನ್ನು ಸಮಾಧಾನ ಮಾಡಬಹುದಿತ್ತು, ಆದರೆ, ಅವನ ಬೋರ್‌ವೆಲ್ ಮೋಟರ್ ಮೂರನೇ ಬಾರಿಗೆ ಸುಟ್ಟು ಹೋದಾಗ ಅದನ್ನು ರಿವೈಂಡ್ ಮಾಡಿಸಲು ಆತನ ಹತ್ತಿರ ಕಾಸು ಇರಲಿಲ್ಲ. ಹೀಗಾಗಿ ಕಬ್ಬನ್ನು ಕೊಯ್ಯುವ ಕೆಲಸಕ್ಕೆ ಕಾಸು ಎಲ್ಲಿಂದ ತರುವುದು ಎಂಬ ಚಿಂತೆಗೊಳಗಾಗಿ ಆತ ಆತ್ಮಹತ್ಯೆ ಮಾಡಿಕೊಂಡ" ಎಂದು ಊರಿನವರು ಹೇಳುತ್ತಾರೆ.

1997ರಲ್ಲಿ ಬಸವೇಗೌಡ ವಿಜಯ ಬ್ಯಾಂಕಿನಿಂದ 45,000 ರೂಪಾಯಿಗಳನ್ನು ಸಾಲ ಪಡೆದಿದ್ದ. ಈಗದು ಬಡ್ಡಿ ಸೇರಿ 75,000 ಆಗಿ ನಿಂತಿದೆ. ಈ ನಡುವೆ ಆತ ಬ್ಯಾಂಕಿಗೆ ಹಣ ಕಟ್ಟದಿರುವ ಕಾರಣ ಕೋರ್ಟಿನಿಂದ ಕೆಲವು ಬಾರಿ ಆತನಿಗೆ ನೋಟೀಸ್ ಕೂಡ ಬಂದಿತ್ತು. 18,000 ರೂಪಾಯಿಗಳನ್ನು ಕೊಡುವ ಮೂಲಕ ಕೋರ್ಟಿನ ಹೊರಗಡೆ ಈ ವಿವಾದವನ್ನು ಬಗೆಹರಿಸಿಕೊಂಡಿದ್ದ. ಆತನಿಗಿರುವ 6 ಎಕರೆ ಜಮೀನನ್ನು ವ್ಯವಸಾಯ ಯೋಗ್ಯ ಭೂಮಿಯನ್ನಾಗಿ ಮಾಡುವುದಕ್ಕೆ ಕನಿಷ್ಠ 50,000 ರೂಪಾಯಿಗಳು ಬೇಕು. ಬಸವೇಗೌಡನ ಮಗನಿಗೆ ವ್ಯವಸಾಯ ಮಾಡುವುದು ಗೊತ್ತಿಲ್ಲ. "ಸಂಬಂಧಿಗಳು, ಸ್ನೇಹಿತರು ಬಸವೇಗೌಡನ ಕುಟುಂಬಕ್ಕೆ ಸಹಾಯ ಮಾಡುತ್ತಿದ್ದಾರೆ. ಆದರೆ ಏನು ಮಾಡುವುದು. ಎಲ್ಲರಿಗೂ ತಮ್ಮದೇ ಆದ ಇಂತಹುದೇ ಸಮಸ್ಯೆಗಳಿವೆ" ಎಂದು ಹೇಳುತ್ತಾರೆ ಬಸವೇಗೌಡನ ಸಂಬಂಧಿ ಶಿವಪ್ಪ.


3. ಮಾದಾಪುರ ಕೊಪ್ಪಲು– ಮೇ 28, 2007: ಈ ಗ್ರಾಮ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನಲ್ಲಿದೆ. ಮಂಡ್ಯಕ್ಕಿಂತ ಹಾಸನ ಜಿಲ್ಲೆಯ ಹೊಳೆನರಸೀಪುರವೇ ಇದಕ್ಕೆ ಹತ್ತಿರವಾಗಿದೆ. ಕೇವಲ ಮಳೆನೀರನ್ನಾಧರಿಸಿಯೇ ಇರುವ ಈ ಪ್ರದೇಶಕ್ಕೆ ಸಾಕಷ್ಟು ನೀರು ಸಿಕ್ಕಿದ್ದು 1987ಕ್ಕಿಂತ ಹಿಂದೆ. ಅಲ್ಲಿಂದ ಇಲ್ಲಿಯತನಕ ಈ ಪ್ರದೇಶಕ್ಕೆ ಸಾಕಷ್ಟು ಮಳೆನೀರು ಸಿಕ್ಕೇ ಇಲ್ಲ. ಪ್ರಧಾನವಾಗಿ ಬಡ ಕುಟುಂಬಗಳೇ ಇರುವ ಈ ಹಳ್ಳಿಯು ಪ್ರಧಾನವಾಗಿ ಕಬ್ಬು ಅರೆಯುವುದಕ್ಕೆ ಸೂಕ್ತ ಸೌಲಭ್ಯವಿಲ್ಲದೇ ಬಳಲುತ್ತಿದೆ. ಎಲ್ಲಾ ರೈತರ ಹೊಲಗಳಲ್ಲಿ ಕಬ್ಬು ಒಣಗಿ ನಿಂತಿದೆ. ಕೆಲವು ಕಬ್ಬಿನ ಗದ್ದೆಗಳಂತೂ ಕಳೆದ 22 ತಿಂಗಳುಗಳಿಂದ ಕಟಾವು ಇಲ್ಲದೇ ಹಾಗೆಯೇ ನಿಂತಿದೆ. ಇನ್ನೊಂದೆಡೆ ಕಟಾವು ಮಾಡಿದ ಕಬ್ಬು ರಸ್ತೆ ಬದಿಗಳಲ್ಲಿ ಒಣಗುತ್ತಿದೆ. ಯಾರಾದರೂ ಈ ಪ್ರದೇಶಕ್ಕೆ ಬರುತ್ತಿದ್ದಂತೆಯೇ ಮೊದಲು ಕಾಣುವ ದೃಶ್ಯವಿದು. ಏಕೆಂದರೆ ಇಂಡಿಯನ್ ಸಿಮೆಂಟ್ ಲಿಮಿಟೆಡ್ (ಐಸಿಎಲ್) ಕಂಪೆನಿಯು ತನ್ನ ಸಕ್ಕರೆ ಕಾರ್ಖಾನೆಗಳಲ್ಲಿ ಅರೆಯುವುದಕ್ಕೆ ಈ ಕಬ್ಬನ್ನು ಕೊಂಡುಕೊಳ್ಳುತ್ತಿಲ್ಲ.

"ವಾಸ್ತವದಲ್ಲಿ ಕೆಸಿಎಲ್‌ನವರು ಪ್ರಾರಂಭದಲ್ಲಿ ಕಬ್ಬು ಬೆಳೆಯುವುದಕ್ಕೆ ರೈತರಿಗೆ ಭಾರಿ ಪ್ರೋತ್ಸಾಹ ನೀಡಿದರು. ತಾವೇ ಕೊಂಡುಕೊಳ್ಳುವುದಾಗಿ ಭರವಸೆ ಕೂಡ ನೀಡಿದ್ದರು. ಈ ಕಾರಣದಿಂದಲೇ ಕಳೆದ ಮೂರು ವರ್ಷಗಳಿಂದ ಹಳ್ಳಿಯಲ್ಲಿನ ಪ್ರತಿಯೊಬ್ಬರೂ ಕಬ್ಬು ಬೆಳೆಯುತ್ತಿದ್ದಾರೆ. ಆದರೆ ನಂತರದಲ್ಲಿ ಅವರು ಕಬ್ಬು ಕೊಂಡುಕೊಳ್ಳುವುದನ್ನೇ ಹಠಾತ್ತಾಗಿ ನಿಲ್ಲಿಸಿಬಿಟ್ಟರು" ಎಂದು ಊರಿನವರು ಹೇಳುತ್ತಾರೆ. ಹಾಗಂತ ಕೆಸಿಎಲ್‌ನವರು ಕಬ್ಬು ಅರೆಯುವುದನ್ನೇ ನಿಲ್ಲಿಸಿಬಿಟ್ಟಿಲ್ಲ. ಅವರು ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣಗಳಿಂದ ಕಬ್ಬು ತರಿಸಿಕೊಂಡು ಅರೆಯುತ್ತಿದ್ದಾರೆ. ಇಲ್ಲಿನ ಕಬ್ಬನ್ನು ಬಿಟ್ಟು ದೂರದ ಕಬ್ಬನ್ನು ಅರೆಯುವುದಕ್ಕೆ ರಾಜಕೀಯ ಒತ್ತಡಗಳಿರುವುದೇ ಎಂದು ರೈತರು ಆಪಾದಿಸುತ್ತಾರೆ.

ಈ ಹಳ್ಳಿಯ ಕೃಷ್ಣೇಗೌಡ ಎಂಬ 55 ವರ್ಷದ ರೈತ ತನ್ನ ಒಂದು ಎಕರೆ ಜಮೀನನಲ್ಲಿರುವ ಒಂದು ಹೊಂಗೆ ಮರಕ್ಕೆ ನೇಣು ಹಾಕಿಕೊಂಡು ಇದೇ ಮೇ 28ರಂದು ಆತ್ಮಹತ್ಯೆ ಮಾಡಿಕೊಂಡ. ಈತ ತನ್ನ ಹತ್ತು ಗುಂಟೆ ಜಮೀನನ್ನು ಒಬ್ಬ ಗೇಣಿದಾರನಿಗೆ 25,000 ರೂಪಾಯಿಗಳಿಗೆ ಕೊಟ್ಟಿದ್ದ. ಇವನ ಕುಟುಂಬ ತುಂಬಾ ಬಡತನದಲ್ಲಿದ್ದರೂ ಅವರಿಗೆ ಒಂದು ಬಿಪಿಎಲ್ ಕಾರ್ಡ್ ಕೂಡ ಈವರೆಗೆ ಸಿಕ್ಕಿಲ್ಲ. ಈತ ತನ್ನ ಸ್ನೇಹಿತರಲ್ಲಿ ಮತ್ತು ಬಡ್ಡಿ ವ್ಯವಹಾರಸ್ಥರಲ್ಲಿ ಸುಮಾರು 70 ಸಾವಿರ ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದ. ಇದಲ್ಲದೇ ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕ್‌ನಲ್ಲಿ ಕೂಡ ಆತನಿಗೆ 19 ಸಾವಿರ ರೂಪಾಯಿ ಸಾಲವಿತ್ತು. ಸರ್ಕಾರದ ಸಾಲ ಮನ್ನಾ ತೀರ್ಮಾನ ಕೃಷ್ಣೇಗೌಡನಿಗೆ ಅನ್ವಯಿಸಲಿಲ್ಲ, ಯಾಕೆಂದರೆ ಆತ ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಮಾಡಿದ್ದನೇ ಹೊರತು ಸಹಕಾರಿ ಬ್ಯಾಂಕಿನಲ್ಲಿ ಅಲ್ಲ. ಈತನಿಗೆ ನೀರಾವರಿ ಜಮೀನಿರಲಿಲ್ಲ; ಬೋರ್‌ವೆಲ್ ಹಾಕಿಸಿಕೊಳ್ಳುವಷ್ಟು ಹಣ ಇರಲಿಲ್ಲ. ಹಾಗಾಗಿ ವರ್ಷಕ್ಕೆ 8000 ರೂಪಾಯಿಗಳನ್ನು ಕೊಟ್ಟು ಪಕ್ಕದ ಹೊಲದಿಂದ ತನ್ನ ಬೆಳೆಗಳಿಗೆ ನೀರು ಪಡೆಯುತ್ತಿದ್ದ.

ನಿಜ ಹೇಳಬೇಕೆಂದರೆ ಸಹಕಾರಿ ಬ್ಯಾಂಕುಗಳಲ್ಲಿ ಸಾಲ ಸಿಗುವುದು ಒಂದಿಷ್ಟು ಹಣ ಇರುವ ಶ್ರೀಮಂತ ರೈತರಿಗೆ ಮಾತ್ರವೇ ಹೊರತು ಕೃಷ್ಣೇಗೌಡನಂತಹ ಬಡರೈತನಿಗಲ್ಲ. ಏಕೆಂದರೆ ಕೃಷ್ಣೇಗೌಡನಂತವರ ಹತ್ತಿರ ಲಂಚ ಕೊಡುವುದಕ್ಕೆ ಹಣವಿರುವುದಿಲ್ಲ; ಶಿಫಾರಸ್ಸು ಮಾಡಿಸುವುದಕ್ಕೆ ರಾಜಕೀಯ ಅಧಿಕಾರ ಇರುವುದಿಲ್ಲ ಎನ್ನುತ್ತಾರೆ ಊರಿನ ಬಡರೈತರು: ಅಷ್ಟೇ ಅಲ್ಲ "ರೈತನ ಹೊಲದಿಂದ ಕಬ್ಬನ್ನು ಫ್ಯಾಕ್ಟರಿಯವರು ತೆಗೆದುಕೊಂಡು ಹೋಗುವುದಕ್ಕೂ ಲಂಚ ಕೊಡಬೇಕು. ಇಲ್ಲವೇ ರಾಜಕೀಯ ಪಕ್ಷಗಳ ನಾಯಕರಿಂದ ಶಿಫಾರಸ್ಸುಗಳನ್ನು ಮಾಡಿಸಬೇಕು. ಇವೆರಡೂ ಇಲ್ಲದ ಕೃಷ್ಣೇಗೌಡನಂತಹ ರೈತರಿಗೆ ಉಳಿದಿರುವ ದಾರಿ ಆತ್ಮಹತ್ಯೆಯೊಂದೆ" ಎಂದು ನೋವಿನಿಂದ ಮಾತನಾಡುತ್ತಾರೆ ಈ ಹಳ್ಳಿಯ ಬಡರೈತರು. ಕೃಷ್ಣೇಗೌಡನ ಹೆಂಡತಿ ಬೇರೆಯವರ ಹೊಲದಲ್ಲಿ ದಿನಕ್ಕೆ 40 ರೂಪಾಯಿಯಂತೆ ದಿನಗೂಲಿ ಆಧಾರದಲ್ಲಿ ಕಬ್ಬು ಕಟಾವಿಗೆ ಹೋಗುತ್ತಾಳೆ. ಇವರ ಮಗಳು ಸುವರ್ಣ ಬೆಂಗಳೂರಿನ ಗಾರ್ಮೆಂಟ್ ಫ್ಯಾಕ್ಟರಿಯೊಂದರಲ್ಲಿ ದಿನಕ್ಕೆ ನೂರು ರೂಪಾಯಿಯಂತೆ ಕೆಲಸ ಮಾಡುತ್ತಾಳೆ. ಚಿಕ್ಕವಳಾದ ಇಂದಿರ ಇನ್ನೂ ಶಾಲೆಯಲ್ಲಿ ಓದುತ್ತಿದ್ದಾಳೆ. ಈ ಊರಿನ ಬಡರೈತರನ್ನು ಗಮನಿಸಿದರೆ ಹೆಚ್ಚು ಕಡಿಮೆ ಎಲ್ಲರೂ ಕೃಷ್ಣೇಗೌಡನಷ್ಟೇ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಒಂದಲ್ಲಾ ಒಂದು ದಿನ ಅವರೂ ನೇಣಿಗೆ ಕೊರಳೊಡ್ಡಿದರೆ ಆಶ್ಚರ್ಯವಿಲ್ಲ, ಹಾಗಿದೆ ಅವರ ಬದುಕು.

4. ಗೊಂದಿಹಳ್ಳಿ, ಜೂನ್ 9, 2007: ಈ ಹಳ್ಳಿಯ ಜಿ. ನಂಜೆಗೌಡ ಎಂಬ 45 ವರ್ಷದ ರೈತನಿಗೆ ಸಹಕಾರಿ ಬ್ಯಾಂಕಿನಲ್ಲಿ 11 ಸಾವಿರ ಸಾಲವಿತ್ತು. ಆದರೆ ಅದಲ್ಲದೇ ಆತ ಸುಮಾರು 70 ಸಾವಿರದಷ್ಟು ಕೈಸಾಲ ಮಾಡಿಕೊಂಡಿದ್ದ. ಹಲವು ವರ್ಷಗಳ ಬರಗಾಲ ಆತನ ಕುಟುಂಬವನ್ನಾಗಲೇ ವಿನಾಶದ ಅಂಚಿಗೆ ತಳ್ಳಿಬಿಟ್ಟಿತ್ತು. ಆತನಿಗೆ ಒಂದೂವರೆ ಎಕರೆ ಜಮೀನಿತ್ತು. ಮಳೆಯನ್ನು ನಂಬಿದರೆ ಆಗುವುದಿಲ್ಲ ಎಂದುಕೊಂಡು ಒಂದು ಬೋರ್‌ವೆಲ್ ಕೊರೆಸಿದರೆ ಅದು ನೀರು ಬೀಳದೆ ಕೈಕೊಟ್ಟಿತು. ಮತ್ತೊಂದನ್ನು ಕೊರೆಸಿದರೆ ಅದೂ ನೀರು ಬಾರದೆ ಫೇಲ್ ಆಯಿತು. ಆಗ ಅನಿವಾರ್ಯವಾಗಿ ಮೂರನೇ ಬೋರ್‌ವೆಲ್ ಕೊರೆಸಿದ. ಆದರೆ ದುರಂತ ಎಂದರೆ, ಅದೂ ಕೈಕೊಟ್ಟಿತು. ಇದಾದ ಕೆಲವೇ ದಿನಗಳಲ್ಲಿ ಜೂನ್ 9ರಂದು ಆತ ಆ ಬೋರ್‌ವೆಲ್‌ನ ಪಕ್ಕದಲ್ಲಿಯೇ ಕ್ರಿಮಿನಾಶಕ ಕುಡಿದು ಆತ್ಮಹತ್ಯೆ ಮಾಡಿಕೊಂಡ.



ಬಡರೈತರಿಗೆ ಮುಖ್ಯಮಂತ್ರಿಗಳ ಪುಗಸಟ್ಟೆ ಭರವಸೆ

ಈತನಿಗೂ ಸಾಲಮನ್ನಾ ಯೋಜನೆಯಿಂದ ಕಿಂಚಿತ್ತೂ ಲಾಭವಾಗಲಿಲ್ಲ. ಏಕೆಂದರೆ ಹಳೆಯ ಸಾಲವನ್ನು ಕಟ್ಟುವವರಿಗೆ ಮಾತ್ರ ಈ ಯೋಜನೆ ಅನ್ವಯಿಸುತ್ತದೆ. ಆದರೆ ನಂಜೇಗೌಡ ಅದನ್ನು ಕಟ್ಟುವ ಸ್ಥಿತಿಯಲ್ಲಿರಲಿಲ್ಲ. ಆದರೆ ಆತನಿಗೆ ಕಬ್ಬು ಬೆಳೆಯಲು ಪರ್ಮಿಟ್ ಸಿಕ್ಕಿತ್ತಾದರೂ ಅದಕ್ಕೆ ನೀರಿರಲಿಲ್ಲ.

ನಂಜೇಗೌಡನ ಒಬ್ಬನೇ ಮಗ ಧರ್ಮ ದಿನಗೂಲಿ ಕೃಷಿ ಕಾರ್ಮಿಕನಾಗಿ ಬೇರೆಯವರ ಹೊಲಕ್ಕೆ ಕೆಲಸಕ್ಕೆ ಹೋಗುತ್ತಾನೆ. ಈತನ ಮೂರು ಮಕ್ಕಳಲ್ಲಿ ಒಂದು ಹೆಣ್ಣು ಮಗು ಅಂಗವಿಕಲ. ನಂಜೇಗೌಡ ಈ ಮೊಮ್ಮಗಳಿಗೆ ಚಿಕಿತ್ಸೆ ಕೊಡಿಸುವುದಕ್ಕಾಗಿ ಬಹಳಷ್ಟು ಹಣ ಮತ್ತು ಸಮಯವನ್ನು ವೆಚ್ಚ ಮಾಡಿದ. ಆದರೆ ಅದೆಲ್ಲವೂ ವ್ಯರ್ಥವಾಯಿತು. ಹೇಮಾವತಿ ನದಿ ಈ ಹಳ್ಳಿಯ ಕೂಗಳತೆಯಷ್ಟು ದೂರದಲ್ಲಿ ಹರಿಯುತ್ತದೆ. ಆದರೆ ನ... ಗೌಡನಂತಹ ಬಡ ರೈತರ ಹೊಲಕ್ಕೆ ಅದು ಎಂ... ನೀರುಣಿಸಿಲ್ಲ.

ಅಷ್ಟೋ ಇಷ್ಟೋ ಕಬ್ಬು ಬೆಳೆದು ಹೇಗೋ ಫ್ಯಾ... ಸಾಗಿಸೋಣವೆಂದರೆ ಟ್ರ್ಯಾಕ್ಟರ್‌ನವರು ಕಬ್ಬನ್ನು ಫ್ಯಾ... ಸಾಗಿಸುವುದಕ್ಕೆ ಲಂಚ ಕೇಳುತ್ತಾರೆ. ಹೀಗಾಗಿ ಫ್ಯಾ... ಕಬ್ಬು ಸಾಗಿಸುವುದಕ್ಕೆ ರೈತರಲ್ಲಿಯೇ ಪೈಪೋಟಿ ನಡೆಯು... ಯಾರ ಹತ್ತಿರ ಹಣವಿರುತ್ತದೆಯೋ ಅವರ ಕಬ್ಬು ಸರಾಗ... ಫ್ಯಾಕ್ಟರಿ ಸೇರುತ್ತದೆ. ಹಣವಿಲ್ಲದ ರೈತರ ... ಗದ್ದೆಯಲ್ಲಿಯೋ ಅಥವಾ ರಸ್ತೆ ಬದಿಯಲ್ಲೋ ಒಣಗ... ಹೋಗುತ್ತದೆ. ಹೀಗೆ ಬಡರೈತರ ಕಬ್ಬು ಕಳೆದ ... ರಿಂದ 22 ತಿಂಗಳುಗಳ ತನಕ ಗದ್ದೆಯಲ್ಲಿಯೇ ಒಣಗ... ನಿಂತಿದೆ. ಈಗ ಒಂದು ವೇಳೆ ಅದನ್ನು ಫ್ಯಾಕ್ಟರಿಗೆ ಸಾಗಿ... ಅವಕಾಶ ದೊರೆತರೂ ಕಬ್ಬು ಒಣಗಿ ಕಡ್ಡಿಯಾದಂತಾ... ವುದರಿಂದ ಅರ್ಧಕ್ಕಿಂತಲೂ ಕಡಿಮೆ ತೂಗುತ್ತದೆ. ಅ... ಕಟಾವು ಮಾಡಿಸಿದ ಮತ್ತು ಫ್ಯಾಕ್ಟರಿಗೆ ಸಾಗಿಸಿದ ಖ... ಕೂಡ ಸಿಗುವುದಿಲ್ಲ.

ಈ ಹಳ್ಳಿಯ ಇನ್ನೊಂದು ಸಮಸ್ಯೆ ಎಂ... ಪಕ್ಕದಲ್ಲಿಯೇ ಹೇಮಾವತಿ ನದಿ ಹರಿಯುವುದರಿ... ಮಳೆಗಾಲದಲ್ಲಿ ಪ್ರತಿ ಮನೆಯೂ ಜೌಗಿನಿಂದ ಹ... ಆಗಿರುತ್ತದೆ. ಹೀಗಾಗಿ ಪ್ರತಿಯೊಬ್ಬರಿಗೂ ... ಮಲೇರಿಯಾ ರೋಗ ಸಾಮಾನ್ಯ... ಬಂದೇ ಬರುತ್ತದೆ. ನಿಜಹೇಳಬೇಕೆಂ... ಈ ಹಳ್ಳಿಯನ್ನು ಮಲೇರಿಯ ... ಹಳ್ಳಿ ಎಂದೇ ಕರೆಯಲಾಗುತ್ತದೆ.

ಇವು ಕೇವಲ ನಾಲ್ಕು ಸ್ಯಾಂಪಲ್... ಕರ್ನಾಟಕದ ಬಹುತೇಕ ಹಳ್ಳಿಗಳ ಚಿ... ಇದಕ್ಕಿಂತ ಬೇರೆಯಾಗಿಯೇನೂ ... ಇದಕ್ಕಿಂತ ಭೀಕರವಾಗಿರಬಹುದ... ರೈತರೊಡನೆ ಸಂವಾದ ನಾಟಕ ನ... ನಂತರ ರಾಜ್ಯದಲ್ಲಿ ರೈತರು ಆತ್ಮ... ಮಾಡಿಕೊಂಡಿದ್ದಾರೆ. ಈವರೆಗೆ ನಡೆದಿ... ರೈತರ ಆತ್ಮಹತ್ಯೆಗಳೆಲ್ಲವೂ ಸರ್ಕಾ... ಮಾಡಿರುವ ಕಗ್ಗೊಲೆಗಳೇ ಎಂಬುದ... ಯಾವ ಅನುಮಾನವೂ ಉಳಿಯುವು... ಎಲ್ಲರಿಗೂ ಅನ್ನಹಾಕಿದ ಅನ್ನದಾತ ಅನ್... ಗತಿ ಇಲ್ಲದೇ ನೇಣಿಗೆ ಕೊರಳೊಡ್ಡು... ವುದು ರೈತದೇಶ ಭರತಖಂಡದ ದು...

ಮಣ್ಣಿನ ಮೊಮ್ಮಗನ ಭರವಸೆ... ಆಶ್ವಾಸನೆಗಳು, ವಾಗ್ದಾನಗಳು ಗಾಯದ ಮೇಲೆ ... ಹಾಕಿದಂತೆ ಸರ್ಕಾರದ 'ರೈತರ ಸಾಲ ಮ... ಯೋಜನೆ'ಗಳು ಎಲ್ಲ ರಾಜಕಾರಣಿಗಳಿಗೂ, ರಾಜಕೀ... ಪಕ್ಷಗಳಿಗೂ ರೈತರ ಸಮಸ್ಯೆಗಳೇ ಬಂಡವಾಳವಾಗಿರು... ಅವುಗಳ ಬಗ್ಗೆ ಕೇವಲ ಎಲ್ಲರೂ ಬಾಯ್ಮಾತಿನಲ್ಲಿ ... ಸವರುತ್ತಿರುವಾಗ ಪಾಪ ಬಡರೈತರು ಕುಮಾರಸ್ವಾಮಿ... ಪೊಳ್ಳು ಭರವಸೆಗಳನ್ನು ನಂಬುವುದಾದರೂ ಹೇಗೆ...

ಆದರೆ 'ಸಮಸ್ಯೆಗೆ ಪರಿಹಾರ ಆತ್ಮಹತ್ಯೆಯ... ಆತ್ಮಸ್ಥೈರ್ಯ' ಎಂದು ಸರ್ಕಾರ ಜಾಹಿರಾತು ... ಹಾಕಿಸುತ್ತಿದೆ. ವಾಸ್ತವದಲ್ಲಿ ಖುದ್ದು ಕೊಲೆಗಡುಕರೇ ರೈ... ಇಂತಹ ಬುದ್ಧಿವಾದಗಳನ್ನು ಹೇಳುತ್ತಿದ್ದಾರೆ. ಹ... ಸಮಸ್ಯೆಗೆ ಪರಿಹಾರ ಆತ್ಮಹತ್ಯೆಯಂತೂ ಅಲ್ಲ. ಈ ... ಕೊಲೆಗಡುಕ ರಾಜಕಾರಣಿಗಳ ವಿರುದ್ಧ ಸಂಘ... ಹೋರಾಟವೊಂದೇ ಸಮಸ್ಯೆಗಿರುವ ಪರಿಹಾರ. ... ನಿಟ್ಟಿನಲ್ಲಿ ರೈತ ಸಂಘಟನೆಗಳು ಮತ್ತು ರೈತರು ... ಇಡಬೇಕಿರುವುದು ಇಂದಿನ ಅಗತ್ಯ ಮಾತ್ರವಲ್ಲ ... ವಾರ್ಯ ಕೂಡ.

ಕುಮಾರ್ ಬುರಡಿಕಟ್ಟಿ (ಸಂಗ್ರ...

ಭೂಮಿಗಾಗಿ ಹೀಗೊಂದು ಹೋರಾಟ

ಕುಟುಂಬದ ಒಳಜಗಳ ಹಾಗೂ ಅಸ್ಥಿರತೆಯನ್ನು ...ಕೊಂಡು ಹಿತ್ತೈಷಿಗಳಂತೆ ನಾಟಕವಾಡುತ್ತಲೇ ಐಕ್ಯತೆ...ನ್ನು ನಾಶಮಾಡಿ, ಇಡೀ ಕುಟುಂಬದ ಆಸ್ತಿಯನ್ನು ...ಳಿಸುವ ಹಣವಂತರ ಕುತಂತ್ರಗಳು ದಿನನಿತ್ಯ ...ಯುತ್ತಲೇ ಇರುತ್ತವೆ. ಇವರ ಕುತಂತ್ರಕ್ಕೆ ಬಲಿಯಾದ ...ಟುಂಬದ ಸದಸ್ಯರುಗಳು ಬೀದಿಗೆ ಬೀಳುವುದಲ್ಲದೆ ...ಸ್ಪರ ಶಾಶ್ವತ ಶತ್ರುಗಳಾಗಿ ದ್ವೇಷವನ್ನು ಕಾರಿಕೊಂಡು ...ದಾದಿ ಸಾಯುವ ಹಂತವನ್ನು ತಲುಪುತ್ತಾರೆ ಇಲ್ಲವೆ ...ವನ ಪರ್ಯಂತ ಕೋರ್ಟುಗಳಿಗೆ ಅಲೆದು ವಕೀಲರ ...ಡತಿಗೆ ರೇಶ್ಮೆ ಸೀರೆ ಕೊಡಿಸುತ್ತಾ ತಮ್ಮ ಬದುಕನ್ನು ...ಮುಮಾಡಿಕೊಳ್ಳುತ್ತಾರೆ.

ಕುತಂತ್ರಿಯೊಬ್ಬನನ್ನು ಮನೆಯೊಳಕ್ಕೆ ಬಿಟ್ಟುಕೊಂಡು, ...ಹಾಯಕ ಪರಿಸ್ಥಿತಿಯಲ್ಲಿ ಅವನಿಂದ ಕೆಲವು ...ಾಯಗಳನ್ನು ಪಡೆಯುವ ಮೂಲಕ ಅವನಿಂದಲೇ ... ಕಬಳಿಕೆಗೆ ಗುರಿಯಾದ ಘಟನೆ ದಾವಣಗೆರೆಯ ...ಜನೇಯ ಮಿಲ್ ಬಡಾವಣೆಯಲ್ಲಿ ನಡೆದಿದೆ. ...ಂಗತ ಅಜ್ಜಪ್ಪನವರ ಮಕ್ಕಳಾದ ಶಿವಕುಮಾರ ಕಂಠಿ ...ತ್ತು ವಿಶ್ವಾಸ ಕಂಠಿ ಎಂಬ ಅಣ್ಣತಮ್ಮಂದಿರು ಜಂಬಣ್ಣ ...ಬ ನಯವಂಚಕನ ವಿಶ್ವಾಸ ದ್ರೋಹಕ್ಕೆ ಬಲಿಯಾಗಿ ...ನ್ನ ಭೂಮಿಯನ್ನು ಕಳೆದುಕೊಂಡು ಬೀದಿಗೆ ...ದ್ದಾರೆ. ಇವರ ತಂಗಿ ದೀಪಾಕಂಠಿ ಎಂಬಾಕೆ ...ಏನನ್ನು ಬೇಕಾಬಿಟ್ಟಿ ಮಾರಿಕೊಂಡು ಇಡೀ ಊರಿನ ...ಮಾರಿಗೆ ಗುರಿಯಾಗಿದ್ದಾಳೆ. ಆದರೆ ...ಕಬಳಿಕೆಗೆ ಗುರಿಯಾದ ಕುಟುಂಬವು ...ಟ್ಟಕುಳಿತುಕೊಳ್ಳದೆ ಒಂದುಕಡೆ ...ನೂನುಬದ್ಧ ಹೋರಾಟ ನಡೆಸುತ್ತಾ ...ನ್ನೊಂದು ಕಡೆ ಇಡೀ ಊರಿನ ಸಹ...ದೊಂದಿಗೆ ರೈತ ಸಂಘಟನೆಗಳು ಹಾಗೂ ಪ್ರಗತಿ...ರೊಂದಿಗೆ ಸೇರಿ ಕಳೆದುಕೊಂಡಿರುವ ಭೂಮಿಯನ್ನು ಪಡೆಯಲು ಪ್ರತಿಭಟನೆಗಿಳಿದಿರುವುದು ಇದೇರೀತಿ ...ಸ್ಯಯಕ್ಕೊಳಗಾದ ಇತರರಿಗೂ ಮಾದರಿಯಾಗು...ತಿದೆ.

ದಾವಣಗೆರೆ

ಅಜ್ಜಪ್ಪನ ಕುಟುಂಬ

...ಕುಟುಂಬದ ಯಜಮಾನ ಅಜ್ಜಪ್ಪ ಸಂಗಜ್ಜಿ ಎಂಬಾ...ದತ್ತು ಮಗ. ದಾವಣಗೆರೆ ಎಂಸಿಸಿ 'ಎ' ಬ್ಲಾಕ್‌ನಲ್ಲಿನ ...K60 ಸೈಟನಲ್ಲಿನ ಮನೆ ಮತ್ತು ಆರು ಎಕರೆ ...ಭೂಮಿಯನ್ನು ಸಂಗಜ್ಜಿ ತನ್ನ ಮೊಮ್ಮಕ್ಕಳಾದ ...ಕುಮಾರ ಕಂಠಿ ಮತ್ತು ವಿಶ್ವಾಸ ಕಂಠಿ ಹೆಸರಿಗೆ ...ಡಿಸಿದ್ದಳು. ಇದರ ಹೊರತಾಗಿ ಅಜ್ಜಪ್ಪ 6.10 ...ರೆ ನೀರಾವರಿ ಭೂಮಿಯನ್ನು ಸ್ವಯಾರ್ಜಿತವಾಗಿ ...ದ್ದರು. ಈತ ತನ್ನ ಇಬ್ಬರು ಗಂಡುಮಕ್ಕಳೊಂದಿಗಿನ ...ನುಧಾನ ಹಾಗೂ ಮಗಳು ದೀಪಾಳ ಮದುವೆ ...ಡುತ್ತಾರೊ ಇಲ್ಲವೊ ಎಂಬ ಅಪನಂಬಿಕೆಯಿಂದ ... ಗಳಿಸಿದ್ದ 6.10 ಎಕರೆ ಜಮೀನನ್ನು ಮಗಳ ...ಿಗೆ (4.1.2001ರಂದು) ವಿಲ್ ಮಾಡಿಸಿದ್ದರು. ... ಜನರ ಮಧ್ಯಸ್ಥಿಕೆಯಿಂದ ದೀಪಾಳ ಅಣ್ಣಂದಿರು ... ಭಾಗಕ್ಕೆ ಬಂದಿರುವ ಆಸ್ತಿಯನ್ನು ಮಾರಿ ತಂಗಿಯ ...ುವೆಯನ್ನು ಮಾಡುವಂತೆ, ದೀಪಾ ತನ್ನ ಹೆಸರಿಗೆ ... ಮಾಡಿಸಿರುವ ಜಮೀನನ್ನು ಅಣ್ಣಂದಿರಿಗೆ ಬಿಟ್ಟು...ಕುವಂತೆ ತೀರ್ಮಾನವಾದಾಗ ಅಜ್ಜಪ್ಪ ಪುನಃ ತನ್ನ ...ುಮಕ್ಕಳ ಹೆಸರಿಗೆ ದಿನಾಂಕ 31.3.2001ರಂದು ...ಸ್ವಯಾರ್ಜಿತ ಆಸ್ತಿಯನ್ನು ಮರುವಿಲ್ ಮಾಡಿಸಿದರು. ...12.2001ರಂದು ಅಜ್ಜಪ್ಪ ಮರಣ ಹೊಂದಿದ ...ರ ಈ ಹಿಂದೆ ತೀರ್ಮಾನವಾದಂತೆ ದಾವಣಗೆರೆ...ದ್ದ ಮನೆಯನ್ನು 14.60ಲಕ್ಷ ರೂ. ಗಳಿಗೆ ಮಾರಿ ...ಯ ಮದುವೆಯನ್ನು ಕಂಠಿ ಸೋದರರು ...ಾರಿಯಾಗಿ ಮಾಡಿದರು. ಆದರೆ ಅಜ್ಜಪ್ಪ ತನ್ನ ... ಹೆಸರಿಗೆ ಮಾಡಿಸಿದ್ದ ವಿಲ್ ರಿಜಿಸ್ಟರ್ ಆಗಿತ್ತು. ...ುಮಕ್ಕಳ ಹೆಸರಿಗೆ ಮಾಡಿಸಿದ್ದ ವಿಲ್ ರಿಜಿಸ್ಟರ್ ...ಲಿಲ್ಲ, ಈ ಹಂತದಲ್ಲಿ ಅಜ್ಜಪ್ಪನ ಹೆಂಡತಿ ...ಮ್ಮನೂ 18.7.2003ರಂದು ... ಹೊಂದಿದ ಮೇಲೆ ಈ ...ುಂಬದ ಅನೈಕ್ಯತೆ ಹಾಗೂ ...ತೆಗಳನ್ನು ಹದ್ದಿನ ಕಣ್ಣಿಟ್ಟು ...ಡುತ್ತಿದ್ದ ಹುಲಿಕಟ್ಟೆ ಜಂಬಣ್ಣ ...ವಸು ಸಹಾಯಹಸ್ತ ನೀಡುವ ...ಲ್ಲಿ ಕುಟುಂಬ ವ್ಯವಹಾರಗಳಲ್ಲಿ ... ಪಡೆದುಕೊಂಡ. ದಿಕ್ಕು-ದೆಸೆ ... ಸಾಗುತ್ತಿದ್ದ ಶಿವಕುಮಾರ ... ಮತ್ತು ವಿಶ್ವಾಸ ಕಂಠಿಯವರ ...ುಂಬದ ಸದಸ್ಯಳಿಕೆಗಳು ಜಂಬಣ್ಣ...ಸರದಾನವಾದವು.

[illegible] ಬಲಿ [illegible] ಜಂಬಣ್ಣ

...ಬದ ಅಜ್ಜಪ್ಪ ಮಾಡಿದ ಸಾಲ ...ಮಕ್ಕಳ ಹೆಸರಿನಲ್ಲಿದ್ದ ಎರಡು

ಎಕರೆ ಜಮೀನನ್ನು ಜಂಬಣ್ಣ ಈಗಾಗಲೇ ಕೊಂಡು ಕೊಂಡಿದ್ದ, ಮತ್ತೆರಡು ಎಕರೆ ಜಮೀನನ್ನು ಬೇರೆಯವರಿಗೆ ಶಿವಕುಮಾರ್ ಹಾಗೂ ವಿಶ್ವಾಸ್ ಮಾರಿ ಕುಟುಂಬದ ಸಾಲವನ್ನು ತೀರಿಸಿದ್ದರು. ಉಳಿದದ್ದೆಂದರೆ ತಂಗಿಗೆ ವಿಲ್ ಬರೆದಿಟ್ಟಿದ್ದ ಜಮೀನು ಮಾತ್ರ. ದೀಪಾ ಕಂಠಿ ಹೆರಿಗೆಗೆಂದು ತವರಿಗೆ ಬಂದಿದ್ದಾಗ ಮನೆಯ ಖರ್ಚಿಗೆಂದು ಜಂಬಣ್ಣನ ಹತ್ತಿರ ಸಾಲ ಕೇಳಲು ಹೋದಾಗ ದೀಪಾಳ ಹೆಸರಿಗಿದ್ದ 6.10 ಎಕರೆ ಜಮೀನನ್ನು ಆಧಾರವಾಗಿ ಬರೆಸಿಕೊಂಡು 1 ಲಕ್ಷ ರೂ. ಸಾಲ ಕೊಟ್ಟಿದ್ದ. ಈ ಆಧಾರ ಪತ್ರಕ್ಕೆ 30.4.2005ರಂದು ಶಿವಕುಮಾರ್ ಹಾಗೂ ವಿಶ್ವಾಸರ ಸಹಿಗಳನ್ನೂ ಪಡೆದಿದ್ದ. ಕಂಠಿ ಸಹೋದರರು ಈ ಸಾಲವನ್ನು ತೀರಿಸಿದ್ದರೂ ಸಹ ಫಲವತ್ತಾದ ಭೂಮಿಯನ್ನು ಕಬಳಿಸುವ ಸಂಚನ್ನು ಹೊಂದಿದ್ದ ಜಂಬಣ್ಣ ದೀಪಾಳ ಮನೆಗೆ ಹೋಗಿ ಆಕೆಯ ತಲೆ ಕೆಡಿಸಲು ಪ್ರಾರಂಭಿಸಿದ. ತನ್ನ ಅಣ್ಣಂದಿರು ತನ್ನ ಮದುವೆಗಾಗಿ ತಮ್ಮ ಆಸ್ತಿಯನ್ನು ಮಾರಿಕೊಂಡಿದ್ದರ ಬಗ್ಗೆ ಕೃತಜ್ಞತೆಯಿಂದಿದ್ದ ದೀಪಾ ತನ್ನ ಅತ್ತೆಯ ಮನೆ ಕಡೆಯವರ ಹಾಗೂ ಜಂಬಣ್ಣನ ತಂತ್ರಗಳಿಗೆ ಸೋತುಹೋದಳು. ರೋಣ ತಾಲ್ಲೂಕು ಸೂಡಿ ಗ್ರಾಮದಲ್ಲಿ ತನ್ನ ಗಂಡನ ಮನೆಯಲ್ಲಿದ್ದ ದೀಪಾಳನ್ನು ಮತ್ತು ಆಕೆಯ ಗಂಡ ವಿಜಯ ಗಂಗಾಧರ ವಕ್ಕಲರನನ್ನೂ ದಾವಣಗೆರೆಯ ವಸತಿ ಗೃಹವೊಂದಕ್ಕೆ ಕರೆಸಿಕೊಂಡು ದೀಪಾಳ ಸಹೋದರರಿಗೆ ಗೊತ್ತಾಗದಂತೆ ಜಾಗ್ರತೆ ವಹಿಸಿ ಕಡಿಮೆ ಎಂದರೂ 48 ಲಕ್ಷ ರೂ. ಬೆಲೆ ಬಾಳುತ್ತಿದ್ದ 6.10 ಜಮೀನನ್ನು ಕೇವಲ 11.32 ಲಕ್ಷ ರೂ.ಗಳಿಗೆ ಕೊಂಡುಕೊಂಡ ಜಂಬಣ್ಣ ಕಳ್ಳದಾರಿಯಲ್ಲಿ ರಿಜಿಸ್ಟರ್ ಕೂಡಾ ಮಾಡಿಸಿಕೊಂಡುಬಿಟ್ಟ. ತಾವು ನೆಲೆ ನಿಂತಿರುವ ಭೂಮಿಯನ್ನು ಕಳೆದುಕೊಂಡಿದ್ದೇವೆಂಬ

ಚಂದ್ರಶೇಖರ ತೋರಣಘಟ್ಟ

ಯಾವ ಸೂಚನೆಯೂ ಇಲ್ಲದೆ ತೋಟದಲ್ಲಿನ ಕಾಯಿ ಕೆಡವುತ್ತಿದ್ದಾಗ ಜಂಬಣ್ಣನ ಸೋದರರು ಬಂದು ತಡೆ ಹಾಕಿ 'ಈ ಜಮೀನು ನಮ್ಮದು' ಎಂದಾಗಲೇ ಕಂಠಿ ಸಹೋದರರಿಗೆ ಸಿಡಿಲು ಬಡಿದಂತಾಗಿದ್ದು.

ಪ್ರತಿಭಟನೆ ಗರಿಗೆದರಿದ್ದು

ಜಂಬಣ್ಣ ಈಗ ಕೊಂಡು ಕೊಂಡಿದ್ದೇನೆಂದು ಹೇಳುತ್ತಿರುವ ಜಮೀನಿನಲ್ಲೇ ಅಜ್ಜಪ್ಪನ ಕುಟುಂಬವು ಬಹಳ ಹಿಂದಿನಿಂದಲೂ ಮನೆಕಟ್ಟಿಕೊಂಡು ವಾಸಿಸುತ್ತಿರುವುದರಿಂದ ಹೊಲ ಉಳುಮೆ ಮಾಡಲು ಬಂದ ಜಂಬಣ್ಣನ ತಮ್ಮಂದಿರು ಮತ್ತು ಕೂಲಿಯಾಳುಗಳ ಹೆಸರಿನ ಗೂಂಡಾಗಳನ್ನು ಆವರಗೆರೆ ರುದ್ರಮುನಿಯವರ ನೇತೃತ್ವದಲ್ಲಿ ಟ್ರ್ಯಾಕ್ಟರಿಗೆ ಅಡ್ಡಮಲಗಿ ತಡೆಹಿಡಿದಿದ್ದಾರೆ. ಮನೆಯಲ್ಲಿ ಗಂಡಸರಿಲ್ಲದಿದ್ದಾಗ ಜಂಬಣ್ಣನ ತಮ್ಮಂದಿರಾದ ಚಂದ್ರೇಶಿ ಮತ್ತು ರುದ್ರೇಶಿ ಶಿವಕುಮಾರ ಕಂಠಿಯವರ ಪತ್ನಿಯ ಮೇಲೆ ಹಲ್ಲೆ ನಡೆಸಿ ಬಟ್ಟೆಗಳನ್ನು ಹರಿದುಹಾಕಿದ್ದಾರೆ. ನೀರಿಗಾಗಿ ಆಶ್ರಯಿಸಿದ್ದ ಬೋರ್‌ವೆಲ್‌ನ ವೈರ್‌ಗಳನ್ನು ಕಿತ್ತೆಸೆದಿದ್ದಾರೆ. ಜಂಬಣ್ಣ ಮತ್ತು ಅವನ ಗೂಂಡಾ ತಮ್ಮಂದಿರು ಏನೆಲ್ಲ ಚಿತ್ರಹಿಂಸೆಗಳನ್ನು ಕೊಟ್ಟರೂ ಕಂಠಿಯವರ ಕುಟುಂಬ ಭೂಮಿ ಬಿಟ್ಟು ಕದಲಲಿಲ್ಲ, ಈಗಲೂ ಭೂಮಿಯನ್ನು ಸ್ವಾಧೀನದಲ್ಲಿಟ್ಟು ಕೊಂಡಿದೆ.



ತಮ್ಮ ಭೂಮಿಗಾಗಿ ಹೋರಾಟ ಮಾಡುತ್ತಿರುವ ಶಿವಕುಮಾರ್ ಕಂಠಿ ಮತ್ತು ವಿಶ್ವಾಸ ಕಂಠಿ

ರೋಣದ ಸೂಡಿ ಗ್ರಾಮದಲ್ಲಿ ಧರಣಿ

ಜಮೀನನ್ನು ಕಡಿಮೆ ಬೆಲೆಗೆ ಮಾರಿಕೊಂಡಿದ್ದ ತಂಗಿ ದೀಪಾಳ ಹತ್ತಿರ ಆವರಗೆರೆ ರುದ್ರಮುನಿ ಮತ್ತು ದೀಪಾಳ ಅಣ್ಣಂದಿರು ಮಾತನಾಡಲು ಹೋದಾಗ ದೀಪಾಳ ಅತ್ತೆ ತನ್ನ ಕಾಂಗ್ರೆಸ್ ಲೀಡರುಗಿರಿಯನ್ನೆಲ್ಲಾ ಬಳಸಿ ಇವರಿಗೆ ರೋಪು ಹೊಡೆದಿದ್ದಾಳೆ. ಅತ್ತೆಯ ಮಾತಿಗೆ ಎದುರಾಡುವ ಎದೆಗಾರಿಕೆಯನ್ನು ದೀಪಾ ತೋರಿಲ್ಲ, ಅಕ್ರಮವಾಗಿ ಭೂಮಿಯನ್ನು ಮಾರಿಕೊಂಡಿ



ರೈತರ ಜಾಥಾ

ದ್ದನ್ನು ಒಪ್ಪಿಕೊಂಡು ತಮ್ಮನ್ನು ಬೆಂಬಲಿಸಲು ಕಂಠಿ ಸೋದರರು ಕೇಳಿಕೊಂಡರೂ ದೀಪಾಳ ಅತ್ತೆ ಮನೆಯವರು ಇದಕ್ಕೆ ಸಮ್ಮತಿಸದೇ ಇದ್ದಾಗ ಆವರಗೆರೆ ರುದ್ರಮುನಿ, ಮಲ್ಲಿಕಾರ್ಜುನ ಮತ್ತು ವಿಶ್ವಾಸ ಕಂಠಿಯವರ ಪತ್ನಿಯರು ಮತ್ತು ಮಕ್ಕಳು ಊರ ಮುಂದಿನ ದೇವಸ್ಥಾನದ ಮುಂದೆ ಧರಣಿ ಪ್ರಾರಂಭಿಸಿ ತಮಗಾದ ಅನ್ಯಾಯದ ಬಗ್ಗೆ ಕರಪತ್ರಗಳನ್ನು ವಿತರಿಸಿದಾಗ ಹೋರಾಟಕ್ಕೆ ಮತ್ತಷ್ಟು ಖದರು ಬರಲಾರಂಭಿಸಿದೆ. ಸೂಡಿ ಗ್ರಾಮದ ಜನರು ನಡೆದಿರುವ ಅನ್ಯಾಯವನ್ನು ತಿಳಿದುಕೊಂಡು ದೀಪಾಳ ಅತ್ತೆ ಮತ್ತು ಗಂಡನಿಗೆ ನೀರಿಳಿಸಿದಾಗ ದೀಪಾ ಹಾಗೂ ಆಕೆಯ ಗಂಡ ವಿಜಯ ಗಂಗಾಧರ ವಕ್ಕಲರ ಅಕ್ರಮವೆಸಗಿರುವುದನ್ನು ಒಪ್ಪಿಕೊಂಡು ಪತ್ರವನ್ನು ಬರೆದುಕೊಟ್ಟಿದ್ದಲ್ಲದೆ ಜಮೀನು ಕ್ರಯ ನಡೆಸುವಾಗ ಜಂಬಣ್ಣ ನಡೆಸಿದ ಕುತಂತ್ರಗಳನ್ನೂ ದೀಪಾ ಬಯಲಿಗಿಟ್ಟಿದ್ದಾಳೆ.

ಜಮೀನಿನ ದಾಖಲೆಗಳು ಜಂಬಣ್ಣನ ಹೆಸರಿಗೆ ವರ್ಗಾವಣೆಯಾಗುವುದನ್ನು ವಿರೋಧಿಸಿ ರಿಟ್ ಅರ್ಜಿಯನ್ನು ಹಾಕಿದ ಮೇಲೂ ದಾಖಲೆಗಳು ಜಂಬಣ್ಣನ ಹೆಸರಿಗೆ ವರ್ಗಾವಣೆಯಾಗಿವೆ. ಲಂಚಕೋರ ರೆವಿನ್ಯೂ ಅಧಿಕಾರಿಗಳು ದೀಪಾಳ ಅಣ್ಣಂದಿರ ಮನವಿ, ಪ್ರತಿಭಟನೆ ರಿಟ್ ಅರ್ಜಿ ಇವಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಜಂಬಣ್ಣನ ಎಂಜಲಿನಲ್ಲಿ ಕೊಬ್ಬಿಹೋಗಿದ್ದಾರೆ. ತಿನ್ನುವ ತಾಂಬೂಲಕ್ಕಾಗಿ ಕಾನೂನನ್ನು ಮಾರಿರುವ ಇವರು ಇದೇ ತಾಂಬೂಲಕ್ಕಾಗಿ ಕಾನೂನನ್ನು ಎತ್ತಿ ಹಿಡಿದಿದ್ದಾರೆ.

ಭೂಮಿ ಕೊಡಿ- ಇಲ್ಲವೆ ಸಾಯಲು ಬಿಡಿ

ಒಂದು ಕಡೆ ಜಂಬಣ್ಣ ಇನ್ನೊಂದು ಕಡೆ ಕಂದಾಯ ಇಲಾಖೆಯಿಂದ ಘೋರವಾದ ಮೋಸಕ್ಕೊಳಗಾಗಿದ್ದರೂ ಧೃತಿಗೆಡದೆ ಕಂಠಿ ಸಹೋದರರು ರೈತ ಸಂಘಟನೆ, ಪ್ರಗತಿಪರರನ್ನು ಒಟ್ಟುಮಾಡಿಕೊಂಡು ಸಮಸ್ಯೆ ಬಗೆಹರಿಯುವವರೆಗೂ ಹೋರಾಟವನ್ನು ಮುಂದುವರೆಸುವ ಯೋಜನೆಯನ್ನು ರೂಪಿಸಿಕೊಂಡು 'ಭೂಮಿ ಕೊಡಿ ಇಲ್ಲವೆ ಸಾಯಲು ಬಿಡಿ' ಎಂಬ ಘೋಷಣೆಯೊಂದಿಗೆ ದಿನಾಂಕ 3.6.2007 ರಿಂದ ಆಂಜನೇಯ ಮಿಲ್ ಬಡಾವಣೆಯ ಮುಖ್ಯ ರಸ್ತೆಯ ಪಕ್ಕದಲ್ಲೇ ಅನಿರ್ದಿಷ್ಟ ಕಾಲ ಧರಣಿಯನ್ನು ಪ್ರಾರಂಭಿಸಿದ್ದಾರೆ. 11.6.2007ರಂದು ಧರಣಿ ನಡೆಸುತ್ತಿರುವ ಸ್ಥಳದಿಂದ ಏಳು ಕಿ.ಮೀ. ದೂರವಿರುವ ಜಿಲ್ಲಾಧಿಕಾರಿ ಕಚೇರಿಗೆ ಕಾಲ್ನಡಿಗೆ ಜಾಥಾವನ್ನು ಮಾಡಿ ಮನವಿ ಸಲ್ಲಿಸಿದ್ದಾರೆ. 13.6.2007ರಂದು ನಾಲ್ಕೈದು ಗಂಟೆಗಳ ಕಾಲ ಉರಿಬಿಸಿಲಿನಲ್ಲಿ ವಿವಿಧ ಸಂಘಟನೆಯವರೊಂದಿಗೆ ಕಂಠಿ ಕುಟುಂಬದ ಚಿಕ್ಕ ಮಕ್ಕಳೂ ಕೂಡಾ ಪ್ರತಿಭಟನೆ ಸಲ್ಲಿಸಿ ಅಂದು ದಾವಣಗೆರೆಗೆ ಬಂದಿದ್ದ ಉಪಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದಾರೆ. 15.6.2007ರಂದು ಧರಣಿ ಕುಳಿತಿರುವ ಸ್ಥಳದಿಂದ ಆನಗೋಡಿನ ರೈತ ಹುತಾತ್ಮರ ಸ್ತೂಪಕ್ಕೆ ಕಾಲ್ನಡಿಗೆ ಜಾಥಾವನ್ನು ಮಾಡಿ 16 ಕಿ.ಮೀ. ಅಂತರದಲ್ಲಿ ಬರುವ ಹಳ್ಳಿಗಳ ರೈತರ ಬೆಂಬಲವನ್ನು ಪಡೆದುಕೊಳ್ಳುವ ಯೋಜನೆಯನ್ನು ಹೊಂದಿದ್ದಾರೆ. ದಾವಣಗೆರೆಯ ಕೋರ್ಟು ಕಂಠಿ ಕುಟುಂಬವೇ ಸ್ವಾಧೀನದಲ್ಲಿಟ್ಟುಕೊಂಡಿರುವ ಭೂಮಿಯ ಯಥಾಸ್ಥಿತಿಯನ್ನು ಘೋಷಿಸಿದೆ.

ಕಳೆದ ಎರಡು ಮೂರು ತಿಂಗಳಿನಿಂದ ರೈತ ಸಂಘಟನೆಗಳು ಹಾಗೂ ಜನಪರ ಹೋರಾಟಗಾರರೊಂದಿಗೆ ಶಿವಕುಮಾರ ಕಂಠಿ ಮತ್ತು ವಿಶ್ವಾಸ ಕಂಠಿಯವರ ಕುಟುಂಬವು ಜಂಬಣ್ಣನ ಭೂ ಕಬಳಿಕೆಯ ವಿರುದ್ಧ ನಿರಂತರ ಪ್ರತಿಭಟನೆಗಳನ್ನು ಮಾಡುತ್ತಿದೆ. ಜಿಲ್ಲಾಡಳಿತವು ತಕ್ಷಣ ಎಚ್ಚೆತ್ತುಕೊಂಡು ವಿಶೇಷಾಧಿಕಾರಿಯನ್ನು ಈ ಸಂಬಂಧ ತನಿಖೆ ನಡೆಸಲು ನೇಮಿಸಿ ಭೂಮಿ ಕಳೆದುಕೊಂಡವರಿಗೆ ಭೂಮಿಯನ್ನು ಕೊಡಿಸದೇ ಇದ್ದರೆ ಪ್ರಾಣಹಾನಿಗಳಾಗುವ ಸಂಭವವಿದೆ. ಜಿಲ್ಲಾಡಳಿತವು ಮಾನವೀಯತೆಯ ದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕು.


ಯಾರು ಈ ಹುಲಿಕಟ್ಟೆ ಜಂಬಣ್ಣ

ಈತ 25 ವರ್ಷಗಳ ಹಿಂದೆ ಹುಲಿಕಟ್ಟೆ ಗ್ರಾಮದಿಂದ ಆಂಜನೇಯ ಮಿಲ್ ಬಡಾವಣೆಗೆ ಬರಿಗೈಲಿ ಬಂದವನು. ಈಗ ಹುಲಿಕಟ್ಟೆ ಗ್ರಾಮದಲ್ಲಿ 30 ಎಕರೆ ನೀರಾವರಿ ಭೂಮಿ, ಆಂಜನೇಯ ಮಿಲ್ ಬಡಾವಣೆಯಲ್ಲಿ 10 ಎಕರೆ ಅಡಿಕೆ ತೋಟ, 10 ಎಕರೆ ಭತ್ತದ ಗದ್ದೆ, ಎರಡು ಎಣ್ಣೆ ಅಂಗಡಿ, ಎರಡು ಕಿರಾಣಿ ಅಂಗಡಿ, ದಾವಣಗೆರೆಯ ಕೆ.ಬಿ. ಬಡಾವಣೆಯಲ್ಲಿ ಒಂದು ಬಿಲ್ಡಿಂಗ್, ದೋ ನಂಬರ್ ಕಡ್ಡಿ ಹಿಟ್ಟು ವ್ಯಾಪಾರ ನಡೆಸಲು ಎರಡು ಹಿಟ್ಟಿನ ಗಿರಣಿ ಇಟ್ಟುಕೊಂಡಿದ್ದಾನೆ. ಇವೆಲ್ಲದರ ಜೊತೆಗೆ ಬಿಜೆಪಿ ಮಂತ್ರಿ ಮಹಾಶಯರ ಸಖ್ಯದೊಂದಿಗೆ ಇವನು ಊರಿನ ಜನರನ್ನು ಕೀಳಾಗಿ ಕಾಣುತ್ತಲೇ ಇಡೀ ಊರಿನ ಜನರನ್ನೇ ದೂರ ಮಾಡಿಕೊಂಡಿದ್ದಾನೆ. ತನ್ನ ಆರು ಮಂದಿ ತಮ್ಮಂದಿರನ್ನು ತನ್ನ ಹಲ್ಕಾ ದಂಧೆಗಳಿಗಾಗಿ ಗೂಂಡಾಗಳಂತೆ ಬಳಸಿ ಕೊಳ್ಳುತ್ತಾನೆ. ■



'ಭೂಮಿ ಕೊಡಿ ಇಲ್ಲವೇ ಸಾಯಲು ಬಿಡಿ' ಎನ್ನುವ ಘೋಷಣೆಯೊಂದಿಗೆ ಪ್ರತಿಭಟಿಸುತ್ತಿರುವ ಕಂಠಿ ಕುಟುಂಬ

ವೈರಿಯೊಂದಿಗೆ ಮಲಗುವ ಒಂದೇ ಯುದ್ಧ ಭೂಮಿ ಮದುವೆ -ಅನಾಮಿಕ



ನೆರಳಾಗಿ ಕಾಡಿದ ಸಾವು

ಕೊಡಲಿಯ ಮೇಲೆ ನನಗೆ ಉತ್ತಮವಾದ ಹಿಡಿತವಿತ್ತು. ಆ ಕರಡಿಯ ಹಲ್ಲಿಗೆ ಹೊಡೆದು ಬಾಯಿ ಮುಕ್ಕಾದೀತು ಎಂಬ ಭಯವೂ ನನಗಿರಲಿಲ್ಲ. ಅತ್ಯಂತ ವಿಶ್ವಾಸದಿಂದ ದಾಳಿಯ ಅಂತರವನ್ನು ಕಾದಿಟ್ಟುಕೊಂಡು, ಕೊಡಲಿಯನ್ನು ಬೀಸಿ ಹೊಡೆದೆ. ಅದರ ಉಕ್ಕಿನ ಭಾಗ ಪೂರ್ತಿ ಕರಡಿಯ ತಲೆಯೊಳಕ್ಕೆ ತೂರಿದ್ದೇ ತಡ ಕರಡಿ ಸಾವಿಗೆ ಶರಣಾಗಿತ್ತು...

ಈ ಥರದ ಅದ್ವಾನದ ಶಿಕಾರಿಗಳಲ್ಲಿ ನನಗೆ ಅನುಭವ ವಿರಲಿಲ್ಲ. ಬೆಟ್ಟದ ನೆತ್ತಿಯತ್ತ ನಾನು ಓಡುತ್ತಲೇ ತಲೆಯನ್ನು ಸ್ವಲ್ಪ ಹಿಂತಿರುಗಿಸಿ, ಕರಡಿ ಇನ್ನೂ ಬರುತ್ತಿದೆಯೋ ಇಲ್ಲವೋ ಎಂದು ನೋಡಿದೆ. ಅದು ನೋಡಿದರೆ ನಮ್ಮ ಎದುರು ದಿಕ್ಕಿನ ಪ್ರಪಾತದತ್ತ ಓಡುತ್ತಿತ್ತು. ತಕ್ಷಣ ಒಂದು ಕೂಗು ಹಾಕಿದೆ. ನಮ್ಮವರೆಲ್ಲಾ ಮತ್ತೆ ವಿರುದ್ಧ ದಿಕ್ಕಿಗೆ ತಿರುಗಿ ಕರಡಿಯ ಬೆನ್ನು ಹತ್ತಿದರು. ಗಟ್ಟಿಯಾಗಿ ಕೂಗುತ್ತಾ... ಸಿಕ್ಕ ಸಿಕ್ಕ ಕಲ್ಲುಗಳನ್ನು ಎಸೆಯುತ್ತಾ ನರಕವೂ ನಾಚುವಷ್ಟು ಗದ್ದಲ ಮಾಡುತ್ತಾ.... ಓಡುತ್ತಿದ್ದಾರೆ. ಇವರು ಎಸೆದ ಅನೇಕ ಕಲ್ಲುಗಳು ಕರಡಿಯ ಆಯಕಟ್ಟಿನ ಜಾಗಕ್ಕೂ ಬೀಳುತ್ತಿವೆ. ಕಲ್ಲೇಟು ಬಿದ್ದಾಗಲೆಲ್ಲಾ ಕರಡಿ ಹಿಂತಿರುಗಿ, ಒಮ್ಮೆ ಭೋರ್ಗರೆಯುವಂತೆ ಗುಟುರು ಹಾಕಿ ಮತ್ತೆ ತಿರುಗಿ ಓಡುವುದು ನಡೆಯುತ್ತಿತ್ತು. ಹೀಗೆ ಓಡುತ್ತಾ ಓಡುತ್ತಾ ನಮಗಿಂತ ಸ್ವಲ್ಪ ಮುಂದಾದ ಕರಡಿ ಒಂದು ಹಿಮ್ಮುರಿ ತಿರುವಿನ ಬಳಿ ಇದ್ದಕ್ಕಿದ್ದಂತೆ ನಮ್ಮ ದೃಷ್ಟಿವಲಯ ದಿಂದ ಮಾಯವಾಯಿತು. ಸ್ವಲ್ಪ ಪ್ರಯತ್ನಿಸಿದ್ದರೆ ಅದರ ರಕ್ತದ ಜಾಡು ಹಿಡಿಯಬಹುದಿತ್ತು, ಆದರೆ ಅದು ಮಾಯವಾದ ಕಣಿವೆಯ ಜಾಗ ದೊಡ್ಡದೊಡ್ಡ ಬಂಡೆಗಳ ಪ್ರದರ್ಶನಾಲಯದಂತಿದ್ದು, ಉದ್ದಗಲಕ್ಕೂ ಆಳೆತ್ತರದ ಪೊದೆಗಳು ಗಿಡಿದುಕೊಂಡಿದ್ದವು. ಕರಡಿ ಈ ಯಾವುದರ ಹಿಂದೆ ಬೇಕಾದರೂ ಹೊಂಚುಹಾಕಿ ಅವಿತಿರಬಹುದಿತ್ತು. ನಾವೆಲ್ಲರೂ ದಿಬ್ಬದ ಎರಡೂ ಕಡೆಗೆ ದೃಷ್ಟಿ ಬೀರುತ್ತಾ ದಣಿವಾರಿಸಿಕೊಳ್ಳಲು ಕುಳಿತೆವು. ಸ್ವಲ್ಪ ಹೊತ್ತಿನ ನಂತರ ನಮ್ಮವರು ಕಣಿವೆಯ ತಗ್ಗಿನತ್ತ ಹೊರಟರು, ನಾನು ಮೇಲಿನಿಂದ ಬಳಸಿ ಬರಲು ಹೊರಟೆ. ದಾರಿಯಲ್ಲಿ ನನಗೆ ಸುಮಾರು ಇನ್ನೂರು ಅಡಿಗಳೆತ್ತರದ ಕಡಿಗಲ್ಲೊಂದು ಅಡ್ಡವಾಯಿತು. ಇದು ಮನುಷ್ಯ ಮಾತ್ರರು ಹತ್ತಿಳಿಯಲು ಸಾಧ್ಯವಿಲ್ಲದಷ್ಟು ಕಡಿದಾಗಿತ್ತು. ಸುತ್ತಮುತ್ತ ಬಳಸಿಕೊಂಡು ಹೋಗುವ ಸಾಧ್ಯತೆಗಳೂ ಇರಲಿಲ್ಲ, ಇದ್ದ ಅವಕಾಶದಲ್ಲಿ ಬಂಡೆಯ ಆ ಮಗ್ಗುಲನ್ನು ನೋಡಲು ಪ್ರಯತ್ನಿಸುತ್ತಾ.... ನಿಧಾನವಾಗಿ ಆ ಬಂಡೆಯನ್ನು ಸಾಧ್ಯವಾದಷ್ಟು ಎತ್ತರಕ್ಕೆ ಏರಿ, ಅಲ್ಲಿಂದ ಕೈಗೆಟಕುತ್ತಿದ್ದ ಕೊಂಬೆಯನ್ನು ಹಿಡಿದುಕೊಂಡು ಬಂಡೆಯ ಪಕ್ಕದ ಮರಕ್ಕೇರಿದೆ. ಅಲ್ಲಿ ನಿಂತು ನೋಡಿದರೆ....! ನನ್ನಿಂದ ಕೇವಲ ನಲವತ್ತು ಅಡಿಗಳ ಕೆಳಗಿರುವ ತಗ್ಗಿನಲ್ಲಿ ಕರಡಿ ಮಲಗಿತ್ತು, ತಕ್ಷಣ ನಾನು ಕೋಡುಗಲ್ಲಿನ ಮೇಲಕ್ಕೆ ಹಿಂತಿರುಗಿ, ಸುಮಾರು 20 -25 ಕೇಜಿ ತೂಗುವ ಕಲ್ಲೊಂದನ್ನು ಎತ್ತಿಕೊಂಡು, ಬಂಡೆಯ ಅಂಚಿಗೆ ಬಂದು ಅದನ್ನು ಮೇಲಿನವರೆಗೆ ಎತ್ತಿ ಸರಿಯಾಗಿ ಕರಡಿಯ ತಲೆಗೆ ಗುರಿ ಹಿಡಿದು ಹಾಕಿದೆ.

ಕರಡಿಯ ಅದೃಷ್ಟ ಚೆನ್ನಾಗಿತ್ತು, ನಾನು ಒಗೆದ ಕಲ್ಲು ಅದರ ತಲೆಬಳಿ ಬಂಡೆಯಿಂದ ಹೊರಚಾಚಿದ್ದ ಕಲ್ಲಿಗೆ ತಗುಲಿ, ಸಿಡಿದು ಕರಡಿಯ ಕಾಲಮೇಲೆ ಬಿತ್ತು, ಅದು ತಗಲಿದ್ದೇ ತಡ, ಕರಡಿ ಮಿಂಚಿನಂತೆ ಓಡಿ ಮಾಯವಾಯಿತು. ನಾನು ಅದನ್ನು ಹುಡುಕುತ್ತಿದ್ದೆ. ಅಷ್ಟರಲ್ಲಿ ಕರಡಿ ಬೆಟ್ಟದ ಮತ್ತೊಂದು ದಿಬ್ಬದ ಅಂಚಿನಲ್ಲಿ ಓಡುತ್ತಿರುವುದು ಕಾಣಿಸಿತು. ನಾವೆಲ್ಲಾ ಮತ್ತೆ ಇದರ ಬೆನ್ನುಹತ್ತಿ ಓಡಿದೆವು. ಅದು ಹೋಗುತ್ತಿದ್ದ ಜಾಡಿನಲ್ಲಿ ಹೆಚ್ಚೇನೂ ಅಡೆತಡೆಗಳಿರಲಿಲ್ಲ, ಹಾಗಾಗಿ ನಮ್ಮ ಓಟವೂ ಜೋರಾಗಿಯೇ ಇತ್ತು, ಸುಮಾರು ಒಂದು-ಒಂದೂವರೆ ಮೈಲಿಗಳಷ್ಟು ಓಡುವ ಹೊತ್ತಿಗೆ ಕರಡಿ ನಮಗೆ ಹತ್ತಿರವಾಯಿತು. ಅಷ್ಟು ಹೊತ್ತಿಗೆ ಅದು ದೂರದ ಕಣಿವೆಯ ಸೊಂಟದ ಭಾಗದಲ್ಲಿದ್ದ ಮೆಟ್ಟಲುಗಳಂತಿದ್ದ ಕೃಷಿ ಪ್ರದೇಶವನ್ನು ತಲುಪಿತ್ತು, ಅಲ್ಲಿ ನಡುನಡುವೆ ಅನೇಕ ಕೊರಕಲುಗಳಿದ್ದವು. ಮಳೆ ನೀರಿನ ಕೊರೆತದಿಂದಾದ ಇಂಥ ಒಂದು ಕೊರಕಲಿನೊಳಗೆ ಕರಡಿ ಅಡಗಿಕೊಂಡಿತು.

ಈಗ ಕರಡಿಯನ್ನು ಮುಖಾಮುಖಿ ಎದುರಿಸುವ ಸಮಯ. ನಮ್ಮ ಗುಂಟು ಮುಖದ ಗೆಳೆಯನ ಹೊರತು ಇನ್ನಾರ ಬಳಿಯೂ ಆಯುಧಗಳಿಲ್ಲ, ಹಾಗಾಗಿ ಈತನೇ ದಾಳಿಯ ನಾಯಕನಾಗಿ ಆಯ್ಕೆಯಾದ. ಆತ ಕಿಂಚಿತ್ತೂ ಹೆದರದೆ, ಥಳಥಳ ಹೊಳೆಯುತ್ತಿದ್ದ ಗಂಡುಗೊಡಲಿಯನ್ನು ಎರಡೂ ಕೈಯಲ್ಲಿ ಹಿಡಿದು ತಿರುಗಿಸುತ್ತಾ ಕರಡಿಯನ್ನು ಸಮೀಪಿಸಿದ. ಗುರಿ ನೋಡಿ ಕೊಡಲಿಯನ್ನು ಮೇಲಕ್ಕೆತ್ತಿ ಕರಡಿಯ ನೆತ್ತಿಯ ಮೇಲೆ ಹೊಡೆದ. ಎಂಥಾ ವಿಚಿತ್ರವೆಂದರೆ, ಕೊಡಲಿ ಕರಡಿಯ ನೆತ್ತಿಯಲ್ಲಿ ತೂರಿಕೊಳ್ಳುವ ಬದಲು, ರಬ್ಬರಿನ ತುಂಡಿನ ಮೇಲೆ ಹೊಡೆದಂತೆ ಪುಟದು ಹಿಂದಕ್ಕೆ ಚಿಮ್ಮಿತು. ಹಿಂದೆಯೇ ಕರಡಿ ಹೂಂಕರಿಸುತ್ತಾ ಅವನನ್ನು ಹಿಂಭಾಗದಿಂದ ಆಕ್ರಮಿಸಿತು. ನಾವೆಲ್ಲಾ ಒಬ್ಬರ ಮೇಲೊಬ್ಬರು ಬಿದ್ದು ಚೆಲ್ಲಾಪಿಲ್ಲಿಯಾದೆವು. ಆದೇನಾದರೂ ದಾಳಿಯನ್ನು ಮುಂದುವರೆಸಿದ್ದರೆ ಭಾರೀ ಅನಾಹುತವಾಗುತ್ತಿತ್ತು, ಆದರೆ ಕರಡಿ ಅಷ್ಟಕ್ಕೇ ಬಿಟ್ಟು ಇನ್ನಷ್ಟು ಕೆಳಭಾಗದಲ್ಲಿದ್ದ ಮತ್ತೊಂದು ಕೊರಕಲಿನತ್ತ ಓಡಿ ತಲೆಮರೆಸಿಕೊಂಡಿತು.

ಈಗ ಕರಡಿಯನ್ನು ಎದುರಿಸುವುದು ನನ್ನ ಸರದಿಯಾಗಿತ್ತು. ನಾನು ಕೊಡಲಿಯನ್ನು ಎತ್ತಿ ಹಿಡಿದು, ನಿಧಾನವಾಗಿ ಕರಡಿಗೆ ಸಮೀಪಗತನಾದೆ. ಬಾಲ್ಯದಲ್ಲಿ ನಾನು ಕೆನಡಾದಲ್ಲಿ ಮರ ಸಿಗಿಯುವವನಾಗಬೇಕೆಂದು ಕನಸು ಕಂಡಿದ್ದೆ. ಅದಕ್ಕೆ ಪೂರಕವಾಗಿ ಕೊಡಲಿಯಿಂದ ಬೆಂಕಿಕಡ್ಡಿಯ ತುಂಡುಗಳನ್ನು ನಿಖರವಾಗಿ ಸೀಳುವುದರಲ್ಲಿ ಸಮರ್ಥನಾಗಿದ್ದೆ. ಹಾಗಾಗಿ



ಕೊಡಲಿಯ ಮೇಲೆ ನನಗೆ ಹಿಡಿತವಿತ್ತು, ಅಲ್ಲದೆ ಕೊಡಲಿಯ ಯಜಮಾನನಿಗಿರುವಂತೆ ಅದರ ಹಲ್ಲಿಗೆ ಹೊಡೆದು ಬಾಯಿ ಮುಕ್ಕಾದೀತು ಎಂಬ ಭಯವೂ ನನಗಿರಲಿಲ್ಲ, ಅತ್ಯಂತ ವಿಶ್ವಾಸದಿಂದ ದಾಳಿಯ ಅಂತರವನ್ನು ಕಾದಿಟ್ಟುಕೊಂಡು, ಕೊಡಲಿಯನ್ನು ಬೀಸಿ ಹೊಡೆದೆ. ಅದರ ಉಕ್ಕಿನ ಭಾಗ ಪೂರ್ತಿ ಕರಡಿಯ ತಲೆಯೊಳಕ್ಕೆ ತೂರಿಕೊಂಡಿತು.

ಹಿಮಾಲಯದಲ್ಲಿ ಕರಡಿಯ ಚರ್ಮಕ್ಕೆ ವಿಪರೀತ ಬೇಡಿಕೆ ಇದೆ. ಹಾಗೇ ಕರಡಿಯ ಸಾವಿಗೆ ಕಾರಣವಾದ ಕೊಡಲಿಯ ಮಾಲೀಕನಿಗೆ ವಿಶೇಷ ಗೌರವವೂ ಇದೆ. ಹಾಗಾಗಿ ಕರಡಿಯ ಚರ್ಮವನ್ನು ನಾನು ಅವನಿಗೆ ಕೊಟ್ಟು ಬಿಟ್ಟೆ. ಉಳಿದ ಜೊತೆಯವರೆಲ್ಲಾ ಹೊಟ್ಟೆಕಿಚ್ಚು ಪಟ್ಟುಕೊಂಡರು. ಅಲ್ಲದೆ ಶಿಕಾರಿಯ ಮಾಂಸದಲ್ಲೂ ಅವನಿಗೆ ಒಂದು ವಿಶೇಷ ಭಾಗ ನೀಡಿದ್ದೆ. ಅಷ್ಟು ಹೊತ್ತಿಗಾಗಲೇ ಹಳ್ಳಿಯಿಂದ ಹೊಸದಾಗಿ ಬಂದಿದ್ದ ಜನರೊಂದಿಗೆ ನಮ್ಮವರು ಅವರ ಸಾಹಸ, ಚರ್ಮ, ಮಾಂಸದ ಪಾಲುಗಳ ಬಗ್ಗೆ ಚರ್ಚಿಸುತ್ತಿದ್ದಾಗ ನಾನು ಸೀದಾ ಈ ಹಿಂದೆ ದಾಳಿಗೀಡಾಗಿ ಬದುಕುಳಿದಿದ್ದ ಹರಯದ ತಾಯಿಯನ್ನು ನೋಡಲು ಹೊರಟೆ.

ಇಂದು ಅವಳು ಹುಲಿಯಿಂದ ಬಚಾವಾಗಿ ಬಂದ ಹತ್ತನೇ ದಿನವಾಗಿತ್ತು, ಆಕೆ ಮನೆಯ ಮುಂದೆ ಬಾಗಿಲಿಗೊರಗಿ ಕುಳಿತಿದ್ದಳು. ಮಡಿಲಲ್ಲಿ ಅವಳ ಪುಟ್ಟ ಮಗು ಮಲಗಿತ್ತು, ಅವಳ ಹೆಕ್ಕತ್ತಿನ ಮೇಲಾಗಿದ್ದ ಆಳವಾದ ಗಾಯವೊಂದನ್ನು ಬಿಟ್ಟು ಉಳಿದ ಗಾಯಗಳೆಲ್ಲಾ ತಕ್ಕಮಟ್ಟಿಗೆ ವಾಸಿಯಾಗಿದ್ದವು. ಹೆಕ್ಕತ್ತಿನ ಮೇಲೆ ಊರಿದ್ದ ಹುಲಿಯ ಉಗುರು ಆಳವಾಗಿ ಮಾಂಸಖಂಡಗಳನ್ನು ಸೀಳಿತ್ತು. ಹಾಗಾಗಿ ಅದು ವಾಸಿಯಾಗುವುದು ತಡವಾಗಿತ್ತು, ಅವಳೇ ತಲೆಯ ಮೇಲಿದ್ದ ಕೂದಲನ್ನು ಬಗೆಮಾಡಿ ಅಲ್ಲಿನ ಗಾಯ ವಾಸಿಯಾಗುತ್ತಿರುವುದನ್ನು ತೋರಿಸಿದಳು. "ಅವತ್ತು ನನ್ನ ತಂಗಿ ತುಕ್ಕು ಹಿಡಿದ ಕತ್ತರಿಯನ್ನು ತಂದು ಕೊಟ್ಟದ್ದರಿಂದಾಗಿ ನಾನು ಬದುಕುಳಿದೆ! ಇಲ್ಲದಿದ್ದರೆ ಈ ನನ್ನ ಕೂದಲನ್ನು ನೀವು ಅವತ್ತು ಕತ್ತರಿಸಿ ಹಾಕುತ್ತಿದ್ದಿರಿ!!" ಎಂದು ತನ್ನ ಸಮೃದ್ಧವಾದ ಕರಿಯ ಕೇಶರಾಶಿಯನ್ನು ಸಂಪತ್ತೇನೊ ಎಂಬಂತೆ ತೋರಿಸಿದಳು. ಅವಳ ಭಾವನೆ ನನಗೆ ಅರ್ಥವಾಗುತ್ತಿತ್ತು, ಸಾಮಾನ್ಯವಾಗಿ ಈ ದೇಶದಲ್ಲಿ ಹೆಂಗಸರ ತಲೆ ಬೋಳಿಸುವುದು ವಿಧವೆಯಾದರೆ ಮಾತ್ರ. ತನ್ನ ಕೂದಲು ಉಳಿದಿದ್ದು ಅವಳಿಗೆ ಅವಳ ಜೀವ ಉಳಿದಿದ್ದಕ್ಕಿಂತ ಹೆಚ್ಚು ಸಂತಸ ತಂದಿತ್ತು.

ಅದೇನಾದರಾಗಲಿ, ನನಗೆ ಈ ಹಳದಿ ದ್ರವವನ್ನು ಕೊಟ್ಟ ವೈದ್ಯ ಮಿತ್ರ ಇದನ್ನು ಎಂದಾದರೂ ಓದಲಿ, ಈ ಮೂಲಕ ನಾನು ಅವನಿಗೆ ಕೃತಜ್ಞತೆ ಸಲ್ಲಿಸಬಯಸುತ್ತೇನೆ. ಆ ದ್ರವವನ್ನು ಸಕಾಲದಲ್ಲಿ ನನಗೆ ಕೊಟ್ಟು, ಒಬ್ಬ ಧೈರ್ಯವಂತ ತಾಯಿಯ ಜೀವ ಉಳಿಸಿದ್ದಾನೆ. ನಾನು ಅವಳಿಗೆ ಶುಭಕೋರಿ ನನ್ನ ಕ್ಯಾಂಪಿನತ್ತ ಹೊರಟೆ. ಇವತ್ತು ತುಂಬಾ ಸುಸ್ತಾಗಿಬಿಟ್ಟಿದ್ದೆ. ಎಷ್ಟು ಸುಸ್ತಾಗಿದ್ದೇನೆಂದರೆ ಆಕಸ್ಮಿಕ ಆ ನರಭಕ್ಷಕಿ ಇವತ್ತು ನಮ್ಮಲ್ಲಿಗೆ ಬಂದಿದ್ದರೆ... ರಾತ್ರಿ ಎಚ್ಚರ ತಪ್ಪಿದಂತೆ ಮಲಗಿದ್ದ ನನ್ನನ್ನು ಅದು ಎತ್ತಿಕೊಂಡು ಹೋಗಬಹುದಿತ್ತು.

****

ನಾನು ಹಿಂತಿರುಗುವ ದಾರಿಯ ಬಗ್ಗೆ ಚಿಂತಾಕ್ರಾಂತನಾಗಿದ್ದೆ. ನಾನು ಈ ಹಿಂದೆ ದಲ್ಕಾನಿಯಾಕ್ಕೆ ಬಂದ ರಸ್ತೆಯಂತೂ ತಾಪತ್ರಯಗಳ ಮುದ್ದೆಯಾಗಿತ್ತು, ದೀರ್ಘವಾದ ಏಣಿಗಲ್ಲುಗಳ ಅಗಾಧ ಎತ್ತರದ ಬೋಳು ಪರ್ವತಗಳೂ ಹಾಗೂ ಆಳವಾದ ಕಣಿವೆಗಳಿಂದ ಕಿಕ್ಕಿರಿದಿದ್ದ ಈ ದಾರಿಯನ್ನು ನೆನಪಿಸಿಕೊಂಡರೇ ಭಯವಾಗುತ್ತಿತ್ತು, ಜೊತೆಯಲ್ಲಿದ್ದ ಹಳ್ಳಿಗರೊಂದಿಗೆ ಇದನ್ನು ಹೇಳಿದೆ. ಅವರು ಆ ದಾರಿಯ ಬದಲು ಹೈರಾಖಾನ್ ಮೂಲಕ ಹೋಗಬಹುದೆಂದು ಸೂಚಿಸಿದರು. ಈ ದಾರಿಯಲ್ಲಿ ಒಂದು ದೊಡ್ಡ ಪರ್ವತವನ್ನ ಹತ್ತಿ ಇಳಿದರೆ ನೀವು ರಾನಿಭಾಗ್ ತಲುಪಬಹುದು ಎಂದು ಹೇಳಿದರು. ರಾನಿಭಾಗ್‌ನಿಂದ ನೈನಿತಾಲ್‌ಗೆ ಕಾರಿನಲ್ಲಿ ಹೋಗುವ ದಾರಿಯಿತ್ತು.

'ನೀವು ಮುಂಜಾನೆಯೇ ಎದ್ದು ಸಿದ್ಧಮಾಡಿಕೊಂಡು, ನನ್ನನ್ನು ಹೈರಾಖಾನ್ ದಾರಿಯಲ್ಲಿ ಹಿಂಬಾಲಿಸಿ' ಎಂದು ನಮ್ಮವರಿಗೆ ತಿಳಿಸಿ, ನಾನು ಹಳ್ಳಿಗರು ಸೂಚಿಸಿದ್ದ ಈ ದಾರಿ ಹಿಡಿದೆ. ಈ ದಾರಿ ನಿಜವಾದ ಅರ್ಥದಲ್ಲಿ ಬಹಳ ದಿನಗಳಿಂದ ಬಳಕೆಯೇ ಆಗಿರಲಿಲ್ಲ, ಇದು ಸ್ಥಳೀಯರು ಪರ್ವತಗಳ ತಪ್ಪಲಿನ ಪೇಟೆಗೆ ಹೋಗಿಬರಲು ಮಾಡಿಕೊಂಡಿದ್ದ ಕಾಲುದಾರಿಯಾಗಿತ್ತು, ಈ ದಾರಿ ಬಹಳ ದೂರದವರೆಗೆ ಪೈನ್, ಓಕ್ ಮರಗಳಿಂದಾವೃತವಾದ, ಆಳೆತ್ತರಕ್ಕೆ ಬೆಳೆದ ದಟ್ಟವಾದ ಪೊದೆಗಳಿಂದ ಕೂಡಿತ್ತು. ಕಳೆದ ಒಂದು ವಾರದಿಂದ ಹುಲಿಯ ಸಮಾಚಾರವೂ ಇರಲಿಲ್ಲ, ಈ ಎರಡೂ ಅಪಾಯದ ಸೂಚನೆಗಳೇ ಆಗಿದ್ದವು. ಈ ಗವ್ ಎನ್ನುವ ದಟ್ಟಡವಿಯ ನಡುವೆ ಸಾಗುವಾಗ ತೀರಾ ಎಚ್ಚರ ವಹಿಸಬೇಕಿತ್ತು, ನಾನು ಜಾಗರೂಕನಾಗಿ ಸಾಗುತ್ತಾ...ಕಾಡಿನ ದಾರಿಯಿಂದ ಹೊರಬಂದು ಒಂದು ಬಯಲನ್ನು ಎದುರಾದೆ. ಇಲ್ಲಿಗೆ ನಾನು ಕ್ಯಾಂಪನ್ನು ಬಿಟ್ಟು ನಾಲ್ಕು ಗಂಟೆಗಳಾಗಿದ್ದವು. ಈಗ ನನ್ನ ಮುಂದೆ ತೆರೆದ ವಿಶಾಲವಾದ ಬಯಲು ಕಾಣುತ್ತಿತ್ತು, ಅದರಾಚೆಯ ಬೆಟ್ಟದ ತುದಿಯಲ್ಲಿದ್ದ ಕಾಡುರಸ್ತೆ ನನ್ನಿಂದ ಇನ್ನೂರು ಗಜ ದೂರದಲ್ಲಿತ್ತು. ಬೆಟ್ಟದ ತುದಿಯಲ್ಲಿದ್ದ ಈ ಬಯಲು ನಾಲ್ಕುನೂರು ಗಜ ಉದ್ದ, ಐವತ್ತು ಗಜ ಅಗಲವಿದ್ದು, ತೊಟ್ಟಿನ ಕಡೆಗೆ ಸಪೂರವಾಗುತ್ತಾ ಹೋಗುವ ಸೀಬೆಹಣ್ಣಿನ ಆಕಾರದಲ್ಲಿತ್ತು, ಈ ಬಯಲಿನ ಮಧ್ಯದಲ್ಲಿ ಒಂದು ಗುಮ್ಮಿ ಇತ್ತು, ಇದನ್ನು ಕಾಡಿನ ಜನಪದರು ನೀರಿಗಾಗಿ ಅವಲಂಬಿಸಿದ್ದ ಗುರುತುಗಳಿದ್ದವು. ಇದನ್ನು ಯಾವ್ಯಾವ ಪ್ರಾಣಿಗಳು ಆಶ್ರಯಿಸಿವೆ ಎಂದು ಪರೀಕ್ಷಿಸ ಹೊರಟೆ. ಅಲ್ಲಿ ಕಡವೆ, ಸಾರಂಗ, ಕಾಡುಮೇಕೆ, ಹಂದಿಗಳೇ ಮೊದಲಾದ ಪ್ರಾಣಿಗಳ ಹೆಜ್ಜೆ ಗುರುತುಗಳು ಕಂಡವು. ಗುಮ್ಮಿಗೆ ಹತ್ತಿರಾದಂತೆ ಮಣ್ಣು ತುಂಬಾ ಮೃದುವಾಗಿತ್ತು. ಈ ಮೃದು ಮಣ್ಣಿನ ಮೇಲೆ ಇದೀಗ ತಾನೆ ಮೂಡಿದ್ದ ಹುಲಿಯ ಹೆಜ್ಜೆ ಗುರುತುಗಳೂ ಮೂಡಿದ್ದವು. ಅದು ಈಗಷ್ಟೇ ಇಲ್ಲಿಂದ ಹೋಗಿತ್ತು. ಹಿಂದಕ್ಕೆ ಹೋಗಿ ನೋಡಿದರೆ, ಅದು ನಾನು ಬಂದ ದಿಕ್ಕಿನಿಂದಲೇ ಬಂದಿರುವುದು ಸ್ಪಷ್ಟವಾಗಿತ್ತು, ನನಗಿಂತ ಮುಂಚೆಯೇ ಗುಮ್ಮಿಯ ಬಳಿ ಬಂದಿದ್ದ ಹುಲಿ, ನನ್ನನ್ನು ಈ ಮುಂಚೆ ಗಮನಿಸಿದೆಯೇ ಅಥವಾ ನನ್ನನ್ನು ಹಿಂಬಾಲಿಸಿ ಬಂದಿದೆಯೇ ಎಂದು ಊಹಿಸಲಾಗಲಿಲ್ಲ, ಆದರೆ ಇಲ್ಲಿಂದ ಮುಂದಕ್ಕೆ ಅದು ಕಾಡೊಳಕ್ಕೆ ಹೋಗಿರುವ ಹೆಜ್ಜೆ ಗುರುತುಗಳನ್ನು ನೋಡಿದರೆ ಅದು ನನ್ನ ನೋಡಿಯೇ ಇಲ್ಲಿಂದ ಹೋದಂತಿತ್ತು, ಅದರ ಹೆಜ್ಜೆ ಗುರುತುಗಳು ಅದು ಅವಸರವಾಗಿ ಇಲ್ಲಿಂದ ಹೋಗಿದ್ದನ್ನು ಸೂಚಿಸುತ್ತಿದ್ದವು. ನಾನು ಒಂದು ಸುವರ್ಣಾವಕಾಶವನ್ನು ಕಳೆದುಕೊಂಡಿದ್ದೆ, ಅದಂತೂ ನನ್ನನ್ನು ನೋಡಿರುವುದು ಖಚಿತವಾಗಿತ್ತು, ಈಗ ಅದು ಮತ್ತೆ ನನ್ನನ್ನು ನೋಡುವ ಮೊದಲು ನಾನು ಅದನ್ನು ನೋಡಬೇಕಿತ್ತು, ನಾನು ಹಿಂದೆ-ಮುಂದೆ, ಅಕ್ಕ-ಪಕ್ಕ ಎಚ್ಚರಿಕೆಯಿಂದ ಹುಡುಕಹತ್ತಿದೆ. ಸದ್ಯಕ್ಕೆ ಭೌಗೋಳಿಕ ಒಲವು ನನ್ನ ಕಡೆಗಿತ್ತು, ಹುಲಿಗೆ ನಾನಿಲ್ಲಿರುವ ಸಂಗತಿ ಈಗಾಗಲೇ ತಿಳಿದಿರುವುದರಿಂದ, ಅದೂ ನನ್ನನ್ನು ಕಾಡಿನ ಮರೆಯಲ್ಲಿ ಅವಿತು ಗಮನಿಸುತ್ತಿದೆ. ಪರ್ವತ ಹತ್ತಿ ಬಂದ ನಾನೂ ಅದರಂತೆಯೇ ಗುಮ್ಮಿಗೆ ನೀರು ಕುಡಿಯಲು ಹೋಗುತ್ತೇನೆ ಎಂದು ಊಹಿಸಿರುತ್ತದೆ. ಈವರೆಗೂ ನಾನು ಅತ್ಯಂತ ಸಹಜವಾಗಿಯೇ ವರ್ತಿಸಿದ್ದೇನೆ. ಈಗೇನಾದರೂ ನಾನು ಬೇರೆ ಥರ ವರ್ತಿಸಿದರೆ ನಾನೂ ಅದರ ಇರುವನ್ನು ಪತ್ತೆ ಮಾಡಿರುವ ಗುಮಾನಿ ಅದಕ್ಕೆ ಬರುತ್ತದೆ. ಹಾಗಿದ್ದಾಗ ನಾನು ಅದರ ಇರುವನ್ನು ತಿಳಿಯದವನಂತೆ ವರ್ತಿಸಿದರೆ ಮತ್ತೊಮ್ಮೆ ಅದರ ದರ್ಶನಭಾಗ್ಯ ಸಿಕ್ಕರೂ ಸಿಗಬಹುದು ಎಂದು ಊಹಿಸಿದೆ.

ಏನೂ ಆಗಿಲ್ಲವೇನೋ ಎಂಬಂತೆ, ಸಹಜವಾಗಿ ನೀರಿಗೊಂದು ಕಲ್ಲೆಸೆದು, ಕೆಮ್ಮುತ್ತಾ...ಕ್ಯಾಕರಿಸುತ್ತಾ.... ನನ್ನ ಎದುರಿಗಿದ್ದ ಕೋಡುಗಲ್ಲಿನತ್ತ ಹೊರಟೆ. ಹೋಗುವಾಗ ದಾರಿಯಲ್ಲಿ ಸಿಕ್ಕ ಕಡ್ಡಿಪುಳ್ಳೆಗಳನ್ನು ಆರಿಸಿಕೊಳ್ಳುತ್ತಾ.... ಸಾವಕಾಶವಾಗಿ ಸಾಗುತ್ತಿದ್ದೆ. ಆದರೆ ಹ್ಯಾಟಿನ ಕಂಠದ ನೆರಳಿನಲ್ಲಿದ್ದ ನನ್ನ ಕಣ್ಣುಗಳು ಆತಂಕದಿಂದ ಸುತ್ತಲ ಕಾಡನ್ನು ತಡವುತ್ತಿದ್ದವು. ನಾನು ಬಂಡೆಯನ್ನು ಬಳಸಿ, ಅದರ ಕಡಿದಾದ ಮುಖಕ್ಕೆ ಬೆನ್ನು ಮಾಡಿ, ಏನೂ ತಿಳಿಯದವನಂತೆ ಸಶಬ್ದವಾಗಿ ಕುಳಿತುಕೊಂಡೆ. ಸುಧಾರಿಸಿಕೊಳ್ಳುವವನಂತೆ ಕುಳಿತಿದ್ದ ನಾನು ತಂದಿದ್ದ ಕಡ್ಡಿಪುಳ್ಳೆಗಳನ್ನು ಒಟ್ಟ ಬೆಂಕಿ ಹಚ್ಚಿದೆ. ಹಾಗೇ ನಾನೂ ಒಂದು ಸಿಗರೇಟು ಹಚ್ಚಿಕೊಂಡು ನಿರ್ಲಕ್ಷ್ಯದಿಂದಿರುವವನಂತೆ ಸೇದತೊಡಗಿದೆ. ಸಿಗರೇಟು ಮುಗಿದ ಮೇಲೆ ನನ್ನ ಎಡಗೈಯನ್ನು ತಲೆದಿಂಬಿನಂತೆ ಕೊಟ್ಟು ಮಲಗಿದೆ. ಬಲಗೈ ಬಂದೂಕದ ಕುದುರೆಯ ಮೇಲೆ ಸಿದ್ಧವಾಗಿ ಚಡಪಡಿಸುತ್ತಿತ್ತು.


(ಮುಂದುವರೆಯುತ್ತದೆ)

ಆವರಣ–ವಿವಾದ
ವಿಮರ್ಶೆಯ ಅಪಮೌಲ್ಯಗಳು

'ಆವರಣ' ಕಾದಂಬರಿ ಪ್ರಕಟವಾದ ಹೊಸತಿನಲ್ಲಿ ಆ ಬಗ್ಗೆ ನನ್ನೊಡನೆ ಮಾತಾಡುತ್ತ ಗೆಳೆಯ ಕೆ. ಸತ್ಯನಾರಾಯಣ ಹೇಳಿದರು, "ಕಾದಂಬರಿ ಓದಿ ಮುಗಿಸಿದಾಗ ಅದರ ಎದುರು ನಾನು ಅಸಹಾಯಕ ಅನ್ನಿಸಿಬಿಟ್ಟಿತು. ಕನ್ನಡದ ಹಿರಿಯ ಲೇಖಕರೊಬ್ಬರು ಹೀಗೆ ರೊಚ್ಚಿನಲ್ಲಿ ಬರೆದರೆ ಅದಕ್ಕೆ ಯಾವ ಪ್ರತಿಕ್ರಿಯೆ ತೋರಿಸಬೇಕು ಎಂದೇ ನನಗೆ ಹೊಳೆಯಲಿಲ್ಲ." ಅವರು ಹಾಗೆ ಹೇಳಿದರೂ ಆನಂತರ ಕಾದಂಬರಿಯ ಬಗ್ಗೆ ಪ್ರೌಢ ಲೇಖನವೊಂದನ್ನು ಬರೆದರು (ಕನ್ನಡ ಪ್ರಭ 18.2.07 ಪುರವಣಿ ಪುಟ1). ಆ ಲೇಖನದಲ್ಲಿ ಸತ್ಯನಾರಾಯಣ 'ಆವರಣ'ದ ಬಗ್ಗೆ ಎತ್ತಿರುವ ಆಕ್ಷೇಪಗಳಿಗೆ ಭೈರಪ್ಪನವರ ಅಭಿಮಾನಿಗಳಲ್ಲಿ ಯಾರೂ ಇದುವರೆಗೆ ಉತ್ತರಿಸಿಲ್ಲ.

ಈಗ ಭೈರಪ್ಪನವರನ್ನು ಟೀಕಿಸಿದ 'ಅಪರಾಧ'ಕ್ಕಾಗಿ 'ವಿಜಯ ಕರ್ನಾಟಕ' ಅನಂತಮೂರ್ತಿಯವರ ವಿರುದ್ಧ ದ್ವೇಷದ ಸಮರವನ್ನೇ ಸಾರಿದೆ. 'ಆವರಣ' ಕುರಿತು ಅನಂತಮೂರ್ತಿ ಮಾಡಿದ ಭಾಷಣವನ್ನು ಅದು ತಿರುಚಿ ವರದಿ ಮಾಡಿದ್ದೇ ಅಲ್ಲದೆ ಆ ಬಗ್ಗೆ ಓದುಗರಿಂದ ಎಸ್.ಎಮ್.ಎಸ್. ಸಂದೇಶಗಳನ್ನು ತರಿಸಿಕೊಂಡು, ಅವುಗಳಲ್ಲಿ ತನಗೆ ಬೇಕಾದ್ದನ್ನು ಮಾತ್ರ ಆಯ್ದುಕೊಂಡು ಪ್ರಕಟಿಸಿದೆ. ಆದರೆ ಅದು ಅನಂತಮೂರ್ತಿಯವರ ಭಾಷಣದ ಸರಿಯಾದ ಪಾಠವನ್ನು ಪ್ರಕಟಿಸುವ ವೃತ್ತಿಧರ್ಮವನ್ನು ಮಾತ್ರ ಇದುವರೆಗೆ ಪಾಲಿಸಿಲ್ಲ.

ಅನಾರೋಗ್ಯದಿಂದ ಬೆಂಗಳೂರಿನ ಒಂದು ಆಸ್ಪತ್ರೆಯಲ್ಲಿ ಮಲಗಿದ್ದ ಅನಂತಮೂರ್ತಿ ಫೋನಿನಲ್ಲಿ ಮಾತಾಡುತ್ತ "ನಾನು ವಾದಗಳಿಗೆ ಉತ್ತರಿಸಬಲ್ಲೆ. ಆದರೆ ಈ ಬಗೆಯ ದ್ವೇಷವನ್ನು ಹೇಗೆ ಎದುರಿಸುವುದು?" ಎಂದು ನನ್ನನ್ನು ಕೇಳಿದರು. 'ವಿಜಯ ಕರ್ನಾಟಕ'ದ ರೊಚ್ಚಿನ ಎದುರು ಅವರು ಅಸಹಾಯಕರಾಗಿದ್ದರು. ಆದರೆ ಈ ಬಗ್ಗೆ ಯಾರಾದರೂ ಏನು ಮಾಡಬಹುದಿತ್ತು? ಅನಂತಮೂರ್ತಿಯವರನ್ನು ಸಮರ್ಥಿಸಿ 'ವಿಜಯ ಕರ್ನಾಟಕ'ಕ್ಕೆ ಪತ್ರ ಬರೆಯುವುದು ಕೂಡ ಸಾಧ್ಯವಿರಲಿಲ್ಲ. ಬರೆದರೆ ಅದು ಪ್ರಕಟವಾಗುವುದಿಲ್ಲ. ಪತ್ರಿಕಾ ಸ್ವಾತಂತ್ರ್ಯವೆಂದರೆ ಅಭಿಪ್ರಾಯ ಸ್ವಾತಂತ್ರ್ಯವಲ್ಲ; ಅದು ಕೇವಲ ಪತ್ರಿಕೆ ನಡೆಸುವವರ ಸ್ವಾತಂತ್ರ್ಯ ಎಂಬ ಸತ್ಯ ಯಾರಿಗೆ ಗೊತ್ತಿಲ್ಲ? 'ವಿಜಯ ಕರ್ನಾಟಕ'ದ ಅಪಪ್ರಚಾರವನ್ನು ಅನಂತಮೂರ್ತಿಯವರಾದರೂ ಯಾಕೆ ಅಷ್ಟು ತಲೆಗೆ ಹಚ್ಚಿಕೊಳ್ಳಬೇಕು? ಆ ಪತ್ರಿಕೆ ಆರೆಸ್ಸೆಸ್‌ನ ಪ್ರತಿ ದಿನದ ಕರಪತ್ರ ಎನ್ನುವುದು ಈಗ ಎಲ್ಲರಿಗೂ ಗೊತ್ತಿರುವ ಗುಟ್ಟು. ಅತಿಶಯೋಕ್ತಿ ಪುನರುಕ್ತಿಗಳ ಮುಖಾಂತರ ತನ್ನ ಅಭಿಪ್ರಾಯಗಳನ್ನು ಗಟ್ಟಿಗೊಳಿಸಲು ತಿಣುಕುವ ಅದರ ಗದ್ಯ ಶೈಲಿ, ಹುಸಿ ಸಂಭ್ರಮ ಹುಸಿ ಉದ್ರೇಕಗಳ ನಡುವೆ ಜೀಕುತ್ತ ಒಮ್ಮೊಮ್ಮೆ ಔಚಿತ್ಯ ಪ್ರಜ್ಞೆಗೂ ಎರವಾಗುವ ಅದರ ಸುದ್ದಿ ಶೀರ್ಷಿಕೆಗಳು, ಮುಸ್ಲಿಮರು, ಕ್ರೈಸ್ತರು, ಕಮ್ಯುನಿಸ್ಟರು, ಪ್ರಗತಿಶೀಲರು ಮುಂತಾದ ತಾನೊಲ್ಲದ ಜನಗಳ ಮೇಲೆ ಮುಗಿಬೀಳುವ ಅದರ ವರಸೆ–ಇದೆಲ್ಲದರ ಮೂಲ ಮಾದರಿ ಆರೆಸ್ಸೆಸ್‌ನ ಪ್ರಚಾರ ಸಾಹಿತ್ಯ.



ವಿಮರ್ಶಕ ಮನುಚಕ್ರವರ್ತಿ ಪ್ರಕಾರ ಅನಂತಮೂರ್ತಿಯವರ ಮೇಲೆ ಈಗ ನಡೆದಿರುವ ವಾಗ್ದಾಳಿ ಒಂದು ಆಕಸ್ಮಿಕ ಘಟನೆ ಅಲ್ಲ; ಅದು, ಆರೆಸ್ಸೆಸ್ ತನಗೆ ಸರಿ ಕಾಣದ ಕಲಾವಿದರು, ಚಲನಚಿತ್ರ ನಿರ್ಮಾಪಕರು, ಲೇಖಕರು, ಇತಿಹಾಸಕಾರರು, ನಾಟಕಕಾರರು ಮತ್ತು ಲಿಬರಲ್ ಬುದ್ಧಿಜೀವಿಗಳ ವಿರುದ್ಧ ಕಳೆದ ಹಲವು ವರ್ಷಗಳಿಂದ, ದೇಶಾದ್ಯಂತ ನಡೆಸುತ್ತಿರುವ ಫ್ಯಾಸಿಸ್ಟ್ ದಾಳಿಯ ಒಂದು ಭಾಗವಷ್ಟೇ ಆಗಿದೆ. (ದಿ ಹಿಂದು 8.6.07 ಪುರವಣಿ ಪುಟ 3). ಆದಾಗ್ಯೂ ವಿಜಯ ಕರ್ನಾಟಕ ಮತ್ತು ಇನ್ನೂ ಒಂದೆರಡು ಪತ್ರಿಕೆಗಳು 'ಆವರಣ' ಕುರಿತ ಚರ್ಚೆಯ ಸಂದರ್ಭದಲ್ಲಿ ಅನಂತಮೂರ್ತಿಯವರ ತೇಜೋವಧೆ ಮಾಡುವುದರ ಜೊತೆ ಸಾಹಿತ್ಯ ವಿಮರ್ಶೆಯಲ್ಲಿ ಕೆಲವು ಅಪಮೌಲ್ಯಗಳನ್ನು ಚಾಲ್ತಿಗೆ ತಂದಿರುವ ಅಪಾಯಕಾರಿ ಬೆಳವಣಿಗೆಯನ್ನು ನಾವು ಗಮನಿಸಬೇಕು.



ವಿಮರ್ಶಕರು ಭೈರಪ್ಪನವರ ಜನಪ್ರಿಯತೆ ಹಾಗೂ ಪುಸ್ತಕಗಳ ಮಾರಾಟದಲ್ಲಿ ಆ ಕಾದಂಬರಿ ಸಾಧಿಸಿದ ವಿಕ್ರಮವನ್ನು ಪರಿಗಣಿಸಬೇಕು ಎಂಬ ಹಕ್ಕೊತ್ತಾಯವನ್ನು ಈಗ ಈ ಪತ್ರಿಕೆಗಳು ಮುಂದೆ ಇರಿಸಿವೆ. ಹೇಳಿದ ಮಾತನ್ನೇ ಮತ್ತೆಮತ್ತೆ ಹೇಳಿ ಅದನ್ನು ಜನರ ಯೋಚನಾಕ್ರಮದ ಭಾಗವನ್ನಾಗಿ ಮಾರ್ಪಡಿಸುವ ಆರೆಸ್ಸೆಸ್‌ನ ಪ್ರಚಾರ ವೈಖರಿಯೇ ಇಲ್ಲಿಯೂ ಕೆಲಸ ಮಾಡುತ್ತಿದೆ. ಸಾಹಿತ್ಯ ಕೃತಿಯೊಂದರ ವಿಮರ್ಶೆಯಲ್ಲಿ ಅದರ ಎಷ್ಟು ಪ್ರತಿಗಳು ಮಾರಾಟವಾಗಿವೆ ಎಂಬ ಲೆಕ್ಕ ಕೊಟ್ಟದ್ದು ಕನ್ನಡದಲ್ಲಿ ಹಿಂದೆ ಎಂದೂ ನಡೆದಿಲ್ಲ. ನರಸಿಂಹಸ್ವಾಮಿಯವರ 'ಮೈಸೂರ ಮಲ್ಲಿಗೆ'ಯ ಆವೃತ್ತಿಗಳ ಸಂಖ್ಯೆ ಬಗ್ಗೆ ವಿಮರ್ಶಕರು ಸಂಭ್ರಮಿಸಿದ್ದುಂಟು. ಹಾಗೆಯೇ ಬೇಂದ್ರೆಯವರ ಜನಪ್ರಿಯತೆಯ ಬಗೆಗೂ ಮೆಚ್ಚುಗೆಯ ಮಾತುಗಳು ಕೇಳಿಬಂದಿದ್ದವು. ಆದರೆ ಈ ಕವಿಗಳ ಕಾವ್ಯ ವಿಮರ್ಶೆಯಲ್ಲಿ ಅದನ್ನೊಂದು ಮಾನದಂಡವಾಗಿ ಯಾವ ವಿಮರ್ಶಕನೂ ಪರಿಗಣಿಸಿರಲಿಲ್ಲ. ಮಾರುಕಟ್ಟೆಯೇ ಸಾಹಿತ್ಯದ ತೀರ್ಪುಗಾರನಾಗುವುದಾದರೆ ಕನ್ನಡದ ಎಷ್ಟು ಶ್ರೇಷ್ಠ ಕೃತಿಗಳನ್ನು ಕೈಬಿಡಬೇಕಾಗುತ್ತದೆ! ಈ ಪರೀಕ್ಷೆಯಲ್ಲಿ ಭೈರಪ್ಪನವರಿಗೆ ಫಸ್ಟ್ ರ್‍ಯಾಂಕ್ ಗ್ಯಾರಂಟಿ! ಆದರೆ ಪಾಸಾಗುವುದೂ ಅವರೊಬ್ಬರೇ.

'ಆವರಣ'ದ ಮಾರಾಟದ ವಿಕ್ರಮದ ಜೊತೆಗೆ, ಭೈರಪ್ಪನವರ ಅಭಿಮಾನಿ ದೇವತೆಗಳು ಈಗ ಮತ್ತೊಂದು ವಿಚಾರವನ್ನು ತೇಲಿಬಿಟ್ಟಿದ್ದಾರೆ. ಕನ್ನಡದ ಇತರ ಜನಪ್ರಿಯ ಕಾದಂಬರಿಕಾರರ ಹಾಗೆ ಭೈರಪ್ಪನವರೂ ಕನ್ನಡಿಗರಲ್ಲಿ ಓದುವ ಅಭ್ಯಾಸ ಬೆಳೆಸಿ, ಓದುಗರ ಸಂಖ್ಯೆಯನ್ನೂ ಜಾಸ್ತಿ ಮಾಡಿದ್ದಾರಂತೆ! ಅಂದರೆ, ಬ್ಯಾಂಕಿನಲ್ಲಿ ಇಟ್ಟ ಫಿಕ್ಸೆಡ್ ಡಿಪಾಸಿಟ್, ಬಡ್ಡಿ, ಬಡ್ಡಿಯ ಮೇಲೆ ಬಡ್ಡಿ ಕೂಡಿಸಿಕೊಂಡು ಬೆಳೆಯುತ್ತ ಹೋಗುವ ಹಾಗೆ ಈ 'ಓದುವ ಅಭ್ಯಾಸ' ಕೂಡ; ಒಮ್ಮೆ ಹುಟ್ಟು ಹಾಕಿದರೆ, ಸಾಕು, ಬೆಳೆಯುತ್ತ ಹೋಗುತ್ತದೆ, ತಲೆಮಾರಿನಿಂದ ತಲೆಮಾರಿಗೆ ನಿರಂತರವಾಗಿ. ಅ.ನ.ಕೃ, ತ.ರಾ.ಸು, ನಿರಂಜನ, ತ್ರಿವೇಣಿ, ಬೀಚಿ, ದೇವುಡು ಮುಂತಾದ ಜನಪ್ರಿಯ ಲೇಖಕರು ಕುದುರಿಸಿದ ಈ 'ಓದುವ ಅಭ್ಯಾಸ' ಬೆಳೆದೂ ಬೆಳೆದೂ ಈಗ ಭೈರಪ್ಪನವರಿಂದ ಅದು ಒಮ್ಮೆಗೇ ಹಲವು ಪಟ್ಟು ಹೆಚ್ಚಾಗಿ ಮುಂದೊಂದು ದಿನ, ಎಲ್ಲ ಕನ್ನಡಿಗರೂ 'ಓದುಗ'ರಾಗುವುದು ನಿಶ್ಚಯ! ಆದರೆ ಅದಕ್ಕೆ ಮೊದಲು ಎಲ್ಲ ಕನ್ನಡಿಗರೂ ಸಾಕ್ಷರರಾಗಬೇಕು ಎಂಬುದೊಂದೇ ತೊಡಕು.

ಕಾದಂಬರಿಯೊಂದರ ವಿಮರ್ಶೆಯಲ್ಲಿ ಅದು ಓದುವ ಅಭ್ಯಾಸ ಬೆಳೆಸುವಂತಹದ್ದೊ ಎಂಬ ಚರ್ಚೆ ಆಗುತ್ತಿರುವುದೂ ಇದೇ ಮೊದಲ ಸಲ. ಓದುಗರ ಸಂಖ್ಯೆ ಬೆಳೆಸುವುದು ಸಾಹಿತಿಗಳ ಹೊಣೆಗಾರಿಕೆ ಎಂದಾಗಲೀ, ಹೆಚ್ಚುಗಾರಿಕೆ ಎಂದಾಗಲೀ ಇದುವರೆಗೆ ಯಾವ ವಿಮರ್ಶಕನೂ ಪ್ರತಿಪಾದಿಸಿಲ್ಲ. ಇದು ಕಾದಂಬರಿಗಳಿಗೆ ಮಾತ್ರ ಅನ್ವಯವಾಗುವ ಮಾನದಂಡವೋ? ಸಂಗೀತಕ್ಕೂ ಇದನ್ನೇ ಅಳವಡಿಸಿಕೊಂಡು ಸುಗಮ ಸಂಗೀತದಿಂದ, ಶಾಸ್ತ್ರೀಯ ಸಂಗೀತ ಹಾಗೂ ಶ್ರೇಷ್ಠ ಕಾವ್ಯ ಎರಡಕ್ಕೂ ರಸಿಕರು ಜಾಸ್ತಿಯಾಗುತ್ತಾರೆ ಎಂದು ವಾದಿಸಬಹುದೋ? (ಇಂತಹ ಮಾತು ಈಗಾಗಲೇ ಕೇಳಿಬಂದಿದೆ). ಲಕ್ಷ್ಮೀನಾರಾಯಣ ಭಟ್ಟರೇ ಮೊದಲಾದ ಕವಿಗಳ ಕ್ಯಾಸೆಟ್ಟುಗಳನ್ನು ಕೇಳಿಕೇಳಿ ಅಭ್ಯಾಸ ಬಲದಿಂದ ಕೇಳುಗರು ಸಂಗೀತ ಕಛೇರಿ ಹಾಗೂ ಅಡಿಗರ ಕಾವ್ಯಗಳತ್ತ ಧಾವಿಸಬಹುದೋ? ಆದರೆ ಅಂತಹದ್ದೇನೂ ಈವರೆಗೆ ಆಗಿಲ್ಲ. ಬದಲಾಗಿ ಈ ಕ್ಯಾಸೆಟ್ ಕವಿಗಳು ಜನರ ಅಭಿರುಚಿಯನ್ನು ಇನ್ನಷ್ಟು ಕೆಡಿಸದಿದ್ದರೆ ಅದೇ ಒಂದು ದೊಡ್ಡ ಪವಾಡ ಎನ್ನುವಂತಾಗಿದೆ. ಈ ಕವಿಗಳು–ಅವರನ್ನು ಹಾಗೆಂದು ಕರೆಯಬಹುದಾದರೆ ಬಳಸಿ ಬಿಸಾಡಿದ ಭಾಷೆಯಲ್ಲಿ ತೀವ್ರವಾಗಿ ಎದೆಗೆ ತಟ್ಟುವಂತಹ ಯಾವ ಹೊಸ ಮಾತನ್ನೂ ಹೇಳಲು ಸಾಧ್ಯವಿಲ್ಲ. ಜನಪ್ರಿಯತೆ ಮತ್ತು ಮಾರಾಟ ಮಾನದಂಡವನ್ನು ಚಲನಚಿತ್ರಗಳಿಗೆ ಅನ್ವಯಿಸಿದರಂತೂ ಇನ್ನಷ್ಟು ಅಧ್ವಾನವಾಗುತ್ತದೆ. ಬೇರೆ ಚಲನಚಿತ್ರಗಳ ಮಾತು ಬಿಡಿ, ಸ್ವತಃ ಭೈರಪ್ಪನವರ 'ಜನಪ್ರಿಯ' ಕಾದಂಬರಿಗಳನ್ನು ಆಧರಿಸಿ, ಕಾರ್ನಾಡ್, ಬಿ.ವಿ. ಕಾರಂತ್, ಗಿರೀಶ್ ಕಾಸರವಳ್ಳಿ ಮತ್ತು ಟಿ.ಎನ್. ಸೀತಾರಾಂ ತೆಗೆದ ಚಲನಚಿತ್ರಗಳಿಗೂ ಮಾರುಕಟ್ಟೆ ಇರಲಿಲ್ಲ. ಇದು ಏನನ್ನು ಸೂಚಿಸುತ್ತದೆ? ಮಾರುಕಟ್ಟೆಯು ಲೆಕ್ಕಾಚಾರ ಸಾಹಿತ್ಯ ಕೃತಿಯನ್ನು ಸೋಪು, ಶ್ಯಾಂಪುಗಳ ಮಟ್ಟಕ್ಕೆ ಇಳಿಸುತ್ತದೆ. ಅದರ ದೃಷ್ಟಿಯಲ್ಲಿ ಓದುಗ ಕೇವಲ ಬಳಕೆದಾರ ಯಾ ಗಿರಾಕಿ. ಈ ಲೆಕ್ಕಾಚಾರಕ್ಕೆ ಸರಿಯಾಗಿ, ಸಾಹಿತ್ಯಕೃತಿ ಮತ್ತು ಓದುಗನ ನಡುವಿನ ಅನುಸಂಧಾನ ಮತ್ತು ಕೃತಿಯ ಓದಿನಲ್ಲೇ, ಓದುಗ ಅದನ್ನು ಪುನರ್ ಸೃಷ್ಟಿ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಅಲ್ಲಗಳೆದು, ಓದುಗನ ಬುದ್ಧಿಹೃದಯಗಳನ್ನು ಲೇಖಕ ಸ್ವಾಧೀನಪಡಿಸಿಕೊಳ್ಳುವುದೇ ಸಾಹಿತ್ಯದ ಅಸಲು ಕಸುಬು ಎಂಬ ಹೊಸ ಗ್ರಹಿಕೆಯೊಂದನ್ನು ಭೈರಪ್ಪನವರ ಅಭಿಮಾನಿಗಳು ಹುಟ್ಟುಹಾಕಿದ್ದಾರೆ. 'ಆವರಣ' ಕಾದಂಬರಿಯೂ ಇದಕ್ಕೆ ತಕ್ಕಂತಿದೆ. ತನ್ನ ಈ ಕಾದಂಬರಿಯಲ್ಲಿ ಮುಸ್ಲಿಮರು, ಕ್ರೈಸ್ತರು, ಎಡಪಂಥೀಯರು ಮೊದಲಾದವರನ್ನೆಲ್ಲ ಕಟಕಟೆಯಲ್ಲಿ ನಿಲ್ಲಿಸಿ, ಅವರ ಮೇಲೆ ಆರೋಪಗಳ ಪಟ್ಟಿ ಹೊರಿಸಿ, ಸಾಕ್ಷಿ, ಪುರಾವೆ, ಟಿಪ್ಪಣಿ, ಆಕರ ಗ್ರಂಥ ಸೂಚಿ ಸಮೇತ ವಕಾಲತ್ತು ಮಂಡಿಸಿ ಭೈರಪ್ಪ ಏನು ಸಾಧಿಸಲು ಹೊರಟಿದ್ದಾರೆ? ಹಿಂಸೆ ಎಸಗುವ ಮತ್ತು ಅದಕ್ಕೆ ಬಲಿಯೂ ಆಗುವ ಮನುಷ್ಯನ ದುರಂತ ಸ್ಥಿತಿಯ ಚಿತ್ರಣವಾಗಲೀ, ಹಿಂಸೆಯ ಸ್ವರೂಪದ ಶೋಧನೆಯಾಗಲೀ 'ಆವರಣ'ದಲ್ಲಿ ಕಾಣಿಸದು. ಅದು ಪ್ರತಿವಾದಿ ಭಯಂಕರನೊಬ್ಬ ಹಿಂದೂತ್ವದ ಪರ ಮಂಡಿಸಿರುವ ಒಂದು ವಾದವೇ ಹೊರತು ಕಾದಂಬರಿ ಯಲ್ಲ. ಸಾಧ್ಯವಾದಷ್ಟು ಓದುಗರನ್ನು ಆ ಸಿದ್ಧಾಂತದೆಡೆಗೆ ಸೆಳೆದುಕೊಳ್ಳುವುದೇ ಅದರ ಉದ್ದೇಶ. ಒರಟಾಗಿ ಹೇಳಬೇಕು ಅಂದರೆ ಹಿಂದೂತ್ವದ ವೋಟ್ ಬ್ಯಾಂಕನ್ನು ಹೆಚ್ಚಿಸುವ ಹವಣಿಕೆ ಬಿಟ್ಟರೆ ಈ ಕೃತಿಯ ಹಿಂದೆ ಯಾವ ಘನವಾದ ತಾತ್ವಿಕತೆಯೂ ಇಲ್ಲ.



'ಆವರಣ' ಕುರಿತು ತನ್ನ ಭಾಷಣದಲ್ಲಿಯೂ ಅನಂತಮೂರ್ತಿ ಹೇಳಿದ್ದು ಇದನ್ನೇ. ಆ ಕಾದಂಬರಿಯನ್ನು 'ಸಾಹಿತ್ಯಿಕ' ಕಾರಣಗಳಿಗೆ ಟೀಕಿಸುವುದರ ಜೊತೆಗೆ ಮತ್ತು ಅದಕ್ಕಿಂತ ಹೆಚ್ಚಾಗಿ ಅವರು ಭೈರಪ್ಪ ಎತ್ತಿ ಹಿಡಿಯುವ ಹಿಂದೂತ್ವವನ್ನು ಖಂಡಿಸಿದ್ದಾರೆ. ಭೈರಪ್ಪನವರ ಈ ಕಾದಂಬರಿ ಪ್ರಕಟವಾಗಿರುವ ಸಂದರ್ಭವಾದರೂ ಎಂತಹದ್ದು? ಕಳೆದ 20 ವರ್ಷಗಳಲ್ಲಿ ಹಿಂದೂತ್ವ ದೇಶಾದ್ಯಂತ ನಡೆಸಿದ ಹಿಂಸೆ, ಕೊಲೆ, ಬಾಬರಿ ಮಸೀದಿ ಧ್ವಂಸ, ಅದರ ನಂತರ ನಡೆದ ಮುಂಬಯಿ ಗಲಭೆಗಳು, ಗುಜರಾತ್ ನರಮೇಧ- ಇದೆಲ್ಲದರ ನಂತರ ಹೊರಬಂದಿರುವ 'ಆವರಣ' ದಲ್ಲಿ ಆ ಜೀವ ಹಿಂಸೆಯ ಕುರಿತು ಕಳವಳದ ಮಾತೇ ಇಲ್ಲ. ಬದಲಿಗೆ ಕಾದಂಬರಿಯ ಉದ್ದಕ್ಕೂ ಆ ಹಿಂಸೆಯನ್ನೂ, ಅದಕ್ಕೆ ಸ್ಫೂರ್ತಿಯಾಗಿರುವ ಸಿದ್ಧಾಂತವನ್ನೂ ಸಮರ್ಥಿಸಲಾಗಿದೆ. ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಅಧಿಕಾರಾವಧಿ ಯಲ್ಲಿ ಹಿಂದೂತ್ವವಾದಿಗಳು ಕಲಾವಿದರು ಮತ್ತು ಬುದ್ಧಿಜೀವಿಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಸಿದ ಹಲ್ಲೆಗಳನ್ನು ಸಹ ಭೈರಪ್ಪ ಗಮನಿಸುವುದಿಲ್ಲ. ಬದಲಾಗಿ ಈ ಹಿಂದೂತ್ವವಾದಿಗಳೇ ಎಡಪಂಥೀಯರಿಂದ ಏಟು ತಿಂದವರು ಎಂಬ ಹಸಿ ಸುಳ್ಳನ್ನು ತನ್ನ ಕಾದಂಬರಿಯಲ್ಲಿ ಅವರು ಹೇಳಿದ್ದಾರೆ. ಹಿಂಸೆಗೆ ಬಲಿಪಶುಗಳಾಗಿರುವವರ ಮೇಲೆಯೇ ಹಿಂಸೆಯ ಆರೋಪ ಹೊರಿಸುವ ಹಳೆಯ ಫ್ಯಾಸಿಸ್ಟ್ ತಂತ್ರವನ್ನೇ ಕಾದಂಬರಿಯ ಉದ್ದಕ್ಕೂ ಅನುಸರಿಸಲಾಗಿದೆ. ಇದನ್ನು ಹೇಳಿದ್ದಕ್ಕೆ ಈಗ 'ವಿಜಯ ಕರ್ನಾಟಕ'ದ ಸಂಪಾದಕರಿಗೆ ಕೆಂಡದಂಥ ಕೋಪ ಬಂದಿದೆ.

–ಜಿ. ರಾಜಶೇಖರ

'ವಿಜಯ ಕರ್ನಾಟಕ'ದ ಸಂಪಾದಕ ವಿಶ್ವೇಶ್ವರ ಭಟ್ಟರು 13.6.07 ರ ಸಂಚಿಕೆಯಲ್ಲಿ ತಮ್ಮ ಅಂಕಣದ ಜಾಗದಲ್ಲಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ [illegible] ಬರೆದಿದ್ದ 'ಬೇಗನೇ ಹೇಳಿಬಿಡಿ' ಎಂಬ ಪದರೂಪದ ಗದ್ಯವನ್ನು ಪ್ರಕಟಿಸಿದ್ದರು. ಆ ಸೋಕಾಲ್ಡ್ ಪದ್ಯಕ್ಕೆ ನಮ್ಮ ಓದುಗ [illegible] ತಮ್ಮ ಪ್ರತಿಕ್ರಿಯೆಯನ್ನು ಕಳುಹಿಸಿದ್ದರು. ಆದರೆ ಅದನ್ನು ವಿ.ಕ.ದ ಭಟ್ಟರು ಪ್ರಕಟಿಸದಿದ್ದುದರಿಂದ ಇಲ್ಲಿ ಪ್ರಕಟಿಸುತ್ತಿದ್ದೇವೆ.

–ಜೆ.ಎಲ್.

"ಬೇಗನೇ ಹೇಳಿಬಿಡಿ ಭಟ್ರೆ"

ಬೇಗನೇ ಹೇಳಿಬಿಡಿ ಭಟ್ರೆ
ಗೊತ್ತಾಯಿತಲ್ಲಾ ಕಾದಂಬರಿ ಯಾವುದು
ಡಿಬೇಟ್ ಯಾವುದು ಅಂತ.

ಹಾಗೆಯೇ ಬೇಗನೇ ಹೇಳಿಬಿಡಿ
ಮನುಷ್ಯನಾರು ಪ್ರಾಣಿ ಯಾರು ಎಂದು
ಜೊತೆಗೆ ಹೇಳಿಬಿಡಿ ಜಗತ್ತಿನಲಿ ಬೇರೆಲ್ಲೂ
ಇರದ ಜಾತಿ-ವಿಜಾತಿ ನಿಮ್ಮಲ್ಲಿ ಹೇಗೆ ಹುಟ್ಟಿತು ಎಂದು.

ನಾಲ್ಕು ಸಹಸ್ರ ವರ್ಷಗಳಿಂದ ಇವ ನಿಮ್ಮೊಟ್ಟಿಗಿದ್ದರೂ
ಗೊತ್ತೇ ಇರಲಿಲ್ಲ ಅವ ನಿಮ್ಮಲ್ಲೊಬ್ಬನೆಂದು
ಗೊತ್ತಿರಲಿಲ್ಲ ಅವನು ಮುಗ್ಧ, ಅಮಾಯಕ, ಬಡವನೆಂದು
ದೇವರು ಧರ್ಮದ ಹೆಸರಲಿ ಶೋಷಿಸುವುದು ತಪ್ಪೆಂದು.

ಈಗ ಪರಿಯಾತ ಬಂದು ಕರುಣೆ ತೋರಿದೊಡೆ
ಒಮ್ಮೆಲೇ ಜ್ಞಾನೋದಯವಾಯಿತಲ್ಲಾ ನಿಮಗೆ
ಪರಿಯಾತನ ಆಮಿಷಕ್ಕೆ ಬಲಾತ್ಕಾರಕ್ಕೆ ಒಳಗಾಗುವ ಬಲಹೀನನೆಂದು,
ಬಲವಂತವಾಗಿ ನಿಮ್ಮ ಧರ್ಮದೊಳು ಅವನನ್ನು ಉಳಿಸಿಕೊಳ್ಳಬೇಕೆಂದು.

ಹಿರಿಯರು ಬರೆದ ಡಿಬೇಟು-ವೇದ ಉಪನಿಷತ್‌ಗಳು
ದೇವರೆ ಬರೆದುದೆಂದು ಸುಳ್ಳು ಬಿಂಬಿಸಿ,
ಕಪೋಲಕಲ್ಪಿತ ಕಥೆಪುರಾಣಗಳ ಪಾತ್ರಗಳನ್ನೇ ದೇವರೆಂದು ನಂಬಿಸಿ,
[illegible] ಮಾಡಿದಿರಿ ಗೋಜಲು ಗೊಂದಲಗಳ ಆಗರ
[illegible] ನಿಮ್ಮ ಪೀಳಿ ಮೆಲೋಗರ

ಹೇಳಿಬಿಡಿ ಮತ್ತೀಗ ಅದು ದೈವೀ ಡಿಬೇಟೋ
ಪವಿತ್ರ ಸ್ಮೃತಿಯೋ, ಮನುವಿನ ವಿಕೃತಿಯೋ
ಹೆಣ್ಣುದ್ವೇಷಿ ಮನೋ ವಿಕಲನ ಭ್ರಾಂತಿಯೋ?

ದೇವರಲ್ಲೂ ಗಂಡು ಹೆಣ್ಣು, ಅರ್ಧಪ್ರಾಣಿ,
ಬಾಲಕ, ಮುದಿಯ, ರಸಿಕ, ವಿರಾಗಿ,
ಎಂದು ವಿಂಗಡಿಸಿ ಗ್ರಂಥಗಳ ಬರೆದಿಟ್ಟವರಾರು?
ಡಿಬೇಟರ್‍ರೊ ಕಥೆಗಾರರೊ?
ಅತಿಶೂದ್ರ ವ್ಯಾಸನಿಂದ ರಚಿತ ಭಗವದ್ಗೀತೆ,
ಕಲ್ಪಿಸಿದ ಪಾತ್ರ ಶೂದ್ರ ಕೃಷ್ಣ.
ಸೆರೆಯಲಿ ಜನಿಸಿದ ಆ ಶೂದ್ರ ಇಂದು ಸುವರ್ಣರ ಕೈದಿ,
ಗುರುವಾಯೂರಪ್ಪನಿಗೂ ಬಂತು ಅಪವಾದ ಜಾತಿವಾದಿ.

ಬ್ರಹ್ಮಚಾರಿ ಶಂಕ್ರಾಚಾರಿಗೂ ಕಾಡಿತ್ತೇ "ಒಡಿಪಸ್ ಕಾಂಪ್ಲೆಕ್ಸ್"
ತಾಯಿಯನೇ ಕಾಮಿಸುವ ಶಾಪ.
ಸೌಂದರ್ಯ ಲಹರಿಯ ನೆಪದಲಿ
ಅದೇಕೆ ತಾಯಿ ದೇವಿಯ ಬಣ್ಣಿಸಿದ ಆ ರೀತಿ
ಕಾಮಾತುರನು ಬಣ್ಣಿಸುವಂತೆ ಪ್ರೇಯಸಿಯ ಸಂದುಗಳನು
ಮತ್ತೆ ಸಾಮಾನ್ಯರಿಗೆ ಗೊತ್ತಾಗದಿರಲೆಂದು
ವಿಕೃತಿಗೆ ಸಂಸ್ಕೃತದ ಮುಸುಕು.

ದೇವಿಯ ಉಪಾಸನೆಗೆ ಕುಳಿತ ಮ್ಯಾಲೆ
ಮುನಿ ಕಣ್ಣು ಮೊಲೆ ಮ್ಯಾಲೆ
ಸಂತನ ಕಣ್ಣು ಸೊಂಟದ್ ಮ್ಯಾಲೆ
ಯೋಗಿ ಕಣ್ಣು ಯೋನಿ ಮ್ಯಾಲೆ
ಋಷಿ ಕಣ್ಣು ಭೋಗದ್ ಮ್ಯಾಲೆ
ಎಲ್ಲಾ ಕೂಡಿ ಡಿಬೇಟ್ ಮಾಡಿ
ಮನದೊಳಗಿನದನ್ನೇ ಕೆತ್ತಿದರಲ್ಲಿ
ಖಜೂರಾಹೊ ಗ್ವಾಡೀ ಮ್ಯಾಲಿ.



ಹೊಸ ಡಿಬೇಟ್ ಕಾದಂಬರಿ ಬಿಡಿ
ಆದಿಕಾಲದ ಪ್ರಶ್ನೆಗೆ ಮತ್ತೊಮ್ಮೆ
ಉತ್ತರ ಹೇಳಿ.
ಮೊದಲು ಬಂದಿದ್ದು ಯಾವುದು,
ಕೋಳಿಯೋ ಮೊಟ್ಟೆಯೋ
ಮೊದಲು ಹುಟ್ಟಿದ್ದು ಯಾವುದು,
ಗಂಡೋ ಹೆಣ್ಣೋ
ಬೀಜವೋ ಮರವೊ
ಕಿರೆ-ಕಿರೆದು ತಲೆ ಬೋಳಾದರೂ
ಹೊಳೆಯಲಿಲ್ಲ ಉತ್ತರ ನಿಮಗೆಲ್ಲಾ
ತಲತಲಾಂತರದಿಂದ, ಯುಗ-ಯುಗದಿಂದ.
ಆದರೂ ನಿಮ್ಮ ಬುದ್ಧಿವಂತಿಕೆ ಬಿಡಲಾಗಲಿಲ್ಲ
ಉತ್ತರ ಗೊತ್ತಿಲ್ಲವೆಂದು ಹೇಳಲು ಸ್ವಾರ್ಥ ಬಿಡಲಿಲ್ಲ
ಅದಕ್ಕಾಗಿ ಹುಟ್ಟು ಹಾಕಿದಿರಿ ಒಂದು ಸರಳ ಉತ್ತರವ
ಅದು ಮೊಟ್ಟೆಯೂ ಅಲ್ಲ, ಕೋಳಿಯೂ ಅಲ್ಲ [illegible]ದೂ ಅಲ್ಲ
ಬೀಜವೂ ಅಲ್ಲ ಮರವೂ ಅಲ್ಲ, ಗಂಡು-ಹೆಣ್ಣು
ಆ ಉತ್ತರಕ್ಕೆ ಹೆಸರಿಟ್ಟರಿ-ದೇವರು ದಿಂಡರೆಂ[illegible] ಹುಟ್ಟಿದ್ದು ಯಾರು
ಡಿಬೇಟಿಗರೇ ಈಗಲಾದರೂ ಹೇಳಿ ಮೊ[illegible] ದೇವರೊ?
ನಾವು ಮಾನವರೋ, ನಿಮ್ಮ ಧರ್ಮ[illegible]

–ಪ್ರವೀಣ್ [illegible]. ಶೆಟ್ಟಿ, ಮಂಗಳೂರು

ಪ್ರೀತಿ ಎಂಬ ತಾತ್ಕಾಲಿಕ ರೋಗಕ್ಕೆ ಇರುವ ಮದ್ದೇ ಮದುವೆ-ಆಂಬ್ರೋಸ್ ಬಿಯರ್ಸ್

ತಗ್ಗಳಪ್ಪ ಈಗ ನಮ್ಮೂರ ಹರಿಜನರ್‍ಯೆಲ್ಲ ಬೌದ್ಧರಾದರಂತೆ

ರೈತರ ಆತ್ಮಹತ್ಯೆ ತಡೆಯಲೆಂದು ರೈತರೊಟ್ಟಿಗೆ ಮಾತನಾಡಲು ತೀರ್ಮಾನಿಸಿದ ಮುಖ್ಯಮಂತ್ರಿ ಕುಮಾರ ಸ್ವಾಮಿ ಕ್ರಮವನ್ನು ಮೆಚ್ಚಿದ ಕಾಳಮಾವ, ಸೀರನೊಂದಿಗೆ.

"ಇವೊಂದು ವಳ್ಳೆ ಕ್ಯಲಸ ಮಾಡಿದ ಕಂಡ್ರ ಕುಮಾರಸ್ವಾಮಿ" ಎಂದ.

"ಯಾವ ಕ್ಯಲಸ?"

"ಅದೆ ನ್ಯಾಕಾಯ್ಕಳೊ ರೈತರನ್ನೆಲ್ಲ ಕರದು ಮಾತಾಡಿದ್ದು."

"ಊ. ನಾನು ಹೋಗನಾ ಅಂತ ಇದ್ದೆ ಆದ್ರೆ ಸಾಲ ಮಾಡಿ ನ್ಯಾಕಾಯ್ಕಳೊ ರೈತರು ಮಾತ್ರ ಹೋಗಬೇಕು ಅಂತ ಯಾವ್ನೊ ಅಂದೊ. ಅದ್ಕೆ ಹೋಗಲಿಲ್ಲ" ಎಂದ.

ಬಯಲು ಸೀಮೆಯ
ಕಟ್ಟೆಪುರಾಣ
■ಬಿ. ಚಂದ್ರೇಗೌಡ

"ಏ ಯಾರು ಬೇಕಾದ್ರು ಹೋಗಬವುದಿತ್ತು ಕಣೊ ಮಾವ" ಎಂದಳು ಜುಮ್ಮಿ.

"ಇಲವಂತೆ ಕಂಡ್ಕೆ, ಯಾರ್‍ಯಾರು ಸಾಲ ಮಾಡಿ ಕಟ್ಟಕ್ಯಾಗದೆ, ಹಗ್ಗ ವಿಷಾ ಅವುರೊ, ಅಂಥೋರು ಮಾತ್ರ ಹೋಗಬೇಕು ಅಂತ ಈಸ್ಪುರ ಅಂದ. ಅದ್ಕೆ ನಾನೋಗಲಿಲ್ಲ, ಅಂತೂ ಭಾರಿ ಜನ ಬಂದಿದ್ರಂತೆ."

"ಅವುರ್‍ನೆಲ್ಲ ಸಾಯೋ ತೀರ್ಮಾನ ತಗಂಡಿದ್ರೆ?"

"ಊ ಕಣಕ್ಕಾ"

"ಪಾಪ ಕುಮಾರಸ್ವಾಮಿ ಅಂತೂ ಸಾಯೋ ರೈತರನ್ನೆಲ್ಲ ಉಳಿಸಿಗಂಡ ಬುಡು" ಎಂದು ಕಾಳಮಾವ ಸಮಾಧಾನದ ಕಣ್ಣು ಬಿಟ್ಟ. ಆಗ ಸಿಟ್ಟಾದ ಉಗ್ರಿ,

"ಥೂ, ಏನು ಮಾತಾಡ್ತಯಿದ್ದಿರೊ ನೀವು? ರೈತರು ಯಾಕೆ ನ್ಯಾಕಾಯ್ತಾ ಅವುರೆ? ಅಂತದ್ದೇನಾಗ್ಯದೆ? ಸಾಲ ಮನ್ನಾ ಮಾಡಿಲವೆ? ಅಂತ ಕೇಳಕ್ಕೆ ರೈತರ ಕರಸಿದ್ದ ಕುಮಾರಸ್ವಾಮಿ. ನೀವು ನೋಡಿದ್ರೆ ನ್ಯಾಕಾಯ್ಕಳೆರು ಮಾತ್ರ ಹೋಗಿದ್ರು ಅಂತಿರಿ. ನಿಮಗೇನ್ಯೇಳನ?" ಎಂದ.

"ನಮಿಗೇನು ಗೊತ್ತು ಯಾರೊ ಅಂಗಂದ್ರು ಅದ್ಕೆ ಹೇಳಿದೆ" ಎಂದ ಸೀರ.

"ಕುಮಾರಸ್ವಾಮಿ ಸಭೆ ಮಾಡಿ ಸಮಾಧಾನ ಹೇಳಿದ ಅಂತ ಸಾಯರೇನು ಸುಮ್ಮನಾಗಿಲ್ಲ, ಆಗ್ಲೆ ಯರಡು ಜನೋದರಂತೆ ಗೊತ್ತೆ?"

"ಓ ಅಂಗರೆ ಸಾಯರೇ ಬ್ಯಾರೆ, ಬೆಂಗಳೂರಿಗೆ ಹೋಗಿದ್ದೋರೆ ಬ್ಯಾರೆ ಅನ್ನು?"

"ಊ ಕಣೆ, ಸಾಯೋರು ತುಂಬಾ ಮರಿಯಾದಸ್ತರು ಕಣೆ. ಇಷ್ಟು ಜನ ಸತ್ತರಲ್ಲ ಯಾರಿಗಾರ ಬಾಯಿಬುಟ್ಟು ಹೇಳಿದ್ದರೆ? ಹೋಗ್ಲಿ ಕಷ್ಟ ಹೇಳಿಕಂಡಿದ್ದರೆ? ಅಂತ ಜನ ಅವುರು ಅಂಥೋರು ಕುಮಾರಸ್ವಾಮಿ ಕರದಾ ಅಂತ ಓಡೋದರೆ."

"ಆ ಮಂಜಯ್ಯನೂ ಬೆಂಗಳೂರಿಗೋಗಿದ್ದ ಕರಿಲ ಅವುನ್ನ" ಎಂದಳು ಜುಮ್ಮಿ.

"ಲೇ ಮಂಜಯ್ಯಾ ಬಾಯಿಲ್ಲಿ ಜುಮ್ಮಿ ಕರಿತಳೆ."

"ಜುಮ್ಮಕ್ಕಾ ಆಸ್ರಯದ ಮನೆ ವಿಸಿಯ ಎಲ್ಲಿಗೆ ಬತ್ತಕ್ಕಾ?"

"ಆಶ್ರಯದ್ದಿರ್ಲಿ ಮಂಜಯ್ಯಾ ಬೆಂಗಳೂರಿಗೋಗಿದ್ದಲ್ಲ ಅದೂ ಬಸ್ಸು ಮಾಡಿಕಂಡೂ, ರೈತರ ಸಭೆಗೋಗಿದ್ರಾ?"

"ನಾವು ಬಸ್ಸು ಮಾಡಿಕಂಡು ಹೋಗಿದ್ದು ಬೌದ್ಧ ಧರ್ಮ ಸೇರಕ್ಕೆ ಕಣಕ್ಕಾ" ಎಂದ ಮಂಜಯ್ಯ.

"ಬೌದ್ಧ ಧರಮ ಅಂದ್ರೆ ಅದ್ಯಾವ ಜಾತೀನೋ?"

"ಅದೂ ಬಾಳ ಪುರಾತನವಾದದ್ದು ಭಗವಾನ್ ಬುದ್ಧ ಸ್ಥಾಪನೆ ಮಾಡಿದ್ದ. ಇಡೀ ದೇಶಕ್ಕೆಲ್ಲ ಹಬ್ಬತಾಯಿದ್ದಾಗ ಶೃಂಗೇರಿ ಶಂಕರಾಚಾರಿ ಬೌದ್ಧರ ದೇವಸ್ಥಾನನ್ನೆಲ್ಲ ವಡುದು ಬೌದ್ಧರನ್ನೆಲ್ಲ ದೇಶಬುಟ್ಟು ಓಡಿಸಿದ್ನಂತೆ."

"ಅದ್ಯಾಕಂಗೆ ಮಾಡಿದ ಅವುನೂ?" ಎಂದ ಸೀರ.

"ಅದು ಹಿಂದೂ ಧರಮನೆ ನುಂಗತಾಯಿತ್ತಂತೆ. ಬೌದ್ಧರ್‍ನೆಲ್ಲ ಹಿಂದೂ ಧರಮ ನುಂಗಿದ್ರೆ ನಮ್ಮ ಗತಿಯೇನು ಅಂತ ಪುರೋಹಿತರ್‍ನೆಲ್ಲ ಹೆದ್ರಿಕಂಡು ಶೂದ್ರನ್ನೆಲ್ಲ ಎತ್ತಿಕಟ್ಟಿ ಚಾಡಿ ಹೇಳಿ ಬೌದ್ಧರನ್ನೆಲ್ಲ ಓಡಿಸಿದರಂತೆ. ಅವುರು ಚೀನಾ ದೇಸ ಜಪಾನ ಬರ್ಮ, ಸಿಲೋನ್, ಇಲ್ಲೆಲ್ಲ ಹೋಗಿ ಧರ್ಮ ಉಳಿಸಿಗಂಡ್ರು. ಇವತ್ತು ಪ್ರಪಂಚದಲ್ಲಿ ಅದೂ ಒಂದು ದೊಡ್ಡ ಧರ್ಮ, ಅದ್ಕೆ ಹೋಗಿ ಸೇರಿಕಂಡೋ."



"ಯಾರ್‍ದಾರು ಸೇರಿಕಂಡ್ರೀ?"

"ಸುಮಾರು ಯರಡು ಸಾವುರ ಜನಕಿಂತ ಜಾಸ್ತಿ ಜನ ಸೇರಿದೊ ದೊಡ್ಡ ದೊಡ್ಡ ಸಾಯಿತಿಗಳು, ರಾಜಕಾರಣಿಗಳು, ಲಾಯರುಗಳು, ದಾಗುಟ್ರುಗಳು, ಪೊಲೀಸ್‌ನೋರೂ ಸೇರಿದ್ರು."

"ಅಂಗರೀಗ ನೀವು ವಲೇರಲ್ಲಾ ಅನ್ನು?"

"ಉಹು ಬೌದ್ಧರು."

"ಆಚರಣೆ ಏನೂ?" ಎಂದ ಕಾಳಮಾವ.

"ಆಚರಣೆ ಭಾಳ ಕಷ್ಟವಾಗ್ಗದೆ. ಬಾಡು ಬಳ್ಳೆ ತಿನ್ನಂಗಿಲ್ಲ ಮೂಡನಂಬುಕೆ ಬುಡಬೇಕು, ಕ್ಲೀನಾಗಿರಬೇಕು, ... ಏನೇನೊ ಅವೆ" ಎಂದ ಮಂಜಯ್ಯ.

"ಅದ್ಯಾಕೊದ್ರುಲಾ ಕೇವಿಲ್ದೆಯಾ, ಇಲ್ಲೆ ಏನು ಕಡಿಮ್ಯಾಗಿತ್ತಪ್ಪ" ಎಂದ ಸೀರ.

"ಏನೂ ಕಡಿಮಾಗಿರಲಿಲ್ಲ ಸ್ವರುಗದಲ್ಲಿದ್ದಂಗಿದ್ದೊ" ಎಂ... ಮಂಜಯ್ಯ.

"ಅಣಕ ವಡಿತಿಯಲ್ಲಾ? ಸರ್ಕಾ... ಆಶ್ರಯದ ಮನೆ ಕೊಟ್ಟಿತ್ತು, ರೇಸಿ... ಕಾಡು ಕೊಟ್ಟಿತ್ತು, ನಿಮ್ಮ ಕೇರಿ... ಬೋರಿಂಗ್ ಬಾವಿ ಕೊಟ್ಟಿತ್ತು, ಯಾರಾ... ವಲೇರು ಅಂತ ಬೋದ್ರೆ ಅರೆಸ್ಟು ಮಾ... ತಗಂಡೋಗಿ ಕೋರ್ಟಿಗೆ ನಿಲ್ಲುಸ್ತಿತ್ತು ಕಂ... ಇದಕಿಂತ್ಲು ಇನ್ನೇನು ಮಾಡಬೇಕ... ಗಿತ್ತೊ?" ಎಂದ ಸೀರ. ತಾನೇ ಸವಲತ್ತು ಕೊಟ್ಟವನ ಗತ್ತಿನಲ್ಲಿ.

"ಯಲ್ಲಾನು ಕೊಟ್ಟದ್ರಿ ಸೀರಪ್ಪ ನಾನೇನು ಇಲ್ಲ ಅಂದನೆ. ಆದ್ರೆ ನಮ್ಮು... ಹಿಂದೂಗಳು ಅನ್ನೊ ನೀವು ಮನೆ ವಳ... ಸೇರಿಸಿದ್ರಾ. ಹೋಗ್ಲಿ ಅಂತಿಲಿ ಅ... ಹಾಕಿದ್ರಾ? ಬ್ಯಾಡ ಗುಡಿವಳಿಕೆ ಸೇ... ಸಿದ್ರಾ? ವೀರಭದ್ರ ಸ್ವಾಮಿ ಗುಡಿಯಿಂ... ಇಪ್ಪತ್ತಡಿ ದೂರದಲ್ಲಿ ನಿಂತಗಳಂ... ಮಾಡಿದ್ದಿರಿ? ನಮಿಗೂ ದೇವುರ ಕಂ... ಭಕ್ತಿ ಅದೆ ಅನ್ನದು ನಿಮಗೆ ವಳಿಲಿಲ್ಲವೆ... ದೇವರ ಪ್ರಸಾದ ನಮಿಗೂ ಕೊಡಬೇಕ... ಅನ್ನಸಲಿಲ್ವೆ? ನಾವು ತಮಟೆ ಬಡಿಲಿಲ್ಲ ಅಂದ್ರೆ ಹಬ್ಬನೆ... ಇಲವಪ್ಪ" ಎಂದ ಮಂಜಯ್ಯ.

"ಎಜ್ಜಾಟ್ಟ ಕರಟ್ ಕಣೊ ಮಂಜಯ್ಯ, ನಿನ್ನ ಮಾತು ಕೇಳಿದ್ರೆ ಔರಂಗಜೇಬ ಮಾಡಿದ್ದು ಸರಿ ಅನ್ನುಸ್ತಾ ಅದೆ... ಎಂದುಕೊಂಡು ವಾಟಿಸ್ಸೆ ಬಂದ.

"ಅವುರಂಗಿಜೇಬ ಏನು ಮಾಡಿದ್ದುನ್ಲ?" ಎಂದಳು ಜುಮ್ಮಿ.

"ಅವುನು ಹಿಂದೂ ದೇವಸ್ಥಾನ ವಡಸಿದ ಅಂ... ಸಂತೆ ಶಿವರದ ಭೈರಪ್ಪ ಪುಸ್ತಕ ಬರದವುನೆ ಕಣಕ್ಕ."

ಕುವೆಂಪು ಅವರ ಜಾತಿ ಅವರ ಕೃತಿಗಳಿಗಿಲ್ಲವಲ್ಲಾ...

ಅವನಿಗೆ ಯಾವುದೋ ದರ್ದು. ಹಣ ತಕ್ಷಣ ಬೇಕು.

ಏನು ಮಾಡಬೇಕು ಅವನು?

ದರೋಡೆ? ಮಾಡಲು ಧೈರ್ಯ ಸಾಲದು.

ವಂಚನೆ? ಚಾತುರ್ಯ ಇಲ್ಲ.

ಬ್ಯಾಂಕಿಗೆ ಹೋದರೆ ಹೇಗೆ?

ಹಣ ದೊರಕುವ ವೇಳೆಗೆ ಹೆಣ ಬಿದ್ದಿರುತ್ತೆ.

ಇಲ್ಲವೆ ಖಾಸಗಿ ಲೇವಾದೇವಿಯವರು?

ನಗೆ ಮುಖದ ಸ್ವಾಗತದೊಂದಿಗೆ ಹಣವೂ ಲಭ್ಯ.

ಬಡ್ಡಿ? ದರ್ದಿನ ಮೇಲೆ ಅದರ ನಿರ್ಧಾರ. ಅದರ ಚಿಂತೆ ಇಲ್ಲ, ಹಣ ದೊರೆಯಿತಲ್ಲ ಅದೇ ಆನಂದ!

ಹಣ ಬಡ್ಡಿ ಹಿಂತಿರುಗಿಸಬೇಕಲ್ಲ?

ಅದೇನೋ ಜಾಣಮರೆವು!

ಸಾಲಿಗನಿಗೆ ಹಣ ಬಡ್ಡಿ ವಸೂಲಿಯಾಗದೆ ನೆಮ್ಮದಿ ಇರಬೇಕಲ್ಲ?

ಒಂದೆರಡು ಸಲ ಕೇಳಿ ನೋಡಿದ. ಅದೇನೋ ಸಬೂಬು ಅವನದ್ದು, ತನ್ನ ಮಾಮೂಲಿ ವರಸೆಗೆ ಇಳಿದ. ಕತ್ತಿನ ಪಟ್ಟಿ ಹಿಡಿದು ಬಲಗೈ ಮುಷ್ಠಿಯಿಂದ ಮುಖದ ಮೇಲೆ ಬಾರಿಸಿದ. ಮುವತ್ತಾರು ಹಲ್ಲುಗಳಿಂದ ರಾರಾಜಿಸುತ್ತಿದ್ದ ಸಾಲಗಾರನ ಮುಖಾರವಿಂದದಿಂದ ಎರಡು ಹಲ್ಲುಗಳು ಮೈನಸ್ ಆದವು.

ಆದ ಗಾಯಕ್ಕೆ ಇಲಾಜು ಆಗಬೇಕಲ್ಲ? ಆಸ್ಪತ್ರೆಗೆ ಹೋಗುತ್ತಾನೆ. ಹಲ್ಲು ಮುರಿಯಲು ನಿಜವಾದ ಕಾರಣ ಹೇಳದೆ ಇನ್ನೂ ಹಲವು ಹಲ್ಲುಗಳಿಗೆ ಊನ ಎಂಬುದು ಖಾತರಿ. ಆಗಲೇ ಇದರ ಸ್ಯಾಂಪಲ್ ಸಿಕ್ಕಿದೆ.

ಏನು ಹೇಳಬೇಕು ಅವನು?

'ಬಿದ್ದು ಹಲ್ಲು ಮುರ್‍ಕಂಡೆ ಸಾ' ಅಂತಾನೆ!

ಇದು ಖಾಸಗಿ ಲೇವಾದೇವಿಯವರ ಯಶಸ್ಸಿನ ಗುಟ್ಟು. ಇದನ್ನು ಅರಿತ ಕೆಲವು ಬ್ಯಾಂಕಿನವರೂ ಹಣ ವಸೂಲಿಗೆ ಇಂತಹ ಕ್ರಮ ಜರುಗಿಸುತ್ತಿರುವುದು ಸಮಾಧಾನದ ಸಂಗತಿ!

ಇದನ್ನು ಯಾಕೆ ಹೇಳುವುದಕ್ಕೆ ಬಂದೆ ಅಂದರೆ... ಇತ್ತೀಚಿನ ದಿನಗಳಲ್ಲಿ ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಬೇಕಾದರೆ ಇಂತಹ 'ಬಾಹುಬಲಿ'ಗಳ ಸಹಕಾರದಿಂದ ಮಾತ್ರ ಎಂಬುದು ಸ್ಪಟಿಕದಷ್ಟೇ ಸತ್ಯ ಆಗಿದ್ದರೂ ಮಠಾಧೀಶರು, ಖಾವಿಧಾರಿಗಳು ಯಾಕೋ ಏನೋ ಇದುವರೆಗೂ ಹಿಂಜರಿಯುತ್ತಿದ್ದರು. ಇತ್ತೀಚೆಗೆ ಖಾವಿಧಾರಿಯೊಬ್ಬರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ವೀರಾವೇಶದಿಂದ ಕೂಗಾಡಿ ತಮ್ಮ ಬಾಹುಬಲ ಪ್ರದರ್ಶಿಸಿದ್ದು ಸಮಾಧಾನದ ಸಂಗತಿ.



ಈ ಖಾವಿಧಾರಿಗಳು ಯಾಕೆ ಬಾಹುಬಲಿ ಅವತಾರವೆತ್ತಿದರು?

ಬಂಜಗೆರೆ ಜಯಪ್ರಕಾಶ್‌ನೆಂಬ ಧರ್ಮ ಲಂಪಟ ಜಗಜ್ಯೋತಿ ಬಸವೇಶ್ವರರನ್ನು ಮಾದಿಗರ ಹೊಟ್ಟೆಯಲ್ಲಿ ಹುಟ್ಟಿದನೆಂದು ಸಾರಬಹುದೆ? ಅಕ್ಕ ನಾಗಲಾಂಬಿಕೆ ವಿವಾಹ ಪೂರ್ವದಲ್ಲಿಯೇ ಗರ್ಭಿಣಿಯಾಗಿದ್ದಳೆಂದು ಹೇಳಿದರೆ... ಶಿವ, ಶಿವ.... ಕಿವಿಗೆ ಕಾಸಿದ ಸೀಸ ಹುಯ್ದಂತಾಗದೆ... ಕುಂತಿಯೂ ಹೀಗೆಯೇ ಅಲ್ಲವೆ ಕರ್ಣನಿಗೆ ಜನ್ಮ ನೀಡಿದ್ದು ಎಂದೆಲ್ಲ ಹೇಳಿ ಈ ಪಾಪಿಷ್ಠನ ಕೃತಿಯನ್ನು ಹೊಗಳುವುದಕ್ಕೆಂದೇ ಕಾರ್ಯಕ್ರಮ ರೂಪಿಸಲಾಗಿತ್ತು. ಇಂತಹ ಕ್ರಿಯೆಗಳನ್ನು ಬಸವನೇ ಅನುಮೋದಿಸಬಹುದು. ಆದರೆ ಆತನ ಅನುಯಾಯಿಗಳು ಎಂದಿಗೂ ಇಲ್ಲ! ಇಂತಹ ಧರ್ಮಬಾಹಿರ ಕಾರ್ಯಕ್ರಮಗಳು ನಡೆಯುವಲ್ಲೆಲ್ಲ ದೊಂಬಿ ಎಬ್ಬಿಸಿ, ತಮ್ಮ ತೋಳ್ಬಲದ ರುಚಿ ಉಣಿಸಬೇಕು!

ಇಷ್ಟು ಮಾಡಿದರೆ ಸಾಕೆ?

ಸಾಲದು, ಸಾಲದು! 'ಆನು ದೇವ ಹೊರಗಣವನು' ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು!

ಇಲ್ಲಿಗೆ ತೃಪ್ತಿಯಾದೀತೆ?

ಇಲ್ಲ, ಇಲ್ಲ! ಬಂಜಗೆರೆ ಜಯಪ್ರಕಾಶ ಎಂಬ ಪಾಪಿಯನ್ನು ಗಡೀಪಾರು ಮಾಡಬೇಕು.

ಅಲ್ಲ ರಂಶ ಎನ್ನುವ ಸಂಶೋಧನಕಾರರು ಇನ್ನೇನು ಹೊರಬರಲಿರುವ 'ಕರ್ನಾಟಕದಲ್ಲಿ ಅವೈದಿಕ ಸಾಹಿತ್ಯ ಪರಂಪರೆಗಳು' ಎಂಬ ಕೃತಿಯಲ್ಲಿ ಅಕ್ಕನಾಗಲಾಂಬಿಕೆ ಮದುವೆಗೆ ಮುಂಚೆಯೇ ಗರ್ಭಿಣಿಯಾಗಿದ್ದಳು ಅಂತ ಪ್ರತಿಪಾದಿಸಿದ್ದಾರಂತಲ್ಲ.... ಬಸವಣ್ಣ ಬ್ರಾಹ್ಮಣ ಸಮಾಜದಿಂದ ಬಹಿಷ್ಕೃತನಾಗಿದ್ದನು ಅಂತಾನೂ ಹೇಳಿದ್ದಾರಂತಲ್ಲ, ಆ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆ? ಅವರನ್ನೂ ಗಡೀಪಾರು ಮಾಡಬೇಕು...... ಎಂದರೆ ಹೌದು... ಬಸವಣ್ಣನ ಮೂಲ ಹುಡುಕುವವರನ್ನೆಲ್ಲ ಸರಿದೋಡಿಸಬೇಕು!

ಅಂದರೆ ಏನಾಯಿತು... ಬಸವಣ್ಣ ಲಿಂಗಾಯತ... ಬಂಧಿ. ಅವನ ವಚನಗಳು ಓದುವುದಕ್ಕೆ, ಆಚರಣೆ... ಅಲ್ಲ ಎಂದಲ್ಲವೆ ಅನ್ನುವ ಕುಹಕಿಗಳಿಗೆ ಹಾಗೆ... ಅಂದುಕೊಳ್ಳಿ ಎನ್ನುವುದೇ ಉತ್ತರ!

ಇಲ್ಲಿ ಹೀಗಾಯಿತು. ಇನ್ನು ಆವರಣ ನೋಡೋಣ...

ಎಸ್. ಎಲ್. ಭೈರಪ್ಪ ಸತ್ಯಸ್ಯಸತ್ಯ ತೆರೆದಿಟ್ಟದ್ದಾ... ಅಂತ ಕೆಲವರು. ದ್ವೇಷ ಬಿತ್ತುತ್ತಿದ್ದಾರೆ ಎಂದು ಇತರರು...

ಅಣಕ
■ಎಚ್.ಎಲ್. ಕೇಶವಮೂರ್ತಿ

ಯಾವುದು ಸತ್ಯ?

ತನ್ನ ಮನಸ್ಸಿಗೆ ಹಿತವಾದದ್ದು ಸತ್ಯ ಮಿಕ್ಕದ್ದೆಲ್ಲ ಮಿಥ್ಯ...

ಸತ್ಯದ ಹೆಸರಿನಲ್ಲಿ ಭೀಕರ ಅಸತ್ಯದ ಮೆರೆದಾಟ!

ಮುಸಲ್ಮಾನರ ಮೇಲೆ ದ್ವೇಷ ಕಾರಲು ಯಾ... ಭೈರಪ್ಪ ಒಕ್ಕಲಿಗರ ಹೆಣ್ಣು ಮಗಳನ್ನೇ ಬಳಸಿಕೊಂಡಿದ್ದಾರೆ... ಇದಕ್ಕೆ ಬರುವ ಉತ್ತರಗಳು ಬಲು ಮೋಜಿನವಾಗಿದೆ...

ಒಕ್ಕಲಿಗರು ಸುಸಂಸ್ಕೃತರು. ಇತ್ತೀಚಿನ ಒಂದು ವರ... ಯಂತೆ ರಾಜ್ಯದ ಅತ್ಯಂತ ಹೆಚ್ಚಿನ ಸಾಕ್ಷರರು ಒಕ್ಕಲಿಗರು... ಯಾವುದೋ ಒಂದು ಜಾತಿಯ ಹೆಣ್ಣು ಮಗಳ ಬದುಕ... ಚಿತ್ರಿಸುವುದಕ್ಕಿಂತ ತಮ್ಮ ಪರಿಚಯದ ಒಕ್ಕಲಿಗ ಮನೆತನವ... ಬಳಸಿಕೊಂಡಿದ್ದಾರೆ. ಸಂಭಾವಿತರಾದ ಒಕ್ಕಲಿಗರು ಇದ... ಕುರಿತು ಆಕ್ಷೇಪಣೆ ಎತ್ತದಿರುವುದು ಸಂತೋಷ... ಸಂಗತಿಯಾಗಿ ಓರ್ವ ವಿದ್ವಾಂಸ ಮಹನೀಯರಿ... ಗೋಚರಿಸಿದೆ!

ಪದೇ ಪದೇ ತಮ್ಮ ಕೃತಿಗಳಲ್ಲಿ ಭೈರಪ್ಪನವ... ಒಕ್ಕಲಿಗರನ್ನು ಅವಮಾನಗೊಳಿಸುತ್ತಿದ್ದರೂ ಈ ರಾಜ...

ಪ್ರೀತಿ ಕುರುಡಾದರೆ, ಮದುವೆ ಸ್ಪಷ್ಟ ದೃಷ್ಟಿಯನ್ನು ನೀಡುತ್ತದೆ- ಜಾರ್ಜ್.ಸಿ. ಲಿಕ್ಟೆಂಬರ್ಗ್

"ದೇವಸ್ಥಾನ ವಡಸಿದ್ದು ಸರಿ ಅಂತಿಯಲ್ಲಾ?"

"ನೋಡಕ್ಕ ದೇವಸ್ಥಾನದಲ್ಲಿ ಯಾರಿರತರೆ? ಈ ನಮ್ಮ ...ಳೆ ದೊಡ್ಡಪ್ಪನಂಥೋರು ಇರತರೆ. ಗರ್ಭ ಗುಡಿಲಿ ...ಯಾರಿರತರೆ? ಭೈರಾ, ಜೋಯಿಸನಂಥೋರು ಇರತರೆ. ...ನ್ನು ಎಸ್ಸಿ, ಎಸ್‌ಟಿಯಿಂದ ಹಿಡದು ಯಲ್ಲಾ ಕೈಳಜಾತಿ ...ನ ದೇವಸ್ಥಾನದಿಂದ ದೂರ ಇರತರೆ. ಇದನ್ನು ನೋಡಿದ ...ರಂಗಜೇಬ ಅಸಮಾನತೆ ಕೇಂದ್ರಸ್ಥಾನವಾಗಿರೊ ಈ ...ದಿಯ ಕೆಡವಿ ಅಂದಿರದ್ರಲ್ಲಿ ತಪ್ಪೇನು? ಕೆಡುಹುವಾಗ ...ದ್ರ ಜನಕೆ ಏನೂ ಅನ್ನಸಲಿಲ್ಲ, ಅದ್ಯೆ ಹೋಗಿ ತಡಿಲಿಲ್ಲ ...ಣಕ್ಕ. ದಿಸೀಸ್ ಫ್ಯಾಕ್ಟ್ ಅಲವೇನೊ ಮಂಜಯ್ಯ?" ...ಂದ ವಾಟಿಸ್ಸೆ.

"ಅದೇನೊ ನನಿಗೊತ್ತಿಲ್ಲ ಕಣೊ ವಾಟಿಸ್ಸೆ. ಈ ವಲಯ ...ನ್ನಿಸಿಗಳದರಿಂದ ನಾನು ಬಿಡುಗಡೆಯಾಗಬೇಕು."

"ಏನೂ ಹೆದರಬೇಡ, ಬೇಕಾದ್ರೆ ನಾನೂ ನಿನ್ನ ...ಜೊತೆಗಿರತಿನಿ. ಇದೊಂದು ತಲಿಮಾರು ನಿನ್ನ ವಲೇರೋನು ...ನ್ನಬವುದು, ಆದ್ರೆ ಮುಂದಿನ ಜನಾಂಗ ನಿಮ್ಮ ಬೌದ್ಧರೂ ...ಂತರೆ. ನಿಮ್ಮ ಕೇರಿ ಬೌದ್ಧರ ಕೇರಿ ಆಯ್ತದೆ. ನೀವ್ಯಲ್ಲ ...ರಿ ಬೌದ್ಧರ ಮಂದಿರ ಮಾಡಿಕಬವುದು" ಎಂದ ವಾಟಿಸ್ಸೆ.

"ಅದಾಮ್ಯಾಲಿನ ಮಾತು ಕಣೊ ವಾಟಿಸ್ಸೆ. ಈಗ ...ವೊಂದು ನಾಕುಡುಗ್ರು ಹೋಗಿ ಬೌದ್ಧರಾದ್ರೊ. ಇನ್ನ ...ರೂರು ತಿರುಗಿ ಒಪ್ಪಸದಿದಿಯಲ್ಲಾ, ಅದೇ ರಗಳೆ ...ನೊ."

"ಕಿರಿಸ್ತಾನ್ರ ತರ ದುಡ್ಡಿದ್ರೆ ಈಜಿಯಾಗಿ ಮತಾಂತರ ...ಡಬವುದಿತ್ತಲ್ಲೋ? ಜನ ದುಡ್ಡಿಗೆ ಏನು ಬೇಕಾದ್ರು ...ಡೊ ಕಾಲ ಬಂದದೇ"

"ಇದಂಗೆ ಮಾಡಕ್ಕೆ ಬರದಿಲ್ಲ ಕಣೊ. ಯಲ್ಲಾರನೂ ...ಪ್ಪಸಬೇಕು. ಬೆಳ್ಳೂರತ್ರ ಗಂಗಡಕಾರ್ ವಲೇರು, ...ಸವಲೇರು ಅಂತ ಅವ್ರರೆ. ತಿಗುಳ್ರು ಅಂತ್ಲೂ ಅವ್ರರೆ, ...ಬದಳ್ಳಿಲಿ ಯಡಗೈನೋರವ್ರರೆ, ದೊಡ್ಡಾಬಾಲ ತುಪ್ಪದ ...ಡ ಅಲ್ಯಲ್ಲ, ಯಡಗೈಯಿ ಬಲಗೈಯಿ ಜೋರಾಗ್ಯದೆ. ...ನ್ನು ಯಂತ್ಯಂತದೊ, ಹರಿಜನ ಅಂತ್ಲೂ ಇದ್ದರಂತೆ. ...ವುರನ್ಯಲ್ಲ ಅಂಬೇಡ್ಕರ್ ದಾರಿಲೇ ಕರಕಂಡೋಗಿ ಬುದ್ಧನ ...ರೋವತ್ತಿಗೆ ನಮ್ಮ ಆಯಸ್ಸೇ ಮುಗಿತದೇನಪ್ಪ"

"ಆಗ್ಲಿ ಬುಡೊ. ಅಂತೂ ವಲೇರು ಅನ್ನೊದಿಲ್ಲ ...ಂಗಾದ್ರು ಸಾಕು" ಎಂದು ವಾಟಿಸ್ಸೆ ಖುಷಿಯಿಂದ ...ಳುವಾಗ, ಕಾಳಮಾವ ಸೀರಮಾವ ಉಗ್ರಿ ಸಮೇತ ...ಲ್ಲರೂ ಲೋಕಲ್ ಸ್ವಾಮಿಗಳಂತೆ ಪಿಳಿಪಿಳಿ ಕಣ್ಣು ...ಡುತ್ತಾ ಕುಳಿತಿದ್ದರು. ■

...ತಿ ದೊಡ್ಡ ಸಮೂಹವಾದ ಅದು ಇದನ್ನು ಸಹಿಸಿ ...ಂಡಿರುವುದು ಒಂದು ದುರಂತ. 'ಆವರಣ' ಕೃತಿ ...ಂದ ನಂತರವೂ ಅವರು ಪ್ರತಿಭಟಿಸದೆ ಇರುವುದು ...ಹತ್ ಲೋಪವಾಗಿ ವಿಚಾರವಂತರೆನಿಸಿಕೊಂಡ ಕೆಲವರಿಗೆ ...ಣಿಸುತ್ತದೆ!

ಬ್ರಾಹ್ಮಣ ಮನೆತನವನ್ನು ಬಳಸಿಕೊಂಡಿದ್ದರೆ, ಬ್ರಾಹ್ಮಣ ...ಗೆ ಕೋಪ ಬರುತ್ತಿತ್ತಾದರೂ ಅದು ಮಾತಿನಲ್ಲೇ ಉಳಿದು ...ೋಗುತ್ತಿತ್ತು, ತಮ್ಮ ಸಿಟ್ಟಿಗೆ ರಾಜಕೀಯ ಶಕ್ತಿ ತರುವ ...ಕತ್ತು ಅವರಿಗಿಲ್ಲ, ಅದೇ ಒಕ್ಕಲಿಗರಾದರೆ ಸಿಡಿದೇಳುತ್ತಾರೆ. ...ಸ್ತಕದ ಮುಟ್ಟುಗೋಲಿಗೆ ಹೋರಾಡುತ್ತಾರೆ. ತಮ್ಮ ...ತಿಗೆ ಆ ಮೂಲಕ ಪ್ರಚಾರ ಸಿಗುತ್ತದೆ ಎಂದು ಭೈರಪ್ಪ ...ವಿಸಿದ್ದರು. ಆದರೆ ಒಕ್ಕಲಿಗರ ತಣ್ಣನೆ ಪ್ರತಿಕ್ರಿಯೆ ಅವರಿಗೆ ...ವ್ರ ನಿರಾಶೆಯನ್ನುಂಟುಮಾಡಿದೆ! ಇದು ಕೆಲವರ ...ಭಿಪ್ರಾಯ.

ಒಕ್ಕಲಿಗರನ್ನ ಯಾಕೆ ಭೈರಪ್ಪ ಹುಂಬರನ್ನಾಗಿ ಚಿತ್ರಿಸುತ್ತಾರೆ ...ಂದರೆ ಅವರಿಗೆ ಒಕ್ಕಲಿಗರ ಮೇಲೆ ಅಸಾಧ್ಯ ಸಿಟ್ಟು ...ರಬೇಕು. ಯಾರೋ ಬಲಿಷ್ಠ ಒಕ್ಕಲಿಗ ಅವರ ಮನೆಯ ...ಣ್ಣು ಮಕ್ಕಳನ್ನು ಕೆಟ್ಟದಾಗಿ ನಡೆಸಿಕೊಂಡಿರಬೇಕು ಎಂದು ...ರಪ್ಪನವರಂತೆಯೇ ಇತಿಹಾಸ ಬಗೆಯುವ ಪ್ರಚಂಡರಿಗೂ ...ರತೆಯಿಲ್ಲ!

ನಿಜವಾದ ಕಾರಣ ಹೀಗೆ ಇರಬಹುದಾ ಅಂತ....


ಬಹುಪಾಲು ಒಕ್ಕಲಿಗರಿಗೆ ಓದುವ ಅಭ್ಯಾಸ ಇಲ್ಲ. ...ಗಿತೆ ಓದುವುದೆಂದರೆ ಕಾಲವ್ಯರ್ಥ ಎಂದೇ ಅವರ ...ಬಿಕೆ. ಕುವೆಂಪು ನನ್ನ ಆರಾಧಿಸುತ್ತಾರೆ, ಅವರು ತಮ್ಮ ...ತಿಯವರು ಅಂತ. ಅವರ ಕೃತಿಗಳನ್ನು ಓದುವುದಿಲ್ಲ! ...ಕೆ ಅಂದರೆ ಅವರಿಗಿರುವ ಜಾತಿ ಕೃತಿಗಳಿಗಿಲ್ಲವಲ್ಲ! ...ನ್ನು ಯಾವುದೋ ಜಾತಿಯ ಭೈರಪ್ಪ ಅವರ ಕೃತಿ ...ದುತ್ತಾರಾ.... ಅಷ್ಟಿಷ್ಟು ಓದುವ ಅಭ್ಯಾಸ ಇದ್ದವರಿಗೂ ...ವರಣ' ಓದಬೇಕಾದರೆ ಹಿಮಾಲಯದಷ್ಟು ತಾಳ್ಮೆ ...ಬೇಕು! ಯಾರಾದರೂ ಓದಿ ಮುಗಿಸಿದರೆ 'ಇದೊಂದು ... ಕಾದಂಬರಿ' ಅಂತ ಬಿಸಾಕಬಹುದು ಅಷ್ಟೆ. ಇದಕ್ಕೆ ...ವ ಒಕ್ಕಲಿಗ ಪ್ರತಿಕ್ರಿಯೆ ನೀಡುತ್ತಾನೆ?

ಅಲ್ಲ, ನಮ್ಮ ಜಾತಿಯವರನ್ನು ಹೀಯಾಳಿಸಿದ್ದಾರೆ, ...ದ ಜಾತಿಯವರನ್ನು ಕೆಟ್ಟದಾಗಿ ತೋರಿಸಿದ್ದಾರೆ ಹಾಗೆ ...ಗೆ ಅಂತ ಕುಳಿತರೆ... ಯಾರಾದರೂ ಯಾವ ...ಯನ್ನಾದರೂ ರಚಿಸಲು ಸಾಧ್ಯವಾ..... ■


ಹಳೆಯ ವರ್ಷ

1988 ಕಾಲಗರ್ಭ ಸೇರಲಿದೆ. ಈ ವರ್ಷದ ಬಹುಭಾಗ ಆಗಲೇ ನೆನಪು. ಜನವರಿ ತಿಂಗಳಾಗಿ ಹನ್ನೆರಡು ತಿಂಗಳಾಯಿತು. ನನ್ನ ಡೈರಿಯ ಬಹುಭಾಗ ಖಾಲಿ ಖಾಲಿ. ದಿನವೆಲ್ಲ ಕೆಲಸ ಮಾಡಿ ಮಲಗುವ ಮುನ್ನ ಕೂತು ಬರೆಯಲು ಬಿಡದ ದಣಿವು. ಎಲ್ಲೊ ಕೆಲವು ಕಡೆ ಮಾತ್ರ ಗೀಚಿದ್ದೇನೆ. ಒಂದು ಕಡೆ, ಜನವರಿ 15 ರಂದು, ಹೀಗೆ ಬರೆದಿದೆ; ಇವತ್ತು ಸಂಕ್ರಾಂತಿ. ನಿರೀಕ್ಷೆಯನ್ನು ಸುಳ್ಳಾಗಿಸಿ ಹವಾ ತಂಪಾಗಿಯೇ ಇದೆ. ಮಾವಿನ ಹೂವು ಹೆಚ್ಚುಹೆಚ್ಚಾಗಿ ಬರುತ್ತಲೇ ಇವೆ. ಅದೇಕೋ ವಿಚಿತ್ರ ಸಂತೋಷ ಎದೆಯನ್ನು ತುಂಬುತ್ತಿದೆ. ತೋಟದಲ್ಲಿ ಒಬ್ಬರೂ ಇಲ್ಲ, ಹಬ್ಬಕ್ಕೆ ಪಕ್ಕದ ಹಳ್ಳಿಗೆ ಹೋಗಿರಬೇಕು. ನಿಂತಲ್ಲಿ ನಿಲ್ಲಲಾಗುತ್ತಿಲ್ಲ, ಏಕಾಂತತೆಯ ನೆಮ್ಮದಿ ಎಷ್ಟು ಗಾಢವಾದದ್ದು.

ಏಪ್ರಿಲ್‌ನ ಒಂದು ಟಿಪ್ಪಣಿ: ಮುಖ. ಹೆಣ್ಣಿನ ಮುಖ. ಪಶ್ಚಿಮದ



ಮರೆಯುವ ಮುನ್ನ



ಪಿ. ಲಂಕೇಶ್ -ಜನವರಿ 8, 1989

ಛಾಯಾಗ್ರಾಹಕನೊಬ್ಬ ಹೆಣ್ಣಿನ ಮುಖದಷ್ಟು ಸೂಕ್ಷ್ಮವಾದದ್ದು, ಸುಂದರವಾದದ್ದು, ಗೂಢವಾದದ್ದು ಇಲ್ಲದಿದ್ದರೆ ತಾನು ಫೋಟೋಗ್ರಾಫರ್ ಆಗುತ್ತಲೇ ಇರಲಿಲ್ಲವೆಂದು ಹೇಳುತ್ತಾನೆ. ಈತ ಹೇಳುವುದಕ್ಕೆ ಮುಂಚೆಯೇ ನನಗೆ ಗೊತ್ತಿತ್ತು, ಹೆಣ್ಣಿನ ಮುಖ ಯಾವ ನಿಲುವಿನಿಂದ ನೋಡಿದರೂ ಖುಷಿ, ಚಿಂತನೆ ಹುಟ್ಟಿಸುತ್ತದೆ. ಹಿಂದಿನಿಂದ ಕೂಡ. ಕತ್ತು, ಕೆನ್ನೆಯ ರೂಪು ಕೂಡ. ಮೇಲಿನಿಂದ ನೋಡಿದರೆ ಪ್ರಕೃತಿ ಸೌಂದರ್ಯ. ನಿದ್ರೆ ಬರುತ್ತಿದೆ. ಇಷ್ಟವಾದ ಕನಸು ಕಾಣುವಂತಿದ್ದರೆ. ಅದು ಶೇಕ್ಸ್‌ಪಿಯರ್ ತರಹ ಆಗಲು ಕಾತರಿಸಿದಂತೆ. ಮಹಾಕೃತಿ ರಚಿಸಲು ಲೆಕ್ಕಹಾಕಿದಂತೆ. ನಮ್ಮ ಲೆಕ್ಕಕ್ಕೆ ಸಿಕ್ಕದ ಅನೂಹ್ಯ ಈ ಬದುಕು. ಅಂದಹಾಗೆ... ಕನಸು ಕೈ ಮೀರಿದರೆ? ಅಂಥದೊಂದು ಕತೆ ಬರೆಯುವ ಉದ್ದೇಶ ಏನಾಯಿತು?

ಮತ್ತೆ ಹಲವು ಟಿಪ್ಪಣಿಗಳಿವೆ. ಪಿ.ಟಿ. ಉಷಾ ಪತನಗೊಂಡದ್ದು. ಎಡ್‌ಬರ್ಗ್ ವಿಂಬಲ್ಡನ್‌ನಲ್ಲಿ ಗೆದ್ದದ್ದು, ಸ್ಟೆಫಿಯ ಜಯ; ಈ ಸ್ಟೆಫಿ ಗ್ರಾಫ್ ಜಯದತ್ತ ನಡೆಯುತ್ತಲೇ ನೋಡಲು ಅಂದವಾಗಿದ್ದಾಳೆ. ಪಾಕಿಸ್ತಾನದ ಜಿಯಾ ಉರಿದುಬಿದ್ದಿದ್ದಾನೆ. ನಮ್ಮ ಕಡೆ 'ಉರೀತಾನೆ' ಅನ್ನುವುದು ಇಡಿಯಂ; ಲಂಗುಲಗಾಮಿಲ್ಲದೆ ಹಾರಾಡ್ತಾನೆ ಎಂದು ಅರ್ಥ. ಇದು ನಿಮ್ಮಲ್ಲೂ ಚಾಲ್ತಿಯಲ್ಲಿರಬೇಕು.

1988 ನನ್ನ ಅನೇಕ ಗೆಳೆಯರನ್ನು ಕರೆದುಕೊಂಡು ಚರಿತ್ರೆ ಸೇರುತ್ತಿದೆ; ಗೆಳೆಯರು ಸಾಯುವುದು ಅಂದರೆ ನಾನು ಹೆಚ್ಚು ಏಕಾಂಗಿಯಾಗುತ್ತಿದ್ದೇನೆ ಎಂದು ಅರ್ಥ; ಅಥವಾ ನನ್ನ ಬಾಗಿಲ ಮೇಲೆ ಕೂಡ ಸಾವು ತಟ್ಟುವ ಸಾಧ್ಯತೆ ಕಾಣುತ್ತಿದೆ. ಅಂದರೆ ಬದುಕುವ ಕ್ಷಣಗಳ ತ್ವರೆ, ಸೊಗಡು ಹೆಚ್ಚುತ್ತದೆ. ಬದುಕಿನ ಸಂಕ್ಷಿಪ್ತತೆ ಕೂಡ ಇದರಿಂದ ಗೊತ್ತಾಗುತ್ತದೆ.

ನಿಮಗೆ ಹೊಸ ವರ್ಷದ ಶುಭಾಶಯ ಹೇಳುತ್ತಿದ್ದೇನೆ.

ಮಂಡ್ಯಾದಿಂದ



ನಿಮ್ಮನ್ನು ನಿಜವಾದ ಪ್ರೀತಿಯಿಂದ ನೋಡುವವರು ಇರುತ್ತಾರೆ. ನಿನ್ನೆ ಮಂಡ್ಯಾದಿಂದ ಬಂದ ಕಾಗದದ ಭಾಗ ಹೀಗಿದೆ:

"ನಮ್ಮ ನಮನಗಳು. ನಿಮ್ಮ ಪತ್ರಿಕೆಯನ್ನು ಮೊದಲಿನಿಂದಲೂ, ಎಡೆಬಿಡದೆ ಓದುತ್ತಿರುವ ಪೈಕಿ ನಾನೂ ಒಬ್ಬ. ನಿಮ್ಮ ಪತ್ರಿಕೆಯಲ್ಲೆಲ್ಲ ನನ್ನ ಮೆಚ್ಚಿನ ಐಟಂ ಎಂದರೆ ತುಂಟಾಟ, ಮೊದಲು ಓದುವೆ; ಮತ್ತು ನಿಮ್ಮ ಸಂಪಾದಕೀಯ, ಇದನ್ನು ಕೊನೆಯಲ್ಲಿ ಓದುವೆ. ಕಾರಣವಿಷ್ಟೆ, ನಾನ್ಯಾವಾಗಲೂ ಒಳ್ಳೆಯದನ್ನು ಕೊನೆಗೆ ಉಳಿಸಿಕೊಳ್ಳುವೆ.

"ನಾನೆಷ್ಟೋ ಬಾರಿ ನಿಮ್ಮ ಸಂಪಾದಕೀಯವನ್ನು ಓದಿ, ಏನು ಈ ಮನುಷ್ಯ ಇಷ್ಟೆಲ್ಲ ಸ್ವಚ್ಛವಾಗಿ, ದೀರ್ಘವಾಗಿ, ನೇರವಾಗಿ ಯೋಚಿಸಲು; ನುಡಿಯಲು, ನುಡಿದಂತೆ ನಡೆಯಲು ಸಾಧ್ಯವಾ? ಎಂದೆಲ್ಲಾ ಯೋಚಿಸಿದ್ದೇನೆ. ಕೆಲವು ಸ್ನೇಹಿತರ ಬಳಿ ಕೂಡ ಚರ್ಚಿಸಿದ್ದೇನೆ. ಅದಕ್ಕೆಲ್ಲ ಅವರಲ್ಲಿ ಕೆಲವರು ಬಿಡ್ರಿ, ಲಂಕೇಶ್ ಡೋಂಗಿ, ಜಾತಿವಾದಿ, ಬರೆಯುವಷ್ಟು ಶುದ್ಧವಾದ ಮನಸ್ಸಿಲ್ಲ ಎಂದೆಲ್ಲ ಮೂಗು ಮುರಿದಿದ್ದಾರೆ. ನಾನು ಹೆಚ್ಚು ನನ್ನನ್ನೇ ನಂಬುವ ಹಾಗೆ ನೀವು ಕೂಡ ನಿಮ್ಮ ಆತ್ಮಕ್ಕೆ ವಂಚನೆ ಬಗೆಯಲಿಕ್ಕಿಲ್ಲ ಎಂದೆಲ್ಲ ನೆನೆಯುತ್ತೇನೆ...."

ಆಮೇಲೆ ಈ ಪತ್ರ ಬರೆದವರು ಮಂಡ್ಯದ ನಮ್ಮ ಲೇಖಕರ ಬಗ್ಗೆ, ಕರ್ನಾಟಕವನ್ನು ತುಂಬಿರುವ ಅಶಿಸ್ತಿನ, ಸ್ವಾರ್ಥಿಗಳಾದ, ಉದ್ದೇಶರಹಿತ ಪ್ರಜೆಗಳ ಬಗ್ಗೆ, ಇಲ್ಲಿ ರಾಜಕೀಯ ಮಾಡುವವರಿಗೆ ಕಾದಿರುವ ವಿನಾಶದ ಬಗ್ಗೆ ಎಚ್ಚರಿಸಿದ್ದಾರೆ.

ನಾನು ಅವರನ್ನು ಪತ್ರ ಬರೆದು ಕೇಳಿದೆ, "ದಯವಿಟ್ಟು ಹೇಳಿ. ನಮ್ಮ ಕಣ್ಣೆದುರು ಆಗುತ್ತಿರುವುದನ್ನು ನೋಡಿಯೂ ಉಂಡುಟ್ಟು ಬೀಗುತ್ತ ಇದ್ದುಬಿಡುವುದೇ ಸರಿ ಎಂದರೆ, ನಿಮಗೆ ನಿಜಕ್ಕೂ ಅನ್ನಿಸಿದರೆ ದಯವಿಟ್ಟು ತಿಳಿಸಿ. ನಾನು ಹೀಗೆ ದೇಶಾವರಿಯಾಗಿ, ಕೇಳುವ ಗತ್ತಿಗಾಗಿ ಕೇಳುತ್ತಿಲ್ಲ. ನಿಮ್ಮಂಥ ಹತ್ತು ಜನ ದೃಢವಾಗಿ ನಂಬಿ ಹೇಳಿದರೆ... ಸುಮ್ಮನಿದ್ದುಬಿಡುತ್ತೇನೆ."



ಚಂದ್ರಲೇಖ

ಸೋಮವಾರ ತುಂಬ ಕೆಲಸವಿದ್ದರೂ ಬೇಗ ಮನೆಗೆ ಹೋಗಿ 'ಚಂದ್ರಲೇಖ' ನೋಡಿದೆ. ನಾನು ಹೈಸ್ಕೂಲಿನಲ್ಲಿದ್ದಾಗ ನಾಲ್ಕು ಸಲ ನೋಡಿದ ತಮಿಳು ಚಿತ್ರ ಇದು. ಎಸ್.ಎಸ್. ವಾಸನ್ ಎಂಬ ನಿರ್ದೇಶಕ, ನಿರ್ಮಾಪಕ, ಅವಾಂತರಕಾರಿ, ಜೂಜುಕೋರ, ಪ್ರಚಾರ ಚತುರ ಮಾಡಿದ ಅಪ್ಪಟ ರಂಜನೆಯ ಚಿತ್ರ ಇದು. ನನಗಾಗ ಹದಿನೈದು ವರ್ಷ ಇರಬೇಕು. ಶಿವಮೊಗ್ಗೆಯ ಹೊಸ ಚಿತ್ರಮಂದಿರವೊಂದರ ಉದ್ಘಾಟನೆ ಈ ಚಿತ್ರದೊಂದಿಗೆ ಆಗಿತ್ತು. ಇಡೀ ಭಾರತದಲ್ಲಿ ಅಬ್ಬರದೊಂದಿಗೆ ಬಿಡುಗಡೆಯಾಗಿದ್ದ ಈ ಚಿತ್ರದ ನಾಯಕಿ-ವಿಂಧ್ಯ ಪರ್ವತಗಳಂಥ ಸ್ತನಗಳ, ಉದ್ದ ಮೂಗಿನ, ಸುಮಾರು ಎಪ್ಪತ್ತು ಕೇಜಿ ತೂಕದ ಟಿ.ಆರ್. ರಾಜಕುಮಾರಿ. ಬೂಟು, ಸರ್ಕಸ್ಸು, ಚಾಕು, ಬಂದೂಕುಗಳೆಲ್ಲ ಇರುವ ನೃತ್ಯ, ಸಂಗೀತ ಉಕ್ಕಿಸುವ, ಯಾವುದೇ ಕಾಲ ದೇಶದಲ್ಲಿ ನಡೆಯದೆ ಮನಸ್ಸಿನಲ್ಲಿ ತಮ್ಮಟೆ ಹೊಡೆವ 'ಚಂದ್ರಲೇಖ'. ಐದನೆ ಸಲ ನೋಡುವಾಗ ಕೂಡ ಈ ರಂಜನ್, ರಾಧಾ ಎಂಬ ನಾಯಕರ ಅಭಿನಯದಲ್ಲಿ, ಸ್ಟಂಟ್‌ಗಳಲ್ಲಿ ಕರಗಿ ಹೋದೆ. ನನ್ನ ಮಗುತನಕ್ಕೆ ನಾನೇ ತಮಾಷೆ ಮಾಡಿಕೊಂಡೆ. ಆಮೇಲೆ ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾಗಿದ್ದಾಗ ಇದನ್ನೇ, ಈ ನಂಬಿ ನಲಿಯುವ ಗುಣವನ್ನೇ, **Suspension of disbelief** ಎಂದು ಕರೆಯುತ್ತಿದ್ದುದು ನೆನಪಾಯಿತು. ತರ್ಕದ ತರಲೆಗೆ ಮಾರುಹೋಗದೆ ನಿನ್ನನ್ನು ನೀನು ಚಂದ್ರಲೇಖದಲ್ಲಿ ಮುಳುಗಿಸಿಕೊಂಡು ತರ್ಕ ಮೂತಿ ಹಾಕಿದಾಗ ಬೇಕಾದರೆ ನಗು. ನೋಡುವಾಗ ವ್ಯಂಗ್ಯದ ಚೇಷ್ಟೆ ಬೇಡ-ರಸಭಂಗ ಮಾಡಿಕೊಳ್ಳಬೇಡ. ಚಂದ್ರಲೇಖ ಮುಗಿಯುವುದಕ್ಕೆ ಅರ್ಧಗಂಟೆ ಮುಂಚೆಯೇ ಕುರ್ಚಿಯಲ್ಲಿ ಕೂತೇ ನಿದ್ರೆ ಹೊಡೆದಿದ್ದೆ.

ಅಂದಹಾಗೆ 'ಚಂದ್ರಲೇಖಾ' ಚಿತ್ರದ ನಾಯಕನ ಹೆಸರು-ಕಥೆಯಲ್ಲಿ-ಮಾನು. ತೆಲುಗಿನಲ್ಲಿ ಮಾನು ಅಂದರೆ 'ಮರ'ವಂತೆ. ನನಗೆ ಬರುವ ನಾಲ್ಕೈದು ತೆಲುಗು ಪದಗಳಲ್ಲಿ ಇದೂ ಒಂದು. ಒಬ್ಬಳು ತೆಲುಗು ಹುಡುಗಿ ಹೇಳಿದಳು, 'ಏಮ್ರಾ?' ಎನ್ನುವವರು ಅವಿದ್ಯಾವಂತರು; ಸುಸಂಸ್ಕೃತ ತೆಲುಗರು 'ಏಮಂಟೀ' ಎಂದು ಮೃದುವಾಗಿ ಹೇಳುತ್ತಾರಂತೆ.

ಮತ್ತೊಂದು ಪದ 'ವದ್ದಂಡಿ.' (ಬೇಡ, ಸಾಕು). ಚಂದ್ರಲೇಖ ಕುರಿತು ಹೀಗೆನ್ನಲು ನನ್ನ ಬಾಲ್ಯ ಅಡ್ಡಿಯಾಗುತ್ತಿದೆ.

ಒಡಲ ಬೆಂಕಿ

ನನ್ನದೊಂದು ಗ್ರಹಿಕೆ ಇದೆ. ತಪ್ಪಿದ್ದರೆ ಕ್ಷಮಿಸಿ. ರಾಜಕಾರಣಿಯ ಬದುಕಿನಲ್ಲಿ ಶೇ. ಐವತ್ತು ಭಾಗ ನೋವು, ವಿಷಾದದ ಧ್ಯಾಸ ಇರಬೇಕು; ಶೇ. 25 ಭಾಗ ಮಾತ್ರ ತಂತ್ರ ಇರಬೇಕು; ಮಿಕ್ಕ ಶೇ. 25 ಭಾಗ ಕ್ರಿಯೆ.

ನೋವು, ವಿಷಾದ ಎರಡೂ ಪದಗಳು **suffering** ಹೇಳಿದ್ದನ್ನು ಹೇಳುವುದಿಲ್ಲ, ನಿಜವಾದ **suffering** ಇಲ್ಲದೆ ಕವಿ, ಚಿತ್ರಕಾರ, ರಾಜಕಾರಣಿ ಯಾ...ಬೆಳೆಯುವುದಿಲ್ಲ, **suffering** ಇಲ್ಲದೆ ಇಲ್ಲಿ ಏನೂ ಕರಗುವುದಿಲ್ಲ, ರೂಪುಗೊಳ್ಳುವುದಿಲ್ಲ.

ಎಲ್ಲ ಮದುವೆಗಳು ಒಂದೇ ರೀತಿ ಇದ್ದರೂ, ಪ್ರತಿ ದಾಂಪತ್ಯವೂ ವಿಭಿನ್ನ-ಜಾನ್ ಬರ್ಗರ್

ಹೆಣ್ಣಿನ ಮನಸ್ಸಿಗೂ, ದೇವೇಗೌಡರ ಮನಸ್ಸಿಗೂ ವ್ಯತ್ಯಾಸವೇನು?

ಕಣ್ಣಾಮುಚ್ಚಾಲೆ

ಡಿ.ಎಲ್. ಶ್ವೇತಾ, ಹರಪನಹಳ್ಳಿ

ಕೇಸರಿಗೆ, ಕೆಂಪುಗೆ ಇರುವ ವ್ಯತ್ಯಾಸ?

◆ ಮೋದಿಗೂ, ಭಟ್ಟಾಚಾರ್ಯನಿಗೂ ಇರುವಷ್ಟೇ ಕನಿಷ್ಠ ವ್ಯತ್ಯಾಸ!

ಆರ್. ಶರತ್‌ಚಂದ್ರ, ಮೈಸೂರು

ಪಾರ್ಕುಗಳಲ್ಲಿ 'ತುಂಟಾಟ ನಿಷೇಧ' ಜಾರಿಗೊಳಿಸಿದರೆ ಹೇಗೆ?

◆ ಅಂತಹ ಬೋರ್ಡಿನ ಅಡಿಯೇ ತುಂಟಾಟ ನಡೆಸುವವರಿದ್ದಾರೆ. ಹುಷಾರ್!

ಅಕ್ಕಿ ಕೊಟ್ರೇಶ, ಉಪನಾಯಕನಹಳ್ಳಿ

ಅವಳಿಂದ ಹೃದಯ ಘಾಸಿಗೊಂಡಿದೆ. ವಾಸಿಯಾಗಲು ಔಷಧಿ ಇಲ್ಲವೇ?

◆ 'ಬದುಕು' ಎಂಬ ಔಷಧಿ ಇದ್ದೇ ಇದೆ. ಅದನ್ನು ತೆಗೆದುಕೊಂಡು ನೋಡಿ.

ಪಿ. ರಾಜಶೇಖರ, ಮೈಸೂರು

ಈ ಬೇಸಿಗೆ ಮುಗಿಯುವವರೆಗೂ 'ಒಳಉಡುಪು ನಿಷೇಧ' ಜಾರಿಗೊಳಿಸಿದರೆ ಹೇಗೆ?

◆ ನೋಡಬಾರದವರ ಮುಂದೆ ಕಾಣಬಾರದ ಜಾಗೆಗಳಲ್ಲಿ ಕೆರೆತ ಹೆಚ್ಚಾಗುತ್ತದೆ!

ಬೇನಾಳ್ ಉಪೇಂದ್ರ, ಆಲಮಟ್ಟಿ ಡ್ಯಾಂ

ನನ್ನ next ಸಿನಿಮಾದಲ್ಲಿ ಸುಮಾರುಸ್ವಾಮಿ ಹೀರೋ, ಯಡ್ಡಿ ವಿಲನ್. ಹೀರೋಯಿನ್ ಹುಡ್ಕಿ ಕೊಡ್ತೀರಾ?

◆ ಹೀರೋ ಮತ್ತು ವಿಲನ್ ಇಬ್ಬರನ್ನೂ ಪ್ರೀತಿಸುವ ಪಾತ್ರ ಮಾಡಲು ಯಾರೂ ತಯಾರಿಲ್ಲವಲ್ಲಾ...

ಕವಿತಾ ಮಧುಸೂದನ್, ದಾವಣಗೆರೆ

ಇತ್ತೀಚೆಗೆ ಬಂದಿರುವ ಚಿತ್ರನಟ ರಾಧಿಕಾಗೆ ಕೋಟಿಕೋಟಿ ಬೆಲೆಯ ಬಂಗಲೆ ಕಟ್ಟಿಸುವ ತಾಕತ್ತು ಹೇಗೆ ಬಂತು?

◆ ಗಣಿ ಹಣ+ ಗದ್ದುಗೆಯ ಅಹಂ ಕೂಡಿರುವ **suspense story**, ಗೊತ್ತಾ....

ಟಿ.ಯು. ಕುಮಾರ, ರಾಮದುರ್ಗ

ಯಡ್ಡಿ ಮುಖ್ಯಮಂತ್ರಿಯಾದರೆ ಶೋಭಾ ಉಪಮುಖ್ಯಮಂತ್ರಿಯಾಗುವಳೆ?

◆ "ಛೆ. ಛೆ. ಡಿಫ್ಯಾಕ್ಟೋ ಮುಖ್ಯಮಂತ್ರಿ ಆಗ್ತಾಳೆ" ಎಂಬುದು ಅನಂತು ಗ್ಯಾಂಗಿನ ಜಿಗುಪ್ಸೆ!

ಆ.ರಾ. ಮಂಜುನಾಥ, ಗೆದರೆ

ಸಂಸಾರಿಗೆ ಹೆಂಡ್ತೀ ಕಾಟ, ಬ್ರಹ್ಮಚಾರಿಗೆ!?

◆ ಸುತ್ತ ಇರುವವರೆಲ್ಲ ಮೇನಕೆ. ಊರ್ವಶಿ ಇತ್ಯಾದಿ ಅಪ್ಸರೆಗಳಂತೆ ಭಾಸವಾಗುವ ಸಂಕಟ!

ಆರ್. ವರಲಕ್ಷ್ಮಿ ನಾ. ರೆಡ್ಡಿ, ಕೆಜಿಎಫ್

ಹೊಸ ಚಪ್ಪಲಿ ಕಾಲು ಕಡಿಯುತ್ತೆ, ಆದರೆ ಹೊಸ ಹೆಂಡತಿ?

◆ ......ಯನ್ನು ಎಲ್ಲೆಲ್ಲಿ ಕಡಿಬೇಕು ಎಂಬ ಆಸೆ ಹುಟ್ಟುತ್ತೆ!

ಡಿ.ಎಲ್. ನಾಗರಾಜ್, ಹರಪನಹಳ್ಳಿ

ಸರ್ಕಾರಿ ಕೆಲಸ-ಜನರ ಕೆಲಸ. ಆದರೆ ವಿಧಾನಸೌಧದ ಮೇಲೆ ದೇವರ ಕೆಲಸ ಎಂದು ಏಕೆ ಬರೆದಿದ್ದಾರೆ?

◆ ಗುಂಡೂರಾವ್ ಎಂಬ ಬ್ರಾಹ್ಮಣನ ಕೊಡುಗೆ ಅದು.

ಓದಾಸಿದ್ದೇಗೌಡ ಕೆಬ್ಬೆಹಳ್ಳಿ

ಹಿಂದೆ ಭೈರಪ್ಪ-ಕಾರ್ನಾಡ್, ಈಗ ಭೈರಪ್ಪ ಅನಂತಮೂರ್ತಿ, ಮುಂದೆ....?

◆ ಭೈರ V/s ಇಡೀ ರಾಜ್ಯ?!

ಆಲ್ಲೀಮಾರನಹಳ್ಳಿ ಹರೀಶ್, ಕನಕಪುರ

ವಿ.ಕ. ಭಟ್ ಸಿನಿಮಾ ಸಾಹಿತ್ಯ ಬರೀತಾರಂತೆ?


◆ ಹ್ಞೂ... ಸುಧಾ ಮೂರ್ತಿ ಲೆವೆಲ್‌ನ ಸಾಹಿತ್ಯ!

ಬಹುಮಾನಿತ ಪ್ರಶ್ನೆ

ಕೆ. ಶ್ರೀನಿವಾಸ್, ಮಂಡ್ಯ

ಹೆಣ್ಣಿನ ಮನಸ್ಸಿಗೂ, ದೇವೇಗೌಡರ ಮನಸ್ಸಿಗೂ ವ್ಯತ್ಯಾಸವೇನು?

◆ ಆಕೆಯದ್ದು ದೇವಿಯ ಮನಸ್ಸು. ಈತನದ್ದು ದೆವ್ವದ ಮನಸ್ಸು, ಅಷ್ಟೇ.



ಅಬ್ದುಲ್ ರಜಾಕ್, ದೇವದುರ್ಗ

ಚೆಡ್ಡಿ ಯಡ್ಡಿ ಮುಖ್ಯಮಂತ್ರಿಯಾದ ಕನಸು ಕಂಡರಂತೆ!

◆ ಕಾರ್ಟೂನ್‌ಗಳಲ್ಲಿ ಕನಸ್ಸುಗಳು ಮೋಡದ ರೂಪದಲ್ಲಿ ಬರುತ್ತಾವಲ್ಲ. ಹಾಗೆಯೇ ಅದೂನೂ.

ಡಿ.ವಿಲ್. ಚಂದ್ರಿಕ, ಹರಪನಹಳ್ಳಿ

'ಗೌಡರ ರಾಜಧರ್ಮ, ಲಕ್ಷ್ಮಣರೇಖೆ, ಮೂರಂಶದ ಸೂತ್ರ, ಕನ್ನಡಿಗರ ಜನಕಲ್ಯಾಣವೇ?'

◆ ಅವೆಲ್ಲ 'ಸಿಂಹ' ಮತ್ತು 'ಮರಿ' ಸೈನ್ಯದ ಅರಣ್ಯ ಶಾಸನಗಳು!

ವಾರದ ಪ್ರಶ್ನೆ:

ಕಾವೇರಿ ವಿವಾದ ಬಗೆಹರಿಯದೆ 'ಶಿವಾಜಿ' ಚಿತ್ರ ಬಿಡುಗಡೆಯಾಗಿದ್ದು ಹೇಗೆ?

ಮೇ 30ರ ಸಂಚಿಕೆಯ ನಮ್ಮ ಪ್ರಶ್ನೆ: ಅತ್ಯಧಿಕ ಮಾರಾಟವಾಗಿರುವ 'ಆವರಣಕ್ಕೂ' ನೂರು ದಿನ ಓದಿರುವ '16ಟು60' ಚಿತ್ರಕ್ಕೂ ಏನು ಸಂಬಂಧ?

ನಿಮ್ಮ ಉತ್ತರ: ಎರಡರಲ್ಲೂ ಚೆಡ್ಡಿ ಕಳಚಿದೆ.


ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಡಿ.ಎಲ್. ಶ್ವೇತಾ. ಹರಪನಹಳ್ಳಿ

ಬೆದರಿಕೆ ತಂತ್ರಗಳಿಗೆ ಬಗ್ಗದ ಹೋರಾಟಗಳು

ಶೃಂಗೇರಿಯ ಜನಪರ ಹೋರಾಟಗಾರ ಕಲ್ಕುಳಿ ವಿಠಲ್ ಹೆಗ್ಗಡೆ ವಿರುದ್ಧ ಜೆಡಿ(ಎಸ್)-ಬಿಜೆಪಿ ಸಂಯುಕ್ತ ಸರ್ಕಾರ ಸುಳ್ಳು ಆಪಾದನೆಗಳನ್ನು ಹೊರಿಸಿ, ಬೆದರಿಕೆ ತಂತ್ರದಿಂದ ಬಾಯಿ ಮುಚ್ಚಿಸಲು ಈಗ ಹೊರಟಿರುವುದು ಪ್ರಜಾತಂತ್ರ ಪ್ರಿಯ ಮನಸ್ಸುಗಳಿಗೆ ಬಹಳ ವಿಪರ್ಯಾಸದ ಸಂಗತಿಯಾಗಿ ವ್ಯವಸ್ಥೆಯ ಈ ಕುತಂತ್ರ ಖಂಡನಾರ್ಹ.

ವಿಠಲ್ ಹೆಗ್ಗಡೆಯವರು ಲಾಗಾಯ್ತಿನಿಂದ ಮಲೆನಾಡಿನ ಆದಿವಾಸಿ ಗಿರಿಜನರ ಪರವಾಗಿ, ದನಿಯಿಲ್ಲದವರ ದನಿಯಾಗಿ, ಅವರ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಗಾಗಿ ಹೋರಾಡುತ್ತಾ ಬಂದಿದ್ದಾರೆ. ಇದು ಎಲ್ಲರಿಗೂ ತಿಳಿದ ವಿಚಾರ. ಆದಿವಾಸಿ ಹಿತ ರಕ್ಷಣಾ ಸಮಿತಿ, ತುಂಗಭದ್ರಾ ಉಳಿಸಿ ಹೋರಾಟ ಒಕ್ಕೂಟ, ಕುದುರೆಮುಖ ಗಣಿಗಾರಿಕೆ ವಿರುದ್ಧ ಹೋರಾಟ, ಬಾಬಾ ಬುಡನ್‌ಗಿರಿ ಕೋಮು ಸೌಹಾರ್ದ ವೇದಿಕೆ, ಕುದುರೆ ಮುಖ ನ್ಯಾಷನಲ್ ಪಾರ್ಕ್ ವಿರುದ್ಧ ಹೋರಾಟ ಒಕ್ಕೂಟ -ಇತ್ಯಾದಿ ಅನೇಕ ಜನಪರ ಸಂಘಟನೆಗಳಲ್ಲಿ ಹೆಗ್ಗಡೆ ಅವರು ಸಕ್ರಿಯವಾಗಿ ತೊಡಗಿಸಿಕೊಂಡು ಹೋರಾಡುತ್ತಿದ್ದಾರೆ.



ಆದರೆ ಇದು ಮಲೆನಾಡಿನ ಆರೆಊಳಿಗಮಾನ್ಯ ಪಾಳೆಗಾರರಿಗೆ ಹಾಗೂ ಜಾತಿಪದ್ಧತಿಯ ಕೋಮು ವಾದಿಗಳಿಗೆ ಸಹಿಸದೆ ಹೋಗಿದೆ. ಮಲೆನಾಡಿನ ಸಂಪನ್ಮೂಲಗಳನ್ನು ಕಬಳಿಸುವ ಇಂಥ ಬಂಡವಾಳಶಾಹಿಗಳು ಪ್ರಸ್ತುತ ಸರ್ಕಾರದೊಂದಿಗೆ ಶಾಮೀಲಾಗಿ, ವಿಠಲ್ ಹೆಗ್ಗಡೆಯವರು ಸಾಮಾಜಿಕ ಕಾರ್ಯರಂಗದಿಂದ ದೂರ ಸರಿಯುವಂತೆ ಮಾಡಲು, ಅವರ ವಿರುದ್ಧ ಸರ್ಕಾರದಿಂದ ಬೆದರಿಕೆ ನೋಟೀಸ್‌ಗಳನ್ನು ಜಾರಿಗೊಳಿಸುವಂತೆ ನೋಡಿಕೊಳ್ಳಲಾಗಿದೆ. ಒಟ್ಟಾರೆ ಅನ್ಯಾಯಗಳ ವಿರುದ್ಧ ಹಕ್ಕಿನ ಪ್ರಶ್ನೆ ಎತ್ತಿದರೆ, ಅಂಥವರು 'ನಕ್ಸಲೈಟ್‌ಗಳು, ಕೋಮುವಾದ ಪ್ರಚೋದಕರು' ಮುಂತಾಗಿ ಅಪಪ್ರಚಾರ ಮಾಡಲಾಗುತ್ತದೆ. ಸಂಘಪರಿವಾರ ಪ್ರೇರಿತ ಈ ಪ್ರಭುತ್ವ ಹಾಕುತ್ತಿರುವ ಬೆದರಿಕೆ ತಂತ್ರಗಳನ್ನು ಎಲ್ಲಾ ಪ್ರಗತಿಪರ ಸಂಘಟನೆಗಳು ಒಕ್ಕೊರಲಿನಿಂದ ಖಂಡಿಸಿ, ಹೆಗ್ಗಡೆಯವರ ವಿರುದ್ಧ ಅವರ ಕಾರ್ಯಾಚರಣೆ ಕೃತಿ ರೂಪಕ್ಕೆ ಇಳಿಯದಂತೆ, ಎಲ್ಲರೂ ಎಚ್ಚರ ವಹಿಸಬೇಕಾಗಿದೆ.

-ಪ್ರೊ. ಶಿವರಾಮಯ್ಯ, ಬೆಂಗಳೂರು

ಹೊಗಳಿಕೆ

"ನಾಲ್ಕೂ ಶಂಕರಾಚಾರ್ಯರು ಸೇರಿ **17,50,000** ವರ್ಷಗಳಷ್ಟು ಹಳೆಯದಾದ ರಾಮನ ಸೇತುವೆಯನ್ನು ಉಳಿಸಲು ಜನಾಂದೋಲನವನ್ನು ನಡೆಸುತ್ತೇವೆ"- ಎಂದು ಸ್ವಾಮಿ ಪರಮಾನಂದ ಸರಸ್ವತಿಯವರ ಹೇಳಿಕೆಯಲ್ಲೇ ವೈರುಧ್ಯ ಅಡಗಿದೆ. ಅವರೇ ಹೇಳುವಂತೆ ರಾಮಾಯಣ ನಡೆದಿದ್ದು **5** ಸಾವಿರ ವರ್ಷಗಳ ಹಿಂದೆ ಹಾಗೂ ರಾಮನ ಸೇತುವೆ **17** ಲಕ್ಷ ವರ್ಷಗಳಷ್ಟು ಹಳೆಯದು. **5** ಸಾವಿರ ವರ್ಷ ಹಳೆಯ ರಾಮನು **17** ಲಕ್ಷ ವರ್ಷ ಹಿಂದೆ ಹೋಗಿ ಸೇತುವೆ ಕಟ್ಟಿದ್ದು ಹೇಗೆ?

ಮೇಲಾಗಿ ಸಸ್ತನಿಗಳು ಈ ಭೂಮಿ ಮೇಲೆ ಹುಟ್ಟಿ **10** ಲಕ್ಷ ವರ್ಷಗಳೂ ಆಗಿಲ್ಲ, ಅದರಲ್ಲೂ ಮನುಷ್ಯ ಜಾತಿಯ ಸಸ್ತನಿ ಹುಟ್ಟಿದ್ದು ಕೇವಲ ಎರಡು ಲಕ್ಷ ವರ್ಷಗಳ ಹಿಂದೆ. ಮೇಲಾಗಿ ಮಾನವ ಜಾತಿ ಇತರ ವಾನರ ಜಾತಿ ಪ್ರಾಣಿಗಳಿಗಿಂತ ಭಿನ್ನಗೊಂಡು ಬೌದ್ಧಿಕ ವಿಕಾಸಕ್ಕೆ ಒಳಗಾಗಿದ್ದು ಕೇವಲ **50,000** ವರ್ಷಗಳಿಂದೀಚೆಗೆ ಅಷ್ಟೇ. **17** ಲಕ್ಷ ವರ್ಷಗಳ ಹಿಂದೆ ಇದ್ದಿದ್ದು ಕೇವಲ ಮೊಟ್ಟೆ ಇಡುವ ಜಾತಿಯ ಜೀವಿಗಳು ಮಾತ್ರ. ಆಗ ನೇರ ಮರಿ ಹಾಕುವ ಜಾತಿಯ ಸಸ್ತನಿಗಳಿರಲಿಲ್ಲವೆಂದ ಮೇಲೆ, ಮನುಷ್ಯ, ವಾನರ, ಆನೆ, ಸಿಂಹ, ಹಂದಿ ಮುಂತಾದ ಸಸ್ತನಿಗಳು ಇರಲಿಲ್ಲವೆಂದಾದ ಮೇಲೆ, ಮನುಷ್ಯ ರೂಪದ ದೇವರು (ರಾಮ, ಕೃಷ್ಣ) ಅಥವಾ ಅರ್ಧ ಮಾನವ-ಅರ್ಧ ಪ್ರಾಣಿ ರೂಪದ ದೇವರು (ಹನುಮಂತ, ಗಣಪತಿ, ನರಸಿಂಹ, ವರಾಹ) ಇರಲು ಹೇಗೆ ಸಾಧ್ಯ?



ಜನರ ಧಾರ್ಮಿಕ ನಂಬಿಕೆಗಳನ್ನು ಗೌರವಿಸಲೇಬೇಕು ಎಂದು ವಾದಿಸುವುದಾದರೆ, ಕುರಾನ್, ಬೈಬಲ್, ವೇದ ಮುಂತಾದ ಧಾರ್ಮಿಕ ಗ್ರಂಥಗಳಲ್ಲಿ ಸ್ಪಷ್ಟವಾಗಿ ಬರೆದಿರುವಂತೆ-ಭೂಮಿ ಚಪ್ಪಟೆಯಾಗಿದ್ದು ಒಂದೇ ಕಡೆ ನಿಂತಿದೆ, ಸೂರ್ಯನೇ ಭೂಮಿಯ ಸುತ್ತ ತಿರುಗುವುದು ಎಂಬ ನಂಬಿಕೆಯನ್ನೂ ನಾವು ಗೌರವಿಸಬೇಕು ಹಾಗೂ ಶಾಲೆಗಳಲ್ಲಿ ನಮ್ಮ ಮಕ್ಕಳಿಗೆ ಆಧುನಿಕ ಭೂಗೋಳ ಕಲಿಸಲೇಬಾರದು ಅಲ್ಲವೆ?

ರಾಮಾಯಣ ಕಾಲದಲ್ಲಿ ಇನ್ನೂ ಉಳಿದಿರಬಹುದಾದ ನೈಸರ್ಗಿಕ ಲಂಕಾ ಸೇತುವೆ ಕಂಡು ಕವಿ ವಾಲ್ಮೀಕಿಯ ಕಲ್ಪನಾ ಶಕ್ತಿ ವಿಹಾರಕ್ಕೆ ಹೊರಟು ವಾನರರು ರಾಮನಿಗಾಗಿ ಸೇತುವೆ ಕಟ್ಟಿದ ಕಥೆ ಹುಟ್ಟಿರಬಹುದು ಅಷ್ಟೇ. ಮೊದಲಿನಿಂದಲೂ ಭಾರತೀಯರ ಮೆದುಳು ಕಥೆ ಕಾವ್ಯ ಹೆಣೆಯುವಲ್ಲಿ, ಹೊಸ-ಹೊಸ ದೇವರನ್ನು ಹುಟ್ಟು ಹಾಕುವಲ್ಲಿ, ಅದ್ವಿತೀಯ. ಜೊತೆಗೆ ಪ್ರಕೃತಿ ವೈಚಿತ್ರ್ಯ ಕಂಡಲ್ಲೆಲ್ಲಾ ಕಾಲ್ಪನಿಕ ಕಥೆ-ಕಾವ್ಯ-ಸ್ಥಳ ಮಹಾತ್ಮೆ ಹೊಸೆದು ದೇವರ ಕ್ಷೇತ್ರಗಳನ್ನು ಸೃಷ್ಟಿಸುವುದರಲ್ಲಿ ಭಾರತೀಯರಿಗೆ ಸರಿಸಾಟಿ ಜಗತ್ತಿನಲ್ಲೆಲ್ಲೂ ಇಲ್ಲ!

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಬಾಗಲಕೋಟೆ ಜಿಲ್ಲಾ ವರದಿಗಾರ ವಿ.ಪಿ. ಮೇಘರಾಜ್‌ರವರ ಮೇಲೆ ನಡೆದಿರುವ ಹಲ್ಲೆ ಪ್ರಕರಣದ ಬಗ್ಗೆ ತಾವುಗಳು ಖಂಡಿಸಿ ಬರೆದಿರುವುದು ಸ್ವಾಗತಾರ್ಹ. ಬಾಗಲಕೋಟೆ ಜಿಲ್ಲೆ ಗುಳೇದಗುಡ್ಡ ಪಟ್ಟಣದ ಸರ್ಕಾರಿ ವೈದ್ಯ ಮತ್ತು ಎಸ್.ಐ. ಧೂಳಖೇಡ ಇವರುಗಳು ಮೇಘರಾಜ್‌ರವರ ಮೇಲೆ ಸಲ್ಲದ ಅಪವಾದ ಹೊರಿಸಿ ಕೇಸ್ ಜಡಿದು ಅವಾಚ್ಯ ಶಬ್ದಗಳಿಂದ ಬೈದು ತಮ್ಮ ಷಂಡತನದ ಪರಮಾವಧಿ ಅನುಸರಿಸಿರುವುದು ವಿಪರ್ಯಾಸಕರ. ಬಾಗಲಕೋಟೆ ಜಿಲ್ಲೆ ಅನ್ಯಾಯ ಅನೀತಿ ಭ್ರಷ್ಟಾಚಾರದಿಂದ ರಾಜಾರೋಷವಾಗಿ ನಡೆಯುತ್ತಿದೆ. ಇಂಥವುಗಳನ್ನು ವಸ್ತುನಿಷ್ಠ ವರದಿ ಮಾಡುವ ನಮ್ಮ ಲಂಕೇಶ್ ವರದಿಗಾರ ಮೇಘರಾಜ್ ಮೇಲಿನ ಹಲ್ಲೆ ಖಂಡನೀಯವಾದದ್ದು. ಪತ್ರಿಕೆ ವರದಿಯಿಂದಾದರೂ ಬದ್ಮಾಶ್ ವೈದ್ಯ ಡಾ. ಬಂಟನೂರ ಮತ್ತು ಎಸ್‌ಐ ಧೂಳಖೇಡ ಆತ್ಮವಿಮರ್ಶೆ ಮಾಡಿಕೊಳ್ಳಲಿ.

-ರಮಜಾನ ಕೆ. ಕೊರ್ತಿ,
ಬಾದಾಮಿ

ನಿಮ್ಮ ಪತ್ರಿಕೆ, ನಿಮ್ಮ ತಂದೆಯವರ ತತ್ವಗಳನ್ನು, ಸಿದ್ಧಾಂತಗಳನ್ನು ಮುಂದುವರೆಸುತ್ತಿರುವುದಕ್ಕೆ ತುಂಬಾ ಹೆಮ್ಮೆ ಎನಿಸುತ್ತಿದೆ. ನಿಮ್ಮ ನಿರ್ಭಯ ಹೋರಾಟ ಎಂದೆಂದಿಗೂ ಹೀಗೆಯೇ ಮುಂದುವರೆಯಲಿ.

-ಎಸ್. ಸಿದ್ಧಯ್ಯ, ಶಿವಮೊಗ್ಗ

ಪಿ. ಲಂಕೇಶರು, ತೇಜಸ್ವಿಯವರು ಇಲ್ಲದೆ ಒಬ್ಬಂಟಿಯಾಗಿರುವ ಹಿರಿಯರಾದ ಪ್ರೊ. ಕೆ. ರಾಮದಾಸ್‌ರವರ ಅನಾರೋಗ್ಯದ ಬಗ್ಗೆ ಜೂನ್ **13**ರ 'ಲಂಕೇಶ್'ನಲ್ಲಿ ಓದಿ ವಿಷಾದವಾಯಿತು.

ರವೀಂದ್ರ ಕಲಾಕ್ಷೇತ್ರದಲ್ಲಿ 'ಲಂಕೇಶ್' ವಾರಪತ್ರಿಕೆಯ ಎರಡು ವಾರ್ಷಿಕೋತ್ಸವಗಳಲ್ಲಿ ಭಾಗವಹಿಸಿದ್ದ ರಾಮದಾಸ್‌ರು ಟಿಪ್ಪುಸುಲ್ತಾನ್ ಬಗ್ಗೆ ಅವಿವೇಕ, ಅಜ್ಞಾನದ ಮಾತುಗಳನ್ನಾಡಿದ್ದ ಚೆಡ್ಡಿ ಪಕ್ಷದ ಜಲಸಂಪನ್ಮೂಲ ಮಂತ್ರಿ ಶಂಕರಮೂರ್ತಿ ಬಗ್ಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದು ನೆನಪಿನಲ್ಲಿದೆ.

ಶಾಶ್ವತ ವಿರೋಧ ಪಕ್ಷದವರಾದ ರಾಮದಾಸ್‌ರು ರಾಜಕಾರಣಿಗಳ ಕೊಳಕನ್ನು ಟೀಕಿಸುತ್ತಾ ಸಮಾಜದಲ್ಲಿನ ಕೊಳಕುಗಳ ಬಗ್ಗೆ ನಮಗೆಲ್ಲಾ ತಿಳಿಸುತ್ತಾ ಹೆಚ್ಚುಹೆಚ್ಚು ದಿನ ಇರಲಿ ಎಂದು ಪ್ರೀತಿಯಿಂದ ಆಶಿಸುತ್ತೇನೆ.

-ಡಿ.ಎಲ್. ಮಂಜು, ಕೇರಳ

ದಿನಾಂಕ **20.6.2007**ರ ಲಂಕೇಶ್ ಸಂಚಿಕೆಯಲ್ಲಿ 'ಸ್ವತಂತ್ರ ಪಾಳ್ಯ' ಸಿನಿಮಾದ ವಿವಾದದ ಬಗ್ಗೆ ವರದಿಯೊಂದು ಪ್ರಕಟವಾಗಿದೆ. ಅದರಲ್ಲಿ ನಾನು ನಾಯಕಿ ದಾಮಿನಿಗೆ ಬೆದರಿಕೆ ಹಾಕಿದನೆಂತಲೂ, ಸಿನಿಮಾ ನಿರ್ಮಾಪಕ ನಾನೇ ಎಂತಲೂ ಹೇಳಿಕೊಂಡಿದ್ದೇನೆ ಎಂದು ಬರೆದಿದ್ದೀರಿ. ಅಲ್ಲದೆ ನನ್ನ ವೈಯಕ್ತಿಕ ಹಾಗೂ ಕುಟುಂಬದ ಬಗ್ಗೆ ಮನಸ್ಸಿಗೆ ನೋವಾಗುವಂತಹ ಸತ್ಯಕ್ಕೆ ದೂರವಾದ ಮಾಹಿತಿಗಳಿವೆ.




ನಾನು 'ಸ್ವತಂತ್ರಪಾಳ್ಯ' ಸಿನಿಮಾಗೆ ಫೈನಾನ್ಸ್ ಮಾಡಿರುವುದು ನಿಜ, ಅದೇ ರೀತಿ ಆ ಸಿನಿಮಾದ ಹಕ್ಕುಗಳೂ ಈಗ ನನ್ನ ಬಳಿ ಇದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳೂ ಇವೆ. ಅಲ್ಲದೆ ನಾನು 'ಪ್ರಾರಂಭ' ಎಂಬ ಸಿನಿಮಾದಲ್ಲಿ ನಾಯಕನಾಗಿಯೂ ನಟಿಸುತ್ತಿದ್ದೇನೆ. ನಾನು ಒಬ್ಬ ಕಲಾವಿದನಾಗಿರುವುದರಿಂದ ನಟಿ ದಾಮಿನಿಗೆ ಫೋನ್ ಮಾಡಿ ಬೆದರಿಸಿಲ್ಲ ಎಂಬುದಾಗಿ ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ.

-ಶಂಕರ್,
ನಟ-ನಿರ್ಮಾಪಕ, ಬೆಂಗಳೂರು

ನಾನು ಮತ್ತು ನನ್ನ ಗಂಡ ಎಂದೂ ವಿಚ್ಛೇದನೆ ಬಗ್ಗೆ ಯೋಚಿಸಲಿಲ್ಲ, ಆದರೆ ಪರಸ್ಪರರನ್ನು ಕೊಲ್ಲುವ ಬಗ್ಗೆ ಯೋಚಿಸಿದ್ದುಂಟು-ಜಾಯ್ಸ್ ಬ್ರದರ್ಸ್

ಅಪ್ಪಾಜಿ ಇನ್ನೂ ಜೀವಂತವಾಗಿದ್ದಾರೆ



ಬೆಂಗಳೂರಿನಲ್ಲಿದ್ದಾಗ ಒಂದೇ ಒಂದು ದಿನ ಕೂಡಾ ನಾವು ಅಪ್ಪಾಜಿಯ ಸಮಾಧಿಗೆ ಭೇಟಿ ನೀಡುವುದನ್ನು ಮಿಸ್ ಮಾಡಿಕೊಂಡಿಲ್ಲ. ಈ ಸಂದರ್ಭದಲ್ಲಿ ನಾನು ಗಮನಿಸಿರುವುದೇನೆಂದರೆ ಬೆಳಗ್ಗಿನ ಜಾವವಾಗಲಿ, ಮಧ್ಯರಾತ್ರಿಯಾಗಲಿ ನಾವು ಅಲ್ಲಿ ಹೋದಾಗ ನೂರಾರು ಅಭಿಮಾನಿಗಳು ಇದ್ದೇ ಇರುತ್ತಾರೆ. ಅವರನ್ನೆಲ್ಲಾ ನೋಡಿದಾಗ ನಿಜಕ್ಕೂ ನಮ್ಮ ದುಃಖ ದೂರವಾಗುತ್ತದೆ. ಬಹುಶಃ ದಿನನಿತ್ಯವೂ ಅಪ್ಪಾಜಿಯ ಸಮಾಧಿ ಬಳಿ ಜನರು ಬರುತ್ತಿರುವುದು ಅವರು ಇನ್ನೂ ಬದುಕಿದ್ದಾರೆ, ಜೀವಂತವಾಗಿದ್ದಾರೆ ಎಂಬುದರ ಲಕ್ಷಣ ಎಂದು ಭಾವಿಸುತ್ತೇನೆ.

ದಗದಗನೆ ಉರಿಯುತ್ತಿದ್ದ ಪೆಟ್ರೋಲ್ ಬಂಕ್‌ನ ಒಳಗಿನಿಂದ ನಮ್ಮ ವಾಹನ ತೂರಿ ಬಂದ ನಂತರ ಕಂಠೀರವ ಸ್ಟುಡಿಯೋದಲ್ಲಿ ಅಪ್ಪಾಜಿಯ ಸಮಾಧಿಗಾಗಿ ನಿಗದಿಪಡಿಸಿದ್ದ ಸ್ಥಳವನ್ನು ತಲುಪಲು ನಾವು ಇನ್ನಷ್ಟು ಶ್ರಮಪಡಬೇಕಾಯಿತು. ನಾವು ಸಮಾಧಿ ಬಳಿ ಇನ್ನೇನು ತಲುಪಬೇಕು, ಹತ್ತಿರದಲ್ಲೇ ಪೊಲೀಸರು ಗುಂಡು ಹಾರಿಸುತ್ತಿದ್ದದ್ದನ್ನು ನೋಡಿ ನನಗೆ ಸಂಕಟವಾಯಿತು. ಎಲ್ಲೆಡೆ ಗೊಂದಲ ಮತ್ತು ಗಲಾಟೆ, ಅಭಿಮಾನಿ ಸಾಗರವನ್ನು ನಿಯಂತ್ರಿಸಲು ಪೊಲೀಸರು ಪ್ರಯಾಸ ಪಡುತ್ತಿದ್ದರು. ಆದರೆ ನಾವು ಅಸಹಾಯಕರಾಗಿದ್ದೆವು. ಎಲ್ಲರೂ ಅಪ್ಪಾಜಿಯ ನಿಧನದಿಂದಾಗಿ ಭಾವನಾತ್ಮಕವಾಗಿ ಜರ್ಜರಿತರಾಗಿದ್ದರು. ಎಲ್ಲರಲ್ಲೂ ಒಂದು ರೀತಿಯ ಸಮೂಹ ಸನ್ನಿ ಆವರಿಸಿದಂತಿತ್ತು, ಎಲ್ಲರೂ ಅಳುತ್ತಿದ್ದಾರೆ, ಎಲ್ಲರೂ ಭಾವುಕರಾಗಿದ್ದಾರೆ. ಯಾರೂ ಯಾರ ಮಾತನ್ನೂ ಕೇಳುವ ಪರಿಸ್ಥಿತಿಯಲ್ಲಿರಲಿಲ್ಲ.

ಇನ್ನೇನು ಕೆಲವೇ ಕ್ಷಣಗಳಲ್ಲಿ ನಮ್ಮೆಲ್ಲರ ಪ್ರೀತಿಯ ಅಣ್ಣಾವ್ರು ಮಣ್ಣಾಗುತ್ತಿದ್ದಾರಲ್ಲ ಎಂಬ ನೋವು ಜನರಲ್ಲಿತ್ತು ಅನ್ನಿಸುತ್ತೆ, ಆ ಕಾರಣದಿಂದಲೇ ವಾಹನದಿಂದ ಅಪ್ಪಾಜಿಯ ಪಾರ್ಥಿವ ಶರೀರವನ್ನು ಕೆಳಗಿಳಿಸಲು — ನಾವು ಕೈ ಮುಗಿದು ಕಾಡಿ-ಬೇಡಿದರೂ — ನಮಗೆ ಅಭಿಮಾನಿ ದೇವರುಗಳು ಅವಕಾಶವನ್ನೇ ನೀಡಲಿಲ್ಲ. ಆದರೆ ಅದು ಅವರ ತಪ್ಪು ಎಂದು ನಾನು ಭಾವಿಸುವುದಿಲ್ಲ. ಯಾಕೆಂದರೆ ಅವರೂ ನಮ್ಮಂತೆ ನೋವಿನಲ್ಲಿದ್ದರು.

ಕೊನೆಗೂ ನೆಪಮಾತ್ರಕ್ಕೆ ನಾವು ಅಪ್ಪಾಜಿಯ ದೇಹವನ್ನು ಸಮಾಧಿಯೊಳಗೆ ಇರಿಸಲು ಸಾಧ್ಯವಾಯಿತು. ಆ ಸಂದರ್ಭದಲ್ಲೂ ನಮ್ಮ ಜೊತೆಜೊತೆಗೆ ಕೆಲವು ಪತ್ರಿಕಾ ಛಾಯಾಗ್ರಾಹಕರು, ಚಾನೆಲ್‌ಗಳವರು ಸಮಾಧಿಯೊಳಗೆ ಬಿದ್ದೇಬಿಟ್ಟರು. ನಾನು ಕತ್ತೆತ್ತಿ ನೋಡುತ್ತಿದ್ದಂತೇ ಇನ್ನೂ ಕೆಲವು ಜನ ಬೀಳುತ್ತಿದ್ದರು. ಪರಿಸ್ಥಿತಿ ಕೈಮೀರಿ ಹೋಗುತ್ತಿದ್ದುದನ್ನು ಗಮನಿಸಿದ ಪೊಲೀಸರು ಕೂಡಲೇ ನಮ್ಮನ್ನು ಮೇಲೆ ಬರುವಂತೆ ಸೂಚಿಸಿದರು. ಹಾಗೇ ನೆರೆದಿದ್ದ ಜನರನ್ನು ಪೊಲೀಸರು ಚದುರಿಸತೊಡಗಿದರು.

ಅಪ್ಪಾಜಿಯ ಅಂತ್ಯಕ್ರಿಯೆಗಳನ್ನು ಸರಿಯಾಗಿ ಮಾಡಲಾಗಲಿಲ್ಲವಲ್ಲಾ ಎಂಬ ಕೊರಗು, ದುಃಖ ನನ್ನನ್ನು ಕಾಡಲೇ ಇಲ್ಲ, ಯಾಕೆಂದರೆ ಇಂತಹ ಕ್ರಿಯೆಗಳು ಎಷ್ಟು ಸರಿ? ಎಷ್ಟು ತಪ್ಪು? ಎಂಬ ಪ್ರಶ್ನೆಗಳು ನನ್ನನ್ನು ಮುಂದಿನಿಂದಲೂ ಕಾಡುತ್ತಿವೆ. ಆದರೆ ಸಂಪ್ರದಾಯವೆಂದ ಮೇಲೆ ನಮಗೆ ಇಷ್ಟವಿದೆಯೋ ಇಲ್ಲವೋ ನಾವು ಇದನ್ನೆಲ್ಲ ಮಾಡಲೇಬೇಕು ತಾನೆ?

ಇದಕ್ಕಿಂತ ಮುಖ್ಯವಾಗಿ ಅಪ್ಪಾಜಿಗೋಸ್ಕರ ಕರ್ನಾಟಕದ ಅಸಂಖ್ಯಾತ ಜನರು ಕಣ್ಣೀರು ಸುರಿಸುತ್ತಿದ್ದಾರೆ ಎಂದಮೇಲೆ ಅವರು ಪುಣ್ಯಾತ್ಮನೇ ಇರಬೇಕೆಂದು ನನಗನ್ನಿಸಿತು. ಜಾತಿ, ಮತ ಭೇದಗಳಿಲ್ಲದೆ ಎಲ್ಲಾ ವಯೋಮಾನದ ಜನರೂ ಒಟ್ಟೊಂದು ಭಾವೋದ್ವೇಗಕ್ಕೆ ಒಳಗಾಗಿ ಅಂತಿಮ ನಮನ ಸಲ್ಲಿಸಿದ್ದೇ ಯಾವ ಸಂಪ್ರದಾಯದ ಕ್ರಿಯೆಗಳಿಗಿಂತ ದೊಡ್ಡ ವಿಷಯ ಎಂಬ ನಿಲುವು ನನ್ನದು.

ಅಂದು ರಾತ್ರಿ ಪೊಲೀಸರ ಒತ್ತಾಯದ ಮೇರೆಗೆ ನಾವು ಮತ್ತೆ ಅಪ್ಪಾಜಿಯ ಸಮಾಧಿ ಬಳಿಗೆ ಬಂದೆವು. "ಸಾಯಂಕಾಲದ ಹೊತ್ತು ನಿಮಗೆ ಸರಿಯಾಗಿ ಅಂತಿಮ ವಿಧಿ ವಿಧಾನಗಳನ್ನು ಮಾಡಲು ಅವಕಾಶ ಮಾಡಿಕೊಡಲು ಸಾಧ್ಯವಾಗದ್ದಕ್ಕೆ ಈಗ ಈ ವ್ಯವಸ್ಥೆ ಮಾಡಿದ್ದೇವೆ, ಬನ್ನಿ" ಎಂದರು. ಪೊಲೀಸರದ್ದು ಕೂಡ ಎಂತಹ ಮೃದು ಮನಸ್ಸು ನೋಡಿ! ಹೀಗಾಗಿ ಅವರು ವ್ಯವಸ್ಥೆ ಮಾಡಿದ ನಂತರ ರಾತ್ರಿ ಹೋಗಿ ಅಪ್ಪಾಜಿಗೆ ಮತ್ತೊಮ್ಮೆ ಎಲ್ಲ ರೀತಿಯ ವಿಧಿವಿಧಾನಗಳನ್ನು ನೆರವೇರಿಸಿದೆವು. ಆಗಲೂ ಅಲ್ಲಿ ಅಸಂಖ್ಯಾತ ಸಂಖ್ಯೆಯಲ್ಲಿ ಜನರು ಸೇರಿದ್ದರೂ ಪೊಲೀಸರು ಅವರನ್ನು ಹತೋಟಿಯಲ್ಲಿಟ್ಟಿದ್ದರು. ಕೆಲವೇ ಗಂಟೆಗಳ ಅಂತರದಲ್ಲಿ ಅಪ್ಪಾಜಿಯನ್ನು ಎರಡನೇ ಬಾರಿ ಮಣ್ಣು ಮಾಡಿದ ನಂತರ ನಾವು ಪೊಲೀಸ್ ವ್ಯಾನಿನಲ್ಲಿ ಮನೆ ಸೇರಿದೆವು.

ಮಾಲೀಕನಿಲ್ಲದ ಮನೆಯಲ್ಲಿ ಮೊದಲ ಬಾರಿಗೆ ಸ್ಮಶಾನ ಮೌನ ಆವರಿಸಿತ್ತು. ಇಪ್ಪತ್ತ ನಾಲ್ಕು ಗಂಟೆಗಳ ಕಾಲ ನಿರಂತರವಾಗಿ ಅನ್ನಾಹಾರವಿಲ್ಲದೆ ನಾವು ಅಪ್ಪಾಜಿಯ ಅಂತಿಮಯಾತ್ರೆಯಲ್ಲಿ ತೊಡಗಿದ್ದರೂ ಮನೆಗೆ ಬಂದ ನಂತರವೂ ಯಾರಿಗೂ ಊಟ ತಿಂಡಿ ಮಾಡುವ ಮನಸ್ಸಿರಲಿಲ್ಲ. ನಾವೆಲ್ಲಾ ಅಪ್ಪಾಜಿ ಹೆಚ್ಚಾಗಿ ಕೊನೆ ದಿನಗಳನ್ನು ಕಳೆಯುತ್ತಿದ್ದ ದೇವರ ಕೋಣೆಯಲ್ಲಿ ಸೇರಿದ್ದರೂ ಯಾರೂ ಏನೂ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಯಾರು ಎಷ್ಟು ಹೊತ್ತಿಗೆ ನಿದ್ರಾದೇವಿಗೆ ಶರಣಾದರೆಂಬುದು ಕೂಡ ಗೊತ್ತಿಲ್ಲ, ಅಲ್ಲಲ್ಲೇ ಹಾಗಾಗೇ ಮಲಗಿದ್ದೆವು ಎಂದು ಗೊತ್ತಾಗಿದ್ದೇ ಮರುದಿನ ಬೆಳಿಗ್ಗೆ ನಾವು ಕಣ್ಣರಳಿಸಿ ಎದ್ದಾಗ.

ಅಪ್ಪಾಜಿಯ ನಿಧನ ಬಗ್ಗೆ ನಾನು ಸುಮ್ಮನೆ ನನ್ನಷ್ಟಕ್ಕೆ ಆಲೋಚಿಸಿದಾಗ ಅನ್ನಿಸಿದ್ದು ಇದು: ಅವರು ನಮ್ಮ ಮನೆಯ ಯಜಮಾನ ಮಾತ್ರವಲ್ಲ, ನಮ್ಮ ರಾಜ್ಯದ ಜನರ ಸ್ವಾಭಿಮಾನದ ಮತ್ತು ಜಾಗೃತ ಮನಸ್ಸಿನ ಸಂಕೇತವಾಗಿದ್ದರು, ಎಲ್ಲರ ಸಾಂಸ್ಕೃತಿಕ ರಾಯಭಾರಿಯಾಗಿ ಬದುಕಿ ಬಾಳಿದರು ಎಂಬುದು.

ಇದು ನನ್ನ ಆತ್ಮಚರಿತ್ರೆಯೋ ಅಥವಾ ಅಪ್ಪಾಜಿಯ ಜೀವನಗಾಥೆಯೋ ಎಂಬ ತೀರ್ಮಾನವನ್ನು ನಿಮಗೇ ಬಿಟ್ಟಿದ್ದೇನೆ. ನನ್ನ ಬಗ್ಗೆ ನಾನು ಹೇಳಬೇಕಾಗಿದ್ದಕ್ಕಿಂತ ನನ್ನ ಅಪ್ಪಾಜಿಯ ಬಗ್ಗೆಯೇ ಹೆಚ್ಚು ಹೇಳಿದ್ದೇನೆ. ಅಪ್ಪಾಜಿಯ ವಿಷಯವನ್ನು ಪ್ರಸ್ತಾಪಿಸದೇ ನನ್ನ ಬಗ್ಗೆ ನಾನೇನು ಹೇಳಲಿ? ಅಂತಹ ಮಹಾನ್ ಪುಣ್ಯಾತ್ಮನ ಹಿರಿಯ ಮಗನಾಗಿ ಹುಟ್ಟಿದ್ದು ನನ್ನ ಏಳೇಳು ಜನ್ಮದ ಪುಣ್ಯ ಎಂದು ಮತ್ತೊಮ್ಮೆ ಹೇಳಲು ಇಚ್ಛೆಪಡುತ್ತಿದ್ದೇನೆ.


ವಾಸ್ತವವಾಗಿ ನನ್ನ ಆತ್ಮಚರಿತ್ರೆಯನ್ನು 'ಲಂಕೇಶ್' ವಾರ ಪತ್ರಿಕೆಯಲ್ಲಿ ಪ್ರತೀವಾರ ಬರೆಯುವ ಆಲೋಚನೆಯನ್ನು ಮಾಡಿದವರು ಸಂಪಾದಕಿ ಗೌರಿ ಲಂಕೇಶ್ ಅವರು. ಇದನ್ನು ನನ್ನ ಪತ್ರಕರ್ತ ಮಿತ್ರರಾದ ಸದಾಶಿವ ಶೆಣೈರವರು ಅಪ್ಪಾಜಿ ಬದುಕಿದ್ದಾಗಲೇ ನಾಲ್ಕೈದು ಬಾರಿ ನನ್ನ ಬಳಿ ಪ್ರಸ್ತಾಪಿಸಿದ್ದರು. ಅದಕ್ಕೆ ಕೂಡಲೇ ನಾನು ಒಪ್ಪಿಕೊಂಡಿದ್ದರೂ ಕೆಲಸದ ಒತ್ತಡದಿಂದ ಎರಡು ಮೂರು ಬಾರಿ ಮುಂದೂಡಬೇಕಾಯಿತು. ಈಗ ನೋಡಿ ಎಂತಹ ಕಾಕತಾಳೀಯ, ಅಪ್ಪಾಜಿಯ ನಿಧನದ ನಂತರದ ಎರಡೇ ವಾರದಲ್ಲಿ 'ಈ ಅಪ್ಪಾಜಿ'ಯ ಆತ್ಮಚರಿತ್ರೆ ಶುರುವಾಯಿತು. ಅಪ್ಪಾಜಿಯ ಆತ್ಮ ಅನಂತದಲ್ಲಿ ತೇಲಿ ಹೋಗುತ್ತಿದ್ದಂತೇ ನಾನಿಲ್ಲಿ ನನ್ನ ಆತ್ಮವನ್ನು ನಿಮ್ಮ ಮುಂದೆ ತೆರೆದಿಡಲು ಆರಂಭಿಸಿದೆ.



ನಾನು ಅಂತಹ ಒಳ್ಳೆಯ ಮಾತುಗಾರನೇನೂ ಅಲ್ಲ. ಅಥವಾ ಮುಂದೊಂದು ದಿನ ನನ್ನ ಆತ್ಮ ಚರಿತ್ರೆಯನ್ನು ಯಾರಾದರೂ ಬರೆಯುತ್ತಾರೆ ಎಂದು ನಾನು ಡೈರಿಯಲ್ಲಿ ಯಾವುದೇ ಟಿಪ್ಪಣಿಗಳನ್ನೂ ಮಾಡಿಟ್ಟಿರಲಿಲ್ಲ. ಇದನ್ನು 'ಲಂಕೇಶ್' ವಾರಪತ್ರಿಕೆಯ ಬಳಗವದವರ ಒತ್ತಾಯ ಮತ್ತು ಪ್ರೀತಿಗಾಗಿ ಹೇಳುತ್ತಾ ಹೋಗಿದ್ದೇನೆ ಅಷ್ಟೇ. ನನಗೆ ಗೊತ್ತು ನಾನು ಎಲ್ಲವನ್ನೂ ಇಲ್ಲಿ ಹೇಳಲು ಸಾಧ್ಯವಾಗಿಲ್ಲ ಎಂದು. ಆದರೆ ಒಂದು

ನಿರೂಪಣೆ: ಸದಾಶಿವ ಶೆಣೈ

57



ಮಾತು ಹೇಳುತ್ತೇನೆ. ನಾನಿಲ್ಲಿ ಏನು ಹೇಳಿದ್ದೇನೋ ಅದೆಲ್ಲವೂ ನೂರಕ್ಕೆ ನೂರು ಸತ್ಯ ಇದರಲ್ಲಿ ಯಾವುದೇ ಅನುಮಾನ ಬೇಡ. ಆದರೆ ಇದೇ ಸಂದರ್ಭದಲ್ಲಿ ನಾನು ನನ್ನ ಜೀವನ ಮತ್ತು ವೃತ್ತಿ ಜೀವನದಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪಿಸಲು ಮರೆತಿರಲೂಬಹುದು. ಹಾಗೇನಾದರೂ ಆಗಿದ್ದಲ್ಲಿ ಅದಕ್ಕೆ ಸಂಬಂಧಪಟ್ಟವರು ಅನ್ಯಥಾ ಭಾವಿಸದೇ ನನ್ನನ್ನು ಹರಸಬೇಕೆಂದು ಕೋರುತ್ತೇನೆ.

ನನ್ನನ್ನು ನಟನಾಗಿ ಬೆಳೆಸುವಲ್ಲಿ ಅನೇಕ ತಂತ್ರಜ್ಞರು, ನಿರ್ದೇಶಕರು ಹಾಗೂ ಮುಖ್ಯವಾಗಿ ನನ್ನ ಅಭಿಮಾನಿಗಳು ಕಾರಣಕರ್ತರು. ಅವರನ್ನೆಲ್ಲ ನೆನೆಸುವುದು ನನ್ನ ಕರ್ತವ್ಯ.

ಅಪ್ಪಾಜಿಯ ನಿಧನದ ನಂತರ ಏನಾಯಿತು? ಎಂಬುದು ನಿಮಗೆಲ್ಲಾ ಗೊತ್ತೇ ಇದೆ. ಈಗಾಗಲೇ ಅಪ್ಪಾಜಿ ಇಲ್ಲದ ಒಂದು ವರ್ಷ ಕೂಡಾ ಕಳೆದು ಹೋಗಿದೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ನನ್ನ ಅಪ್ಪಾಜಿ ನಿಧನ ಹೊಂದಿದ್ದಾರೆ ಎಂದು ನನಗನ್ನಿಸುವುದೇ ಇಲ್ಲ. ಅವರು ಇಲ್ಲೇ ಎಲ್ಲೋ ಇದ್ದಾರೆ ಎಂಬುದೇ ನನ್ನ ನಂಬಿಕೆ. ಇವತ್ತಿಗೂ ನಮ್ಮ ಮನೆಯವರೆಲ್ಲಾ ಬೆಂಗಳೂರಿನಲ್ಲಿದ್ದರೆ ಪ್ರತೀ ನಿತ್ಯವೂ ಒಂದಲ್ಲಾ ಒಂದು ಸಮಯದಲ್ಲಿ ಅಪ್ಪಾಜಿಯ ಸಮಾಧಿಗೆ ಹೋಗಿ ನಮಸ್ಕರಿಸಿ ಬರುತ್ತೇವೆ. ಬೆಂಗಳೂರಿನಲ್ಲಿದ್ದಾಗ ಒಂದೇ ಒಂದು ದಿನ ಕೂಡಾ ನಾವು ಸಮಾಧಿಗೆ ಭೇಟಿ ನೀಡುವುದನ್ನು ಮಿಸ್ ಮಾಡಿಕೊಂಡಿಲ್ಲ. ಈ ಸಂದರ್ಭದಲ್ಲಿ ನಾನು ಗಮನಿಸಿರುವುದೇನೆಂದರೆ ಬೆಳಗ್ಗಿನ ಜಾವವಾಗಲಿ, ಮಧ್ಯರಾತ್ರಿಯಾಗಲೀ ನಾವು ಅಲ್ಲಿ ಹೋದಾಗ ನೂರಾರು ಅಭಿಮಾನಿಗಳು ಇದ್ದೇ ಇರುತ್ತಾರೆ. ಅವರನ್ನೆಲ್ಲಾ ನೋಡಿದಾಗ ನಿಜಕ್ಕೂ ನಮ್ಮ ದುಃಖ ದೂರವಾಗುತ್ತದೆ. ಬಹುಶಃ ದಿನನಿತ್ಯವೂ ಅಪ್ಪಾಜಿಯ ಸಮಾಧಿ ಬಳಿ ಜನರು ಬರುತ್ತಿರುವುದು ಅವರು ಇನ್ನೂ ಬದುಕಿದ್ದಾರೆ, ಜೀವಂತವಾಗಿದ್ದಾರೆ ಎಂಬುದರ ಲಕ್ಷಣ ಎಂದು ಭಾವಿಸುತ್ತೇನೆ.

ಅಪ್ಪಾಜಿ ಹೋದ ನೋವಿನ ನಡುವೆಯೇ ನಾವೆಲ್ಲಾ ನಿಧಾನವಾಗಿ ವಾಸ್ತವಿಕತೆಗೆ ಮರಳಿದೆವು. ನಾನು ಮತ್ತೆ ಮುಖಕ್ಕೆ ಬಣ್ಣ ಹಚ್ಚಿ ನಟಿಸಲು ಆರಂಭಿಸಿದೆ. ನನ್ನ ಸಹೋದರ ಪುನೀತ್ ಕೂಡಾ ನಟನೆಯಲ್ಲಿ ಮಗ್ನನಾಗಿದ್ದಾನೆ. ಎಲ್ಲೋ ಶೂಟಿಂಗ್‌ನಲ್ಲಿದ್ದಾಗ ಅಪ್ಪಾಜಿಯ ನಿಧನದ ನೋವನ್ನು ಮರೆತು ಸ್ವಲ್ಪ ರಿಲ್ಯಾಕ್ಸ್ ಆಗಿರುತ್ತೇವೆ. ಆದರೆ ಶೂಟಿಂಗ್‌ನಲ್ಲಿ ಕೂಡಾ ಎಲ್ಲೋ ಮೂಲೆಯಲ್ಲಿ ಅಪ್ಪಾಜಿಯ ಫೋಟೋ ನೋಡಿದಾಕ್ಷಣ ದುಃಖ ಉಮ್ಮಳಿಸಿಬರುತ್ತದೆ. ಕಾರಿನಲ್ಲಿ ಹೋಗುವಾಗ ರಸ್ತೆಯ ಎರಡೂ ಬದಿಗಳಲ್ಲಿ ಅಪ್ಪಾಜಿಯ ಫೋಟೋಗಳು, ವಾಲ್‌ಪೋಸ್ಟರ್‌ಗಳು, ಪ್ರತಿಮೆಗಳು .... ಇವೆಲ್ಲವೂ ಅಪ್ಪಾಜಿ ಇನ್ನೂ ನಮ್ಮ ನಡುವೆಯೇ ಇದ್ದಾರೆ ಎಂಬ ಭಾವನೆಯನ್ನು ನನ್ನಲ್ಲಿ ಸೃಷ್ಟಿಸುತ್ತವೆ. ಮುಖ್ಯವಾಗಿ ಹೇಳುತ್ತೇನೆ ಅಪ್ಪಾಜಿ ಇನ್ನಿಲ್ಲ ಎಂದು ಕಲ್ಪಿಸಿಕೊಳ್ಳಲೂ ನನಗೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಅಪ್ಪಾಜಿಯ ನೆನಪಿನಲ್ಲೇ ನನ್ನ ಬದುಕಿನ ಪ್ರಯಾಣವನ್ನು ಮುಂದುವರಿಸುತ್ತಿದ್ದೇನೆ. ಆ ಒಂದು ನಂಬಿಕೆ ಮತ್ತು ನೆನಪು ನನ್ನ ಪಾಲಿಗೆ ಅತ್ಯಂತ ಸುಂದರವಾಗಿದೆ ಮತ್ತು ಸ್ಫೂರ್ತಿದಾಯಕವಾಗಿದೆ.

ನನ್ನ 'ಹಾರ್ಟ್ ಬೀಟ್'ಅನ್ನು ನಿಮಗೆ ತಲುಪಿಸಿದ 'ಲಂಕೇಶ್' ಬಳಗಕ್ಕೆ ನಾನು ಚಿರಋಣಿ. ನನ್ನ 'ಹಾರ್ಟ್ ಬೀಟ್'ಅನ್ನು ಮುಟ್ಟುತ್ತಾ, ನೋಡುತ್ತಾ, ಆನಂದಿಸಿದ ನನ್ನ ಎಲ್ಲ ಪ್ರೀತಿಯ ಓದುಗರಿಗೂ ನಾನು ಆಭಾರಿ. ಈ ಲೇಖನಮಾಲೆ ಇಂದು ಕೊನೆಗೊಂಡರೂ ನನ್ನ ನಿಮ್ಮ ಪ್ರೀತಿಯ ಸೇತುವೆಯಾಗಿ 'ಲಂಕೇಶ್' ಮುಂದೆಯೂ ಕಾರ್ಯನಿರ್ವಹಿಸುತ್ತದೆ ಎಂಬ ನಂಬಿಕೆ ನನ್ನದು.... ನಿಮಗೆಲ್ಲ ಜೀವನದಲ್ಲಿ ಯಶಸ್ಸು, ಪ್ರೀತಿ ಸಿಗಲಿ ಎಂಬುದು ನನ್ನ ಹಾರೈಕೆ...

ಇಂತಿ ನಿಮ್ಮ

ಶಿವರಾಜ್ ಕುಮಾರ್


ನಾಲ್ಕು ಸಿನಿಮಾಗಳ ಸರದಾರ ಯಾದವ್



ಕನ್ನಡ ಚಿತ್ರರಂಗದ ದೊಡ್ಡ ನಿರ್ಮಾಪಕರಾಗಿ ರಮೇಶ್ ಯಾದವ್ ರೂಪುಗೊಳ್ಳುತ್ತಿದ್ದಾರೆ.

ಈ ಮನುಷ್ಯ ಬರಗೂರು ರಾಮಚಂದ್ರಪ್ಪನವರು ನಿರ್ದೇಶಿಸಿದ್ದ 'ಶಾಂತಿ' ಸಿನಿಮಾ ನಿರ್ಮಿಸಿದಾಗ ಇನ್ನು ಮುಂದೆ ರಮೇಶ್ ಯಾದವ್ ಕಲಾತ್ಮಕ ಚಿತ್ರಗಳಿಗೇ ಮೀಸಲಾಗಿರುತ್ತಾರೆ ಎಂದು ಕೆಲವರು ಲೆಕ್ಕಹಾಕಿದ್ದರು. ಅದರಲ್ಲೂ ಅವರ ಸಹೋದರ ಚಿಕ್ಕಿನ ಕಣ್ಣು ರಾಜೇಂದ್ರ ಕೊಲೆಯಾದ ನಂತರವಂತೂ ರಮೇಶ್ ಯಾದವ್ ಕತೆ ಮುಗಿದೇಹೋಯಿತು ಎಂದೂ ಗಾಂಧಿನಗರದವರು ಢಂಗೂರ ಸಾರಿದ್ದರು. ಆದರೆ ಈಗ ರಮೇಶ್ ಯಾದವ್ ಗಾಂಧಿನಗರದಲ್ಲಿ ಅಚ್ಚರಿಮೂಡುವಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಒಂದೆಡೆ 'ಮುಂಗಾರು ಮಳೆ'ಯ ಯಶಸ್ವಿ ಜೋಡಿ ಗಣೇಶ್ ಮತ್ತು ಸಂಜನಾಗಾಂಧಿ ಕಾಲ್‌ಶೀಟ್ ಅನ್ನು ತಮ್ಮ 'ಕೃಷ್ಣ' ಸಿನಿಮಾಗೆ ಪಡೆಯುವಲ್ಲಿ ಯಶಸ್ವಿಯಾಗಿರುವ ಯಾದವ್, ಇನ್ನೊಂದು ಕಡೆ ಮತ್ತೊಂದು ಹಿಟ್ ಚಿತ್ರವಾದ 'ದುನಿಯಾ'ದ ನಾಯಕಿ ರಶ್ಮಿಯನ್ನು ಶೃತಿಯೊಂದಿಗೆ ಹಾಕಿಕೊಂಡು 'ಅಕ್ಕ ತಂಗಿ' ಸಿನಿಮಾ ತಯಾರಿಸುತ್ತಿದ್ದಾರೆ. ಮತ್ತೊಂದೆಡೆ, ನಾಯಕ ನಟ ಪ್ರೇಮ್ ನಟಿಸುತ್ತಿರುವ 'ಜನುಮ ಜನುಮದಲ್ಲೂ' ಎಂಬ ಚಿತ್ರವನ್ನೂ ನಿರ್ಮಿಸಲು ಸಜ್ಜಾಗಿದ್ದಾರೆ. ಇದಿಷ್ಟೇ ಅಲ್ಲದೆ ದರ್ಶನ್ ನಟಿಸಲಿರುವ 'ಕಪಾಲಿ' ಚಿತ್ರವನ್ನೂ ಯಾದವ್ ಆರಂಭಿಸಲಿದ್ದಾರೆ. ಈ ಸಿನಿಮಾಗಳ ಒಂದು ವಿಶೇಷತೆ ಯಾವುದೆಂದರೆ 'ಜೊತೆಜೊತೆಯಲಿ' ಚಿತ್ರಕ್ಕೆ ಸಂಗೀತ ನೀಡಿದ್ದ ಹರಿಕೃಷ್ಣ 'ಕೃಷ್ಣ' ಮತ್ತು 'ಜನುಮ ಜನುಮದಲ್ಲೂ' ಚಿತ್ರಗಳಿಗೂ ಸಂಗೀತ ಸಂಯೋಜಿಸುತ್ತಿರುವುದು.ಈ ಹಿಂದೆ 'ಕೋಟಿ' ನಿರ್ಮಾಪಕರು ಎಂದೆಲ್ಲ ಹೆಸರು ಮಾಡಿದ್ದ ರಾಮು, ರಾಕ್‌ಲೈನ್ ವೆಂಕಟೇಶ್ ಮೊದಲಾದವರು ಈಗ ತೆರೆಮರೆಗೆ ಸರಿದಿರುವಾಗ ರಮೇಶ್ ಯಾದವ್ ನಾಲ್ಕೈದು ಸಿನಿಮಾಗಳನ್ನು ಒಮ್ಮೆಲೇ ಆರಂಭಿಸಿರುವುದು ಗಾಂಧಿನಗರದವರ ಹುಬ್ಬೇರಿಸಿದೆ.

'ಮೇಷ್ಟ್ರ' ಕ್ಯಾನ್ ಪಾಠ



ಮಾಜಿ ಮೇಷ್ಟ್ರು ಮತ್ತು ಹಾಲಿ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರನ್ನು ಉದ್ಯಮದ ಕೆಲವರೂ ಮೇಷ್ಟ್ರು ಎಂದು ಕರೆಯುತ್ತಾರೆ. ಹಾಗೆ ಕರೆಸಿಕೊಳ್ಳುವುದನ್ನು ನಾಗತಿಹಳ್ಳಿ ಕೂಡ ಇಷ್ಟಪಡುತ್ತಾರೆ. ಆದರೆ ಇದರ ಪರಿಣಾಮವೇನೆಂದರೆ, ಹಲವೊಮ್ಮೆ ತಾವು ಈಗ ನಿರ್ದೇಶಕ ಎಂಬುದನ್ನೇ ಮರೆತು ಮೇಷ್ಟ್ರರ ಗತ್ತಿನಲ್ಲಿ ಮಾತನಾಡಲು ಪ್ರಾರಂಭಿಸುತ್ತಾರೆ. ಮೊನ್ನೆ ನಡೆದದ್ದೂ ಅದೇ.

ಅದು ನಾಗತಿಹಳ್ಳಿ ನಿರ್ದೇಶನದ, ಸದ್ಯದಲ್ಲೇ ಬಿಡುಗಡೆಯಾಗಲಿರುವ 'ಮಾತಾಡ್ ಮಾತಾಡು ಮಲ್ಲಿಗೆ' ಚಿತ್ರದ ಪತ್ರಿಕಾಗೋಷ್ಠಿ. ಆದರೆ ಅಂದು 'ಮಾಮಾಮ' ಚಿತ್ರದ ಬಗ್ಗೆ ಅದರ ನಾಯಕ ನಟ ವಿಷ್ಣುವರ್ಧನ್ ಮಾತನಾಡುವುದಿರಲಿ, ಸ್ವತಃ ನಾಗತಿಹಳ್ಳಿ ಕೂಡ ಅಪ್ಪಿತಪ್ಪಿಯೂ ಚಕಾರವೆತ್ತಲಿಲ್ಲ. ಬದಲಿಗೆ ಕ್ಯಾನ್ ಚಿತ್ರೋತ್ಸವಕ್ಕೆ ಮೊನ್ನೆ ಭೇಟಿ ನೀಡಿದ್ದ ನಾಗತಿಹಳ್ಳಿ ಬರೀ ಅದರ ಬಗ್ಗೆಯೇ ಮಾತನಾಡಿದರು. "ಕನ್ನಡ ಚಿತ್ರರಂಗಕ್ಕೆ ಇದೀ ದೇಶದಲ್ಲೇ ಅದ್ಭುತವಾದ ಮಾರುಕಟ್ಟೆಯಿದೆ. ಅದನ್ನು ನಾವು ಸದುಪಯೋಗಪಡಿಸಿಕೊಳ್ಳುತ್ತಿಲ್ಲ. ಆ ಚಿತ್ರೋತ್ಸವದವರೂ ಅಷ್ಟೇ, ಕನ್ನಡದವರನ್ನು ಅಸಡ್ಡೆಯಿಂದ ನೋಡುತ್ತಾರೆ. ಆದ್ದರಿಂದ ವಿದೇಶಗಳಲ್ಲಿ ನಡೆಯುವ ಚಿತ್ರೋತ್ಸವಗಳಲ್ಲಿ ಕನ್ನಡ ಚಿತ್ರಗಳು ಭಾಗವಹಿಸಲು ಅನುಕೂಲವಾಗುವಂತೆ ಒಂದು ಒಕ್ಕೂಟ ನಿರ್ಮಿಸಿಕೊಳ್ಳಬೇಕು" ಎಂದೆಲ್ಲ ಪಾಠ ಬಿಗಿದರು ನಾಗತಿಹಳ್ಳಿ.

ನಾಗತಿಹಳ್ಳಿಗೆ ದಿಢೀರನೆ ಕನ್ನಡ ಚಿತ್ರೋದ್ಯಮಕ್ಕೆ ಇರುವ ಮಾರುಕಟ್ಟೆಯ ಬಗ್ಗೆ ಮತ್ತು ಅದಕ್ಕೆ ಸಿಗುತ್ತಿರುವ ತಿರಸ್ಕಾರದ ಬಗ್ಗೆ ಕಾಳಜಿ ಹುಟ್ಟಿರುವುದು ಮೆಚ್ಚಲೇಬೇಕಾದ್ದು, ಆದರೆ ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರು 'ಮೇಷ್ಟ್ರೆ'?

ನಿವಾಸಕ್ಕೆ ನಿಧಾನಗತಿ



ಸುದೀಪ್ ಅವರ ಅಭಿರುಚಿಯನ್ನು ಮೆಚ್ಚಲೇಬೇಕು. ಒಂದೆಡೆ ಮಚ್ಚು ಲಾಂಗುಗಳ ಆರ್ಭಟ, ಇನ್ನೊಂದೆಡೆ ಲವ್ ಸ್ಟೋರಿಗಳ ಸಂಭ್ರಮ. ಆದರೆ ಸದ್ಯದ ಇವೆರಡು ಹಿಟ್ ಫಾರ್ಮುಲಾಗಳಿಗೆ ಬಲಿಯಾಗದೆ, ಸುದೀಪ್ 'ನಂ.73, ಶಾಂತಿನಿವಾಸ' ಎಂಬ ವಿಭಿನ್ನ ಚಿತ್ರವನ್ನು ತಮ್ಮ ಎರಡನೆ ನಿರ್ದೇಶನದ ಕೊಡುಗೆಯಾಗಿ ನೀಡಿದ್ದಾರೆ.

ಈ ಇದೀ ಚಿತ್ರದಲ್ಲಿ ಒಂದೇ ಒಂದು ದ್ವಂದ್ವಾರ್ಥದ, ಅಶ್ಲೀಲದ ಸಂಭಾಷಣೆಯಾಗಲಿ, ದೃಶ್ಯವಾಗಲಿ ದುರ್ಬೀನು ಹಾಕಿ ಹುಡುಕಿದರೂ ಸಿಗಲಾರದು. ಹಾಗೆಯೇ ನೃತ್ಯ ಮತ್ತು ಗ್ಲಾಮರ್ ಹೆಸರಿನಲ್ಲಿ ನಾಯಕಿಯ ಅಂಗಾಂಗಗಳನ್ನು ತೋರಿಸುವ ಸೀನ್‌ಗಳೂ ಇಲ್ಲ. ಇಂತಹ ಚಿತ್ರವನ್ನು ಮಾಡಬೇಕಾದರೆ ಒಂದು ರೀತಿಯಲ್ಲಿ ಧಮ್ ಬೇಕು ಎಂಬು ದಂತೂ ನಿಜ.

ಚಿತ್ರದ ಕಥೆ ತುಂಬಾ ಚಿಕ್ಕದಾಗಿದೆ. ಸಣ್ಣ ಸಣ್ಣ ಭಿನ್ನಾಭಿಪ್ರಾಯಗಳನ್ನು ಮರೆತು ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ ಆನಂದದಿಂದ ಬಾಳಬೇಕು ಎಂಬ ಸಂದೇಶವನ್ನು ಅವಿಭಕ್ತ ಕುಟುಂಬದ ಮೂಲಕ ನಿರೂಪಿಸಿದ್ದಾರೆ. ಆದರೆ ಕಥಾಸ್ವರೂಪ ಇವತ್ತಿನ ಸಂದರ್ಭಕ್ಕೆ ಸ್ವಲ್ಪ ಹಳೆಯದು ಅನ್ನಿಸುತ್ತದೆ. ಅದೇನೇ ಇರಲಿ, ಸುದೀಪ್ ತನ್ನ ಅಭಿನಯವನ್ನು ಅಂಡರ್ ಪ್ಲೇ ಮಾಡಿ ಪ್ರೇಕ್ಷಕರ ಹೃದಯವನ್ನು ತಟ್ಟುತ್ತಾರೆ. ಅಷ್ಟೇ ಅಲ್ಲ ಹಿರಿಯ ನಟರಾದ ಶ್ರೀನಿವಾಸಮೂರ್ತಿ, ಹಿರಣ್ಣಯ್ಯ, ರಮೇಶ್ ಭಟ್‌ರಿಂದ ಒಳ್ಳೆಯ ಅಭಿನಯವನ್ನು ಪಡೆಯುವಲ್ಲಿಯೂ ಯಶಸ್ವಿಯಾಗಿದ್ದಾರೆ. ಪುಟ್ಟ ಪಾತ್ರದಲ್ಲಾದರೂ ಅರುಣ್ ಸಾಗರ್ ಮನಮುಟ್ಟುವಂತೆ ಅಭಿನಯಿಸಿದ್ದಾರೆ. ಆರಂಭದಿಂದಲೂ ಚಿತ್ರ ನಿಧಾನಗತಿಯಲ್ಲಿ ಚಲಿಸಿದರೂ ಎಲ್ಲೂ ಬೋರ್ ಹೊಡೆಯುವುದಿಲ್ಲ ಎಂಬುದು ಇನ್ನೊಂದು ಮೆಚ್ಚಲೇಬೇಕಾದ ಸಂಗತಿ. ಒಟ್ಟಿನಲ್ಲಿ ಮನೆಮಂದಿಯಲ್ಲಾ ಕೂತು ಆನಂದಿಸುವಂತಹ ಚಿತ್ರವನ್ನು ಸುದೀಪ್ ನೀಡಿದ್ದಾರೆ.

'ಗಾಳಿಪಟ'ಕ್ಕೆ ಗಣೇಶನೇ ಹೀರೋ



'ಮುಂಗಾರು ಮಳೆ'ಯ ನಿರ್ದೇಶಕ ಯೋಗರಾಜ್ ಭಟ್ ತಮ್ಮ ಮುಂದಿನ ಚಿತ್ರಕ್ಕೆ ಪುನೀತನನ್ನು ಹಾಕಿಕೊಳ್ಳುವ ಆಶೆ ಹೊಂದಿದ್ದರು. ಆದರೆ ಪುನೀತ್ ಈಗಾಗಲೇ ತನ್ನ ಕಾಲ್‌ಶೀಟ್ ಅನ್ನು ಮತ್ತೊಬ್ಬರಿಗೆ ನೀಡಿರುವುದರಿಂದ, ಭಟ್ಟರು ಮತ್ತೆ ತಮ್ಮ ಹಳೇ ಹೀರೋ ಗಣೇಶನನ್ನೇ ಆಯ್ಕೆಮಾಡಿಕೊಂಡಿದ್ದಾರೆ. ಅಂದಹಾಗೆ, 'ಮುಂಗಾರು ಮಳೆ'ಗೂ ಪುನೀತ್ ಮೊದಲ ಆಯ್ಕೆಯಾಗಿದ್ದರು, ಆದರೆ ವಿವಿಧ ಕಾರಣಗಳಿಂದ ಇಂದಿನಂತೆ ಅಂದೂ ಆ ಅವಕಾಶ ಗಣೇಶನ ಪಾಲಾಗಿತ್ತು.

ಈಗ ಭಟ್ ಮತ್ತು ಗಣೇಶ್ ಮತ್ತೆ ಒಂದುಗೂಡಿರುವುದರಿಂದ ಅವರಿಬ್ಬರ ಮೇಲಿನ ಒತ್ತಡವೂ ಹೆಚ್ಚಾಗಿದೆ. ಏಕೆಂದರೆ ಎಲ್ಲರೂ ಇವರಿಬ್ಬರು ಮತ್ತೊಂದು ಯಶಸ್ವಿ ಚಿತ್ರವನ್ನು ನೀಡುತ್ತಾರೆಯೇ ಎಂದು ಕಾದು ನೋಡುತ್ತಾರೆ. ಒಟ್ಟಿನಲ್ಲಿ 'ಗಾಳಿಪಟ' ಸಿನಿಮಾ ಗಾಳಿಪಟ ಹಾರಿಸಿದ್ದಷ್ಟು ಸುಲಭವಲ್ಲ.


ಸುಧಾರಾಣಿಯ ತಮ್ಮ ಮುರಳಿಯ ಆರಂಗೇಟ್ರಂ




ಬಹ... ಹಿಂದೆಯೇ ನಮ್ಮ ಪತ್ರಿ... ಸುಧಾರಾಣಿಯ ಸಹೋದ... ಮುರಳಿ ಚಿತ್ರ ನಿರ್ದೇಶನ... ಇಳಿಯಲಿದ್ದಾರೆ ಎಂದು ವರ... ಮಾಡಿತ್ತು, ಅದೀಗ ನಿಜವಾಗುತ್ತಿ... ಮುರಳಿಯವರ ಮೊದಲ ಚಿತ್ರ... ಹೆಸರು 'ಬಾ ಬೇಗ ಚಂದಮಾಮಾ'... ಇದರ ನಾಯಕನಟನಾಗಿ 'ಶಿಷ್ಯ' ಚಿತ್ರ... ದೀಪಕ್ ಆಯ್ಕೆಯಾಗಿದ್ದಾ...

ವಿಶೇಷವೇನೆಂದರೆ, ಮುರಳಿ ಮೊದ... ಪ್ರಯತ್ನದಲ್ಲೇ ಆಲ್‌ರೌಂಡರ್ ಎನಿಸಿಕೊಳ್ಳ... ಹೊರಟಿದ್ದಾರೆ. ಈ ಚಿತ್ರದ ಕತೆ, ಚಿತ್ರಕ... ಸಂಭಾಷಣೆ, ಸಾಹಿತ್ಯ, ಸಂಗೀತ... ಎಲ್ಲದ... ಜವಾಬ್ದಾರಿಯನ್... ಮುರಳಿಯವ... ವಹಿಸಿಕೊಂಡಿದ್ದಾ... ಚೊಚ್... ಪ್ರಯತ್ನ... ಇದು ಸ್ವ... ಭಾರವ... ಅಂದಹಾ... ಈ ಸಿನಿಮಾದ... ಸುಧಾರಾ... ಎಲ... ಕಾಣಿಸಿಕೊಳ್ಳುತ್ತಿ...

ಇಬ್ಬರ ಟೆನ್ಷನ್





ಮೆಗಾಧಾರಾವಾಹಿಗಳ ಎಕ್ಸ್‌ಪರ್ಟ್ ಟಿ.ಎನ್. ಸೀತಾರಾಂ ಮತ್ತು ನಟ ಕಮ್ ನಿರ್ದೇಶಕ ರಮೇಶ್ ಇಬ್ಬರೂ ಟೆನ್ಷನ್‌ನಲ್ಲಿದ್ದಾರೆ. ಕಾರಣ ಇಷ್ಟೇ. ಇವರಿಬ್ಬರ ನಿರ್ದೇಶನದ ಎರಡನೇ ಚಿತ್ರಗಳು ಸಂಪೂರ್ಣಗೊಂಡಿದ್ದು ಇನ್ನೇನು ತೆರೆಕಾಣಲಿವೆ.

ಸೀತಾರಾಂ ನಿರ್ದೇಶನದ 'ಮೀರಾ ಮಾಧವ ರಾಘವ'ದಲ್ಲಿ ರಮ್ಯ ವಿಭಿನ್ನ ಪಾತ್ರದಲ್ಲಿ ನಟಿಸಿದ್ದಾಳೆ ಎಂಬುದು ಗಾಂಧಿನಗರದವರ ಕುತೂಹಲವನ್ನು ಕೆರಳಿಸಿದ್ದರೆ, ರಮೇಶ್ ತಮ್ಮ 'ಸತ್ಯವಾನ್ ಸಾವಿತ್ರಿ'ಯನ್ನು ತಮ್ಮ ಮೊದಲನೆ ಚಿತ್ರ 'ರಾಮ ಶ್ಯಾಮ ಭಾಮ' ತರಹವೇ ಕಾಮಿಡಿಯಾಗಿ ನಿರೂಪಿಸಿರುವುದರಿಂದ ಸಹಜವಾಗಿಯೇ ಅದರ ಬಗ್ಗೆ ಆಸಕ್ತಿ ಇದೆ.

ಸೀತಾರಾಮ್‌ರವರ ಚೊಚ್ಚಲ ನಿರ್ದೇಶನವಾದ 'ಮತದಾನ'ಕ್ಕೆ ಗಲ್ಲಾಪೆಟ್ಟಿಗೆಯಲ್ಲಿ ಉತ್ಸಾಹದ ಪ್ರತಿಕ್ರಿಯೆ ಏನು ಬಂದಿರಲಿಲ್ಲ, ಇನ್ನು ರಮೇಶ್‌ರವರ 'ರಾಮ ಶ್ಯಾಮ ಭಾಮ' ಕೂಡ 'ಎ' ಸೆಂಟರ್‌ಗಳಲ್ಲಿ ಮಾತ್ರ ಗೆದ್ದಿತ್ತು, ಇವರಿಬ್ಬರ ಎರಡನೆ ಪ್ರಯತ್ನಕ್ಕೆ ಎಂತಹ ಪ್ರತಿಕ್ರಿಯೆ ಬರಬಹುದು ಎಂಬುದೇ ಈಗ ಗಾಂಧಿನಗರದಲ್ಲಿ ಚರ್ಚೆಯಾಗುತ್ತಿರುವ ವಿಷಯ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh78@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44